ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 47

ನವೆಂಬರ್ 23, 2008

ರೂ. 5/-



ಕೃಷಿ ಇಲಾಖೆಗೆ ಕೋಮುವಾದದ ವೈರಸ್




ಕೆ.ಎಂ.ಎಫ್. ಹಾಲಿಗೆ ಸರ್ಕಾರದ ಹುಳಿ !



ಇಳಿದ ತೈಲ ಬೆಲೆ ಆದರೂ ನಿಲ್ಲದ ಸುಲಿಗೆ

ಜಾಗತಿಕ ಆರ್ಥಿಕ ಬಿಕ್ಕಟ್ಟು ಪಾರಾಗುವ ಬಗೆ ಹೇಗೆ?

ವಿದ್ಯುತ್ ಕೊರತೆ : ಅರಾಜಕತೆಯ ಕಗ್ಗತ್ತಲು



ಸೌಹಾರ್ದ ಕರ್ನಾಟಕ ರಾಜ್ಯೋತ್ಸವಕ್ಕೆ ಚಾಲನೆ

ಕೋಮುವಾದ-ಭಯೋತ್ಪಾದನೆ ವಿರುದ್ಧ ಸಮರ

ಪರಿಸರ ಮತ್ತು ಸಾಮ್ರಾಜ್ಯಶಾಹಿ

ನೋಟ



ಡಾ. ಜಿ. ಭಾಸ್ಕರ ಮಯ್ಯ

ದೇಶದಲ್ಲಿ ದೊಡ್ಡಮಟ್ಟದ ಔದ್ಯೋಗೀಕರಣ ನಡೆಯುವುದು ಅತ್ಯಗತ್ಯ. ಇದನ್ನು ಗಾಂಧಿವಾದಿಗಳಂತೆ ಅಲ್ಲಗಳೆಯುವರು ಪ್ರಾಯಃ ಯಾರೂ ಇಲ್ಲ, ಆದರೆ ಔದ್ಯೋಗೀಕರಣಕ್ಕೂ ಪರಿಸರಕ್ಕೂ ಒಂದು ಸ್ಪಷ್ಟ ನಿಕಟ ಸಂಬಂಧವಿದೆ ಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಔದ್ಯೋಗೀಕರಣದ ಹೆಸರಿನಲ್ಲಿ ಪರಿಸರದ ಬಗ್ಗೆ ಯಾವುದೇ ಕಾಳಜಿಯನ್ನು ವಹಿಸದಿರುವ ರಾಜಕೀಯ ಒಂದಾದರೆ, ಪರಿಸರವಾದದ ಹೆಸರಿನಲ್ಲಿ ಪ್ರತಿಯೊಂದು ಬಗೆಯ ಔದ್ಯೋಗೀಕರಣವನ್ನು ನಿರಾಕರಿಸುವುದೂ ಇನ್ನೊಂದು ಬಗೆಯ ರಾಜಕೀಯ.

ಎರಡನೆಯ ಬಗೆಯ ರಾಜಕೀಯ ಈ ಹಿಂದೆ ಪ್ರಖರವಾಗಿತ್ತು. ಕಾರಂತರಂತಹ ಮೇರು ಸಾಹಿತಿಗಳೇ ಕೈಗಾ ಅಣುವಿದ್ಯುತ್ ಸ್ಥಾವರವನ್ನು ವಿರೋಧಿಸಿದ್ದರು. ಆ ಕಾಲಘಟ್ಟದಲ್ಲಿ ಪರಿಸರವಾದದ ಮುಖವಾಡದಲ್ಲಿ ಮೂರನೆಯ ಜಗತ್ತಿನಲ್ಲಿ ವೇಗವಾಗಿ ಸಾಗುತ್ತಿದ್ದ ದೇಶಿಯ ಔದ್ಯೋಗೀಕರಣವನ್ನು ತಡೆಯಲು ಅಂತೆಯೇ ತಮ್ಮ ಸರಕುಗಳಿಗೆ ನಿರಂತರವಾಗಿ ಆ ದೇಶಗಳ ಮಾರುಕಟ್ಟೆಯನ್ನು ಉಪಯೋಗಿಸಿಕೊಳ್ಳಲು ಅಮೇರಿಕಾದಂತಹ ಅಭಿವೃದ್ಧಿ ಹೊಂದಿದ ದೇಶಗಳಿಂದ ಪರಿಸರವಾದ ನಾಗಾಲೋಟದಿಂದ ದಶದಿಕ್ಕುಗಳಿಗೂ ಹರಡಿತು.

ಆದರೆ, ಇತ್ತೀಚಿಗಿನ ಎರಡು ದಶಕಗಳ ಅವಧಿಯಲ್ಲಿ ಜಗತ್ತಿನ ನಕ್ಷೆಯೇ ಬದಲಾಗಿದೆ. ಇಡೀ ಜಗತ್ತಿನ ಮೇಲೆ ಬಹುತೇಕ ಬಹುರಾಷ್ಟ್ರೀಯ ಕಂಪೆನಿಗಳು ಏಕಸ್ವಾಮ್ಯವನ್ನು ಸಾಧಿಸಿವೆ. ಶೇ. 90 ಪೇಟೆಂಟ್‌ಗಳನ್ನು ಜಿ-8 ದೇಶಗಳ ಬಹುರಾಷ್ಟ್ರೀಯ ಕಂಪೆನಿಗಳೇ ತಮ್ಮದಾಗಿಸಿಕೊಂಡಿವೆ. ಯಾರ ನೆಲವೇ ಆಗಿರಲಿ ಅಲ್ಲಿ ಅವರು ತಮ್ಮ ಕಾರ್ಖಾನೆಗಳನ್ನು ಸ್ಥಾಪಿಸುತ್ತಾರೆ. ಬಹುತೇಕ ದೇಶಗಳ ಸರಕಾರಗಳು ಬಹುರಾಷ್ಟ್ರೀಯ ಕಂಪೆನಿಗಳ ದಲ್ಲಾಳಿಗಳೇ ಆಗಿರುವುದರಿಂದ ಅವರಿಗೆ ಬೇಕಾದಂತೆ ಕಾನೂನುಗಳನ್ನು ರೂಪಿಸಿ, ಲಕ್ಷಾಂತರ ಎಕ್ರೆ ಜಮೀನನ್ನು ಒತ್ತುವರಿ ಮಾಡಿಕೊಂಡು ಆ ಕಂಪೆನಿಗಳಿಗೆ ಹಸ್ತಾಂತರಿಸಿ ಬಿಡುತ್ತಾರೆ. ಅವರು ಸ್ಥಾಪಿಸುವ ಕಾರ್ಖಾನೆಗಳ ಹಾರು ಬೂದಿ, ವಿಷಾನಿಲ, ಮಾರಕ ತ್ಯಾಜ್ಯಗಳನ್ನು ನಾಶಪಡಿಸುವ, ವಿಲೇವಾರಿ ಮಾಡುವ ಯಾವ ಜವಾಬ್ದಾರಿಯೂ ಆ ಕಂಪೆನಿಗಳಿಗಿರುವುದಿಲ್ಲ. ದೇಶಿಯ ಬಂಡವಾಳಶಾಹಿಗಳಿಗಂತೂ ಮೊದಲೇ ಇಲ್ಲ.

ಈ ಬಗ್ಗೆ ವಿಶ್ವಸಂಸ್ಥೆ ಅಂತರರಾಷ್ಟ್ರೀಯ ಸ್ಥರದಲ್ಲಿ ಸಾಕಷ್ಟು ಕೆಲಸ ಮಾಡಿದೆ. 1972 ರ ಮೊದಲ ಪೃಥ್ವಿ ಸಮ್ಮೇಳನ 'ಸ್ಟಾಕ್‌ಹೋಮ್'ನಲ್ಲಿ ನಡೆಯಿತು. ಅಲ್ಲಿ ನಡೆದ ಕೆಲವು ಮುಖ್ಯ ಚರ್ಚೆಯ ವಿಷಯಗಳು ಈ ಕೆಳಗಿನಂತಿವೆ.

1. ಪರಿಸರದ ರಕ್ಷಣೆ - ಮುಖ್ಯವಾಗಿ ವಾಯುಮಾಲಿನ್ಯ ಮತ್ತು ಓಜೋನ್ ಪದರದ ರಕ್ಷಣೆ (ಈಗಾಗಲೇ ಅದು ಸಾಕಷ್ಟು ಬಿರುಕು ಬಿಟ್ಟಿದೆ.)
2. ಸಂಪನ್ಮೂಲಗಳ ರಕ್ಷಣೆ (ಇದರಲ್ಲಿ ಕಾಡುಗಳ ಸಂರಕ್ಷಣೆ, ಭೂ ಸವೆತ, ಮರುಭೂಮಿ ವಿಸ್ತರಿಸುವುದನ್ನು ತಡೆಯುವುದು)
3. ಜೀವ ವೈವಿಧ್ಯಗಳ ರಕ್ಷಣೆ
4. ಶುದ್ಧ ಜಲಮೂಲಗಳ ರಕ್ಷಣೆ
5. ಹಾನಿಕಾರಕ ಹೊಗೆಯುಗುಳುವ ಕಾರ್ಖಾನೆ, ವಾಹನಗಳನ್ನು ನಿರ್ಬಂಧಕ್ಕೊಳಪಡಿಸುವುದು.
6. ಜೀವನ ಮತ್ತು ಮನುಷ್ಯನ ಆರೋಗ್ಯದಲ್ಲಿ ಗುಣಾತ್ಮಕ ಪರಿವರ್ತನೆಯನ್ನು ತರಲು ಪ್ರಯತ್ನಿಸುವುದು.
7. ಬಡತನ ನಿವಾರಣೆ ಮತ್ತು ಪರಿಸರ ಹಾನಿಯನ್ನು ತಡೆಗಟ್ಟುವುದು.

ಆ ನಂತರ ನಡೆದ ಪ್ರಮುಖ ಅಂತರಾಷ್ಟ್ರೀಯ ಸಮ್ಮೇಳನವು 'ರಿಯೊ - ಡಿ - ಜನೆರೊ' ದಲ್ಲಿ (11 ಜೂನ್, 1992) ಜರುಗಿತು. ಅದರ ಮುಖ್ಯ ಉದ್ದೇಶ ಈ 'ಪರಿಸರ'ದ ಪ್ರಶ್ನೆಯಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವೆ ಹೊಂದಾಣಿಕೆ ಮಾಡಿಕೊಂಡು ಸಮರೋಪಾದಿಯಲ್ಲಿ ಕೆಲಸ ಮಾಡುವ ಅವಶ್ಯಕತೆಯಿಂದ ಕೂಡಿದ್ದಾಗಿತ್ತು. 130 ದೇಶಗಳು ಇದರಲ್ಲಿ ಭಾಗವಹಿಸಿದ್ದವು. ಪೃಥ್ವಿಯನ್ನು ರಕ್ಷಿಸುವುದು ಪೃಥ್ವಿಯ ನಾಗರಿಕರೆಲ್ಲರ ಕರ್ತವ್ಯ, ಎಲ್ಲ ದೇಶಗಳ ಕರ್ತವ್ಯ.

ಈ ಅವಶ್ಯಕ ಮಹತ್‌ಕಾರ್ಯಕ್ಕಾಗಿ ಯುರೋಪಿನ ಕೆಲವು ದೇಶಗಳು ಮತ್ತು ಜಪಾನ್ - ಹಣಕಾಸಿನ ನೆರವು ಕೊಡುವುದಾಗಿ ಘೋಷಿಸಿದವು. ಆದರೆ ಅಮೆರಿಕಾದ ರಾಷ್ಟ್ರಪತಿ ಬುಶ್ ಇವಾವುದನ್ನು ಒಪ್ಪಲೇ ಇಲ್ಲ. ಆತ ಬೊಗಳಿದ್ದು ಹೀಗೆ 'ಅಮೆರಿಕಾದ ನಾಗರಿಕರ ಹಿತದ ವಿರುದ್ಧ ಯಾವುದೇ ಒಪ್ಪಂದ ಮಾಡಿಕೊಳ್ಳಲು ನಾನು ತಯಾರಿಲ್ಲ'. ಭೂಮಿ ಸಮ್ಮೇಳನದ ಉದ್ದೇಶ ಪೃಥ್ವಿಯ ಶುದ್ಧೀಕರಣ, ಪೃಥ್ವಿಯನ್ನು ಅತ್ಯಂತ ಅತ್ಯಾಚಾರಕ್ಕೆ ಒಳಪಡಿಸಿದ್ದು ಅಮೆರಿಕಾ. ಆದರೆ ಇದನ್ನು ಸರಿಪಡಿಸುವ ಬಗ್ಗೆ ಯಾವುದೇ ಬಗೆಯಲ್ಲಿ ಹಣ ಖರ್ಚು ಮಾಡಲು ಅದು ತಯಾರಿಲ್ಲ. ಅಭಿವೃದ್ಧಿಶೀಲ ದೇಶಗಳು ಎಷ್ಟು ಶ್ವಾಸ ಖರ್ಚು ಮಾಡಿದರೂ ಯಾವುದೇ ನಿರ್ಣಯಕ್ಕೆ ಬರುವಲ್ಲಿ ಭೂಮಿ ಸಮ್ಮೇಳನ ವಿಫಲವಾಯಿತು. ಎಷ್ಟೇ ಒತ್ತಾಯಿಸಿದರೂ ಅಭಿವೃದ್ಧಿಶೀಲ ದೇಶಗಳಿಗೆ ಹಣಕಾಸಿನ ನೆರವು ನೀಡಲು ನಿರ್ಣಯಿಸಲಾದ ಕ್ರಿ.ಶ. 2000 ದ ತನಕದ ಗಡುವನ್ನು ಸಹ ಒಪ್ಪಲು ಅಮೆರಿಕಾ ಸಿದ್ಧವಾಗಲಿಲ್ಲ.

ಆದರೆ, ಈ ಜಿ-7 ದೇಶಗಳು ಪದೇ ಪದೇ ಹೇಳುತ್ತಿದ್ದುದು ಏನು? ಅಭಿವೃದ್ಧಿ ಹೊಂದುತ್ತಿರುವ ಹಿಂದುಳಿದ ಎಲ್ಲಾ ದೇಶಗಳಲ್ಲಿ ಜನಸಂಖ್ಯೆ ಹೆಚ್ಚುತ್ತಿದೆ. ಬಡತನ ಹೆಚ್ಚುತ್ತಿದೆ. ಅವರು ತಿನ್ನುವುದು ಜಾಸ್ತಿ. ಆದ್ದರಿಂದ ಆಹಾರದ ಕೊರತೆ. ತಪ್ಪೆಲ್ಲಾ ಅವರದೆ. ಆದ್ದರಿಂದ ಅವರೇ ಈ ಬಗ್ಗೆ ತಮ್ಮ ದೇಶದ ವಾತಾವರಣದ ಅಂಗಾರಾಮ್ಲ ಇಂಗಾಲದ ಡೈ ಆಕ್ಸೈಡ್ (Co2) ದ ಪ್ರಮಾಣವನ್ನು ಕಡಿಮೆ ಮಾಡಬೇಕು. ಆದರೆ, ಈ ನತದೃಷ್ಟ ದೇಶಗಳಲ್ಲಿರುವುದೆಲ್ಲಾ ಅಭಿವೃದ್ಧಿ ಹೊಂದಿದ ಅದರಲ್ಲೂ ಅಮೆರಿಕಾದ ಕಂಪೆನಿಗಳೇ - ಕಟು ಸತ್ಯವನ್ನು ಮನವರಿಕೆ ಮಾಡಿಕೊಡಲು, ಜಾಡಿಸಿ ಒದೆಯಲು ಅಭಿವೃದ್ಧಿಶೀಲ ದೇಶಗಳಿಗೆ ಸಾಮರ್ಥ್ಯವಿಲ್ಲ. ಆದಾಗ್ಯೂ ಅಂದಿನ ಚೀನಾದ ವಿಜ್ಞಾನ ಮತ್ತು ಟೆಕ್ನಾಲಾಜಿಯ ಉಪಮುಖ್ಯಮಂತ್ರಿ 'ತಂಗ್ ನಾನ್' ಹೀಗೆಂದರು -

'ಅಭಿವೃದ್ಧಿ ಹೊಂದಿದ ದೇಶಗಳು ಅತಿ ಹೆಚ್ಚು ಮಾಲಿನ್ಯಕ್ಕೆ ಕಾರಣವಾಗಿವೆ. ಆದ್ದರಿಂದ ಇದರ ನೈತಿಕ ಜವಾಬ್ದಾರಿಯನ್ನು ಆ ದೇಶಗಳು ಹೊತ್ತು ಶುದ್ಧೀಕರಣಕ್ಕೆ ಧನ ಸಹಾಯ ಮಾಡುವ ಹೊಣೆ ಹೊರಬೇಕು'

ಅಭಿವೃದ್ಧಿ ಹೊಂದಿದ ದೇಶಗಳು ಒತ್ತಾಯಿಸುವ ಇನ್ನೊಂದು ಅಂಶವೆಂದರೆ - ಜಗತ್ತಿನ ಕಾಡುಗಳನ್ನೆಲ್ಲಾ ವಿಶ್ವದ ಸಂಪತ್ತೆಂದು ಘೋಷಿಸಬೇಕು ಎಂಬುದು. ಇದು ಇನ್ನೊಂದು ಬಗೆಯ ಒಳಸಂಚಿನ ಹುನ್ನಾರವಾಗಿದೆ. ಮಲೇಶಿಯಾದ ಪ್ರಮುಖ ಮುಖಂಡ ಅದಕ್ಕೆ ಹೀಗೆ ತೀವ್ರವಾಗಿ ಪ್ರತಿಕ್ರಿಯಿಸಿದರು. 'ಕಾಡುಗಳನ್ನು ವಿಶ್ವದ (ವೈಶ್ವಿಕ - ಜಾಗತಿಕ) ಸಂಪತ್ತೆಂದು ಘೋಷಿಸುವ ಅರೆ ಬರೆ ವಿಚಾರಗಳ ಬಗ್ಗೆ ನಾವು ಜಾಗೃತರಾಗಿರಬೇಕು. ಈ ಶ್ರೀಮಂತ ದೇಶಗಳು ಶ್ರೀಮಂತರನ್ನು ಉಳಿಸಲು ಬಡವರನ್ನು ಲೂಟಿ ಮಾಡುತ್ತಿವೆ.'

ಗಂಗಾನದಿ ಲಾಗಾಯ್ತಿನಿಂದ ದೂಷಿತವಾಗುತ್ತಾ ಅದರ ಶುದ್ಧೀಕರಣಕ್ಕೆ ಇಂದಿರಾ ಗಾಂಧಿಯವರಿಂದ ಹಿಡಿದು ನಂತರದ ಸರ್ಕಾರಗಳು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ಗಂಗಾ ನದಿ ಕೊಳೆತು ನಾರುತ್ತಿದೆ. ಏಕೆಂದರೆ ಅದರ ದಂಡೆಯಲ್ಲಿ ನೂರಾರು ಚರ್ಮದ ಹಾನಿಕಾರಕಗಳ ಕಾರ್ಖಾನೆಗಳಿವೆ. ಅವುಗಳು ಹೊರಬಿಡುವ ಕಲುಷಿತ ಸಾಮಾಗ್ರಿಗಳನ್ನು ಸಂಸ್ಕರಿಸಲು ಯೋಗ್ಯ ವ್ಯವಸ್ಥೆಯಿಲ್ಲ. ಈ ವ್ಯವಸ್ಥೆಯಲ್ಲಿ ಸರಕಾರಿ ಅಧಿಕಾರಿಗಳೂ ಶಾಮೀಲಾಗಿರುವುದರಿಂದ ನಿಯಂತ್ರಿಸಲು ಅಸಾಧ್ಯವಾಗಿದೆ. ಕಮಲನಾಥ್ ಪರಿಸರ ಮಂತ್ರಿಯಾಗಿದ್ದಾಗ ಹೇಳಿದ ಮಾತೊಂದಿದೆ 'ನಾನು ಒಳ್ಳೆಯ ಮಂತ್ರಿಯಾಗಬೇಕಿದ್ದರೆ 60 ಶೇ. ಕಾರ್ಖಾನೆಗಳನ್ನು ಮುಚ್ಚಿಸ ಬೇಕಾಗುತ್ತದೆ.'

ಪ್ರಜಾಸತ್ತೆಯಲ್ಲಿ ಪಾರದರ್ಶಕತೆ ಇಲ್ಲದಿದ್ದರೆ ಅದು ಪ್ರಜಾಸತ್ತೆಯೆ ಅಲ್ಲ. ಎಡಪಕ್ಷಗಳು ಅಣು ಒಪ್ಪಂದದ ಕರಡನ್ನು ಸಂಸತ್ತಿನ ಮುಂದಿರಿಸಲು ಶತಾಯಗತಾಯ ಆಗ್ರಹಿಸಿದರೂ ಯುಪಿಎ ಸರಕಾರ ಅದನ್ನು ಮುಚ್ಚಿಟ್ಟು ಸುಳ್ಳುಗಳನ್ನೆ ಸೃಷ್ಟಿಸುತ್ತಾ ಬಂದುದು ಇದಕ್ಕೊಂದು ಜ್ವಲಂತ ಉದಾಹರಣೆ.

ಒಟ್ಟಿನಲ್ಲಿ ಪರಿಸರಕ್ಕೆ ಸಂಬಂಧಿಸಿದ - ಅಪ್ಪಿಕೊ ಆಂದೋಲನ, ಮೌನ ಕಣಿವೆಯ ಆಂದೋಲನ, ಕೊಜೆಂಟ್ರಿಕ್ಸ್ ವಿರೋಧಿ ಹೋರಾಟ, ಟೆಹರಿ ಬಚಾವೊ ಆಂದೋಲನ - ಇತ್ಯಾದಿಗಳನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

'ಜನಶಕ್ತಿ' ತಲುಪುತ್ತಿಲ್ಲವೇ ?

'ಜನಶಕ್ತಿ ಕನ್ನಡ ವಾರಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪುತ್ತಿಲ್ಲ ಎಂಬ ಹಾಗೂ ತಲುಪುತ್ತಲೇ ಇಲ್ಲ ಎಂಬ ದೂರುಗಳು ಇತ್ತೀಚಿನ ದಿನಗಳಲ್ಲಿ ಕೇಳಿ ಬರುತ್ತಿದೆ.

ವಿಳಾಸ ಸರಿಯಾಗಿದ್ದಾಗಲೂ, ನಿಗದಿತ ವೇಳಾಪಟ್ಟಿಯಂತೆ ಪತ್ರಿಕೆಯನ್ನು ಅಂಚೆಗೆ ಹಾಕುತ್ತಿದ್ದಾಗಲೂ ಇಂತಹ ದೂರುಗಳು ಬರುತ್ತಿದೆ ಎಂಬುದನ್ನು ಗಮನಿಸಲಾಗಿದೆ.

ಮುಂದೆ ತಮಗೆ ಸಮಯಕ್ಕೆ ಸರಿಯಾಗಿ ಪತ್ರಿಕೆ ತಲುಪದಿದ್ದರೆ ಅಥವಾ ಬರದೇ ಹೋದರೆ ಹೀಗೆ ಮಾಡಿ- ವೀರಣ್ಣ ಕಲ್ಮನಿ- 9480151132 ಇವರನ್ನು ಸಂಪರ್ಕಿಸಿ, ವಿಳಾಸ ಸರಿಯಾಗಿದೆಯೇ ಎಂದು ಖಚಿತ ಮಾಡಿಕೊಳ್ಳಿ ಮತ್ತು ಈ ಕೆಳಕಂಡವರಿಗೆ ಒಂದು ಲಿಖಿತ ದೂರು ದಾಖಲಿಸಿ. ದೂರಿನ ಪ್ರತಿಯನ್ನು ಪತ್ರಿಕೆಯ ಕಛೇರಿಗೆ ಸಹ ಕಳಿಸಿ, ನಾವು ಮುಂದಿನ ಕ್ರಮವಹಿಸಲು ಅನುಕೂಲವಾಗುತ್ತದೆ.

ವಿಳಾಸ:

ಇವರಿಗೆ, ಸೂಪರಿಂಟೆಂಡೆಂಟ್ ಆಫ್ ಪೋಸ್ಟ್, (ಉದಾ:) ಕೋಲಾರ/ ಗುಲ್ಬರ್ಗಾ / ಹಾಸನ ಡಿವಿಜನ್ ಇತ್ಯಾದಿ (ಸಂಬಂಧಿಸಿದ ಜಿಲ್ಲಾ ಕೇಂದ್ರ. ಉದಾ: ಹಾಸನ)

ವಿ.ಸೂ. ದಾವಣಗೆರೆ ಜಿಲ್ಲೆಯ ದೂರನ್ನು ಚಿತ್ರದುರ್ಗಕ್ಕೆ ಕಳಿಸಬೇಕು. ರಾಮನಗರ ಜಿಲ್ಲಾ ಕಛೇರಿ ಚನ್ನಪಟ್ಟಣದಲ್ಲಿದೆ. ಬೆಂಗಳೂರು ನಗರ ಜಿಲ್ಲೆಗೆ ಸಂಬಂದಿಸಿದ ದೂರನ್ನು ನೇರವಾಗಿ ಜನಶಕ್ತಿ ಕಛೇರಿಗೆ ಕಳಿಸಿಕೊಡಿ.

ಕೋರಿಯರ್ ಬಗೆಗಿನ ದೂರುಗಳು

ಕೋರಿಯರ್ ಮೂಲಕ ಏಜೆಂಟರಿಗೆ ಹೋಗುವ ಪತ್ರಿಕೆಗಳು ಸಹ ತೀರಾ ತಡವಾಗಿ ತಲುಪುತ್ತಿರುವುದಾಗಿ ದೂರುಗಳು ಬರುತ್ತಿವೆ.

ಪ್ರತಿ ಸೋಮವಾರದಂದು ಕೋರಿಯರ್ ಮೂಲಕ ಹೋಗುವ ಪತ್ರಿಕೆಗಳು ಸಹ ನಿಗದಿಯಂತೆ ರವಾನೆಯಾಗುತ್ತಿದ್ದು ಒಂದೆರಡು ದಿನಗಳಲ್ಲಿ ತಮಗೆ ಪತ್ರಿಕೆ ತಲುಪದಿದ್ದಲ್ಲಿ ತತ್‌ಕ್ಷಣ ತಾವು ವೀರಣ್ಣ ಕಲ್ಮನಿಯವರಲ್ಲಿ ದೂರು ದಾಖಲಿಸುವುದು ಮತ್ತು ತೀರಾ ತಡವಾಗಿ ಅಂದರೆ 2-3 ವಾರಗಳ ಪತ್ರಿಕೆಯನ್ನು ಒಟ್ಟಿಗೆ ತಂದುಕೊಟ್ಟಲ್ಲಿ ಕೊರಿಯರ್ ವ್ಯಕ್ತಿ ತಮ್ಮ ಬಳಿಯಲ್ಲಿರುವಾಗಲೇ ತತ್‌ಕ್ಷಣ ಸಂಪರ್ಕಿಸುವುದು.

ಸಂ-

ರೈತ ಜನ ಸಾವು

ಸಾಲ ಬಾಧೆಯಿಂದಲ್ಲ ರೈತ ಜನ ಸಾವು
ಕಡಿದದ್ದು ಆಡಳಿತ ಎಂದೆಂಬ ಹಾವು
ಬೆಲೆ ಏರಿಕೆಯಿಂದಲ್ಲ ಬಡವರಿಗೆ ಕಷ್ಟ
ಸಗಟು ವ್ಯಾಪಾರಿ ಪರ ಅಧಿಕಾರಿ ಭ್ರಷ್ಟ

• ವಿಡಂಬಾರಿ

ಸಂಪಾದಕೀಯ

ವಿದ್ಯುತ್ ಕೊರತೆ : ಕಾಳಜಿಯಿಲ್ಲದ ಕತ್ತಲೆ ರಾಜಕೀಯ

ಕರ್ನಾಟಕ ರಾಜ್ಯವಿಂದು ತೀವ್ರ ವಿದ್ಯುತ್ ಕೊರತೆಯನ್ನು ಎದುರಿಸುತ್ತಿದೆ. ಪರಿಣಾಮವಾಗಿ ರಾಜ್ಯದ ರಾಜಧಾನಿ ಒಳಗೊಂಡು, ಪ್ರಮುಖ ನಗರ, ಪಟ್ಟಣಗಳು ದಿನದ ಹಲವಾರು ಗಂಟೆಗಳು ಕತ್ತಲೆಯನ್ನು ಅನುಭವಿಸುತ್ತಿವೆ. ಇನ್ನು ಹಳ್ಳಿಗಳ ಪಾಡು ವಾಸ್ತವದಲ್ಲಿ ಅಂಧಕಾರವೇ. ಕೃಷಿ, ಕೈಗಾರಿಕೆ - ವಾಣಿಜ್ಯ ವಹಿವಾಟುಗಳು ತೀವ್ರ ಬಾಧಿತವೇ. ವಿದ್ಯಾರ್ಥಿಗಳ ಅಭ್ಯಾಸಕ್ಕೂ ಸಂಚಕಾರವೇ.

ಇದೊಂದು ಗಂಭೀರ ಸಮಸ್ಯೆ ಎಂದು ಸರ್ಕಾರ ಭಾವಿಸಿದಂತೆ ಕಾಣುತ್ತಿಲ್ಲ. ಈಗಲೂ ರಾಜ್ಯದ ವಿದ್ಯುತ್ ಸಚಿವರು ಸಮಸ್ಯೆಯನ್ನು ಚಿಟಿಕಿ ಹೊಡೆದಷ್ಟೇ ಸುಲಭದಲ್ಲಿ ಪರಿಹರಿಸುತ್ತೇವೆಂದು ಹೇಳುತ್ತಿರುವುದು ಬೇಜವಾಬ್ದಾರಿ ಪ್ರಸಂಗ. ಅಧಿಕಾರಿಗಳು ಅಂಕಿ ಸಂಖ್ಯೆಗಳ ಲೆಕ್ಕದಲ್ಲಿ ಮಗ್ನರಾಗಿ ಪತ್ರಿಕೆಗಳಲ್ಲಿ ಯಥೇಚ್ಛ ಸರಬರಾಜಿನ ವೇಳಾಪಟ್ಟಿಯನ್ನೇ ಪ್ರಕಟಿಸುತ್ತಿದ್ದಾರೆ. ಇನ್ನೊಂದೆಡೆ ಸರ್ಕಾರ ಈಗ ಅತೀ ಅಗತ್ಯವಾಗಿರುವ 900 ಮೆಗಾವ್ಯಾಟ್ ವಿದ್ಯುತ್‌ನ್ನು ಖಾಸಗಿಯವರಿಂದಲೂ, ರಾಜ್ಯದ ಹೊರಗಿನಿಂದಲೂ ತರುವುದಾಗಿ, ಅದಕ್ಕಾಗಿ 450 ಕೋಟಿ ರೂಪಾಯಿಗಳ ಹಣ ಮಂಜೂರು ಆಗಿರುವುದಾಗಿ ಹೇಳುತ್ತಾ ಕೊರತೆಯನ್ನು ದೃಢೀಕರಿಸುತ್ತಾರೆ. ಹೀಗೆಲ್ಲಾ ಹೇಳುತ್ತಾ ಬಂದಿದ್ದರೂ ಸಮಸ್ಯೆ ಹಾಗೇ ಉಳಿದಿರುವುದನ್ನು ನೋಡಿದರೆ, ಸಚಿವರ - ಸರ್ಕಾರದ ಹೇಳಿಕೆ ಕೇಳಿದರೆ ಒಟ್ಟಾರೆ ಇಡೀ ಸ್ಥಿತಿಯೇ ಅತ್ಯಂತ ಅರಾಜಕವಾಗಿದೆ.

ಜಲಾಶಯಗಳು ಭರಪೂರ ತುಂಬಲು ಸಾಧ್ಯವಾಗದ ಸ್ಥಿತಿಯಿಂದಾಗಿ ಇಂತಹ ಕೊರತೆ ಉಂಟಾಗುವ ನಿಶ್ಚಿತ ಅಂದಾಜು ಆಗಸ್ಟ್ ತಿಂಗಳ ಸುಮಾರಿನಲ್ಲಿತ್ತು. ಆದರೆ ಇದನ್ನು ನೀಗಿಸಲು ಸರಿಯಾದ ಕ್ರಮಗಳನ್ನು ವಹಿಸದೇ ನಿರ್ಲಕ್ಷಿಸಲಾಯಿತು. ಎಂದೋ ಆರಂಭಗೊಳ್ಳುವ ಛತ್ತೀಸ್‌ಘಡದ ಸ್ಥಾವರವನ್ನು ಇಂದಿನ ಸಮಸ್ಯೆಗೆ ಪರಿಹಾರ ಎಂದು ತೋರಿಸಿ ಕಾಲ ತಳ್ಳಿದ್ದು, ದೂರಾಲೋಚನೆ, ಮುತ್ಸದ್ದಿತನ ಎನ್ನಲಾಗದು. ಈ ವಿದ್ಯುತ್ ಕೊರತೆ ಬಗ್ಗೆ ಸಚಿವ ಸಂಪುಟದಲ್ಲಿ ಅದೆಷ್ಟೋ ಬಾರಿ ಚರ್ಚಿಸಿದ್ದರೂ ಕ್ರಿಯೆಗೆ ಇಳಿಯದಿರುವುದು ನಾಯಕತ್ವದ, ಕತೃತ್ವ ಶಕ್ತಿಯ ಕೊರತೆಯೆಂದೇ ಹೇಳಲೇಬೇಕಾಗಿದೆ.

ಇಂದಿನ ಕೊರತೆಗೆ ಹಲವು ಪ್ರಮುಖ ಅಂಶಗಳನ್ನು ಗುರುತಿಸಬಹುದು. ತತ್‌ಕ್ಷಣದಲ್ಲಿ ರಾಯಚೂರು ಹಾಗೂ ಇತ್ತೀಚಿಗೆ ಉದ್ಘಾಟನೆಗೊಂಡ ಕುಡಿತಿನಿ ವಿದ್ಯುತ್ ಸ್ಥಾವರದಲ್ಲಿ ಕಾಣಿಸಿಕೊಂಡ ತಾಂತ್ರಿಕ ತೊಂದರೆಗಳು, ಕಲ್ಲಿದ್ದಲಿನ ಬಾಕಿ ಪಾವತಿ ವಿಳಂಬ, ಕೇಂದ್ರದೊಂದಿಗಿನ ವಿದ್ಯುತ್ ಖರೀದಿಯ ಬಾಕಿ ಹಣ ಪಾವತಿಸದೇ ಇರುವುದು ನೆರೆರಾಜ್ಯಗಳಿಂದ ಪಡೆಯಲು ಯತ್ನ ಇಲ್ಲದಿರುವುದು ಇನ್ನಿತರ ಕಾರಣ ಎನ್ನಲಾಗುತ್ತಿದೆ. ಆದರೆ ಮೂಲಭೂತವಾಗಿ ರಾಜ್ಯದಲ್ಲಿ ಲಭ್ಯವಿರುವ ವಿದ್ಯುತ್ ಉತ್ಪಾದನೆಯ ಅವಕಾಶಗಳನ್ನು ಪೂರ್ಣವಾಗಿ ಬಳಸದೇ ಇರುವುದು, ಇಂತಹ ಸಾಧ್ಯತೆ ಇನ್ನೂ ಶೇ. 40 ರಷ್ಟಿರುವ ಅಂದಾಜಿದೆ. ಅದರಂತೆಯೇ ಈ ಸರ್ಕಾರವನ್ನು ಒಳಗೊಂಡು ಹಿಂದಿನ ಸರ್ಕಾರಗಳೂ ಸಹ ಸಾರ್ವಜನಿಕ ವಲಯದ ವಿದ್ಯುತ್ ಉತ್ಪಾದನೆಗೆ ಬಂಡವಾಳವನ್ನು ಹೂಡದೇ, ಹಂತ ಹಂತವಾಗಿ ಅದನ್ನು ಕುಗ್ಗಿಸುತ್ತಾ ಹೋಗುತ್ತಿರುವುದು. ವಿದ್ಯುತ್‌ನ ಅವಶ್ಯಕತೆಗೆಲ್ಲಾ ಖಾಸಗಿಯವರಿಂದ ಖರೀದಿಗೆ ಮೊರೆ ಹೋಗುತ್ತಿರುವುದು ಇದು ಉದಾರೀಕರಣ, ಜಾಗತೀಕರಣದ ನೀತಿಗಳ ಫಲವಾಗಿದೆ. ಉತ್ಪಾದನೆ ಹಾಗೂ ಹಂಚಿಕೆಯನ್ನು ಖಾಸಗಿ ಕಂಪನಿಗಳಿಗೆ ವಹಿಸಬೇಕು ಎಂಬ ಕೇಂದ್ರದ ನಿರ್ಧಾರ, ಅದನ್ನೇ ಅನುಸರಿಸುತ್ತಿರುವ ರಾಜ್ಯ ಸರ್ಕಾರದ ದಿವಾಳಿತನದ ನೀತಿಗಳೇ ಕಾರಣ. ಈಗಲೂ ರಾಜ್ಯ ಸರ್ಕಾರ ಖಾಸಗಿಯವರತ್ತಲೇ ಒತ್ತು ನೀಡುತ್ತಿದೆ. ವಿದ್ಯುತ್‌ನ ಕೊರತೆಯ ಸನ್ನಿವೇಶವನ್ನು ಖಾಸಗೀಕರಣದ ವಾದಕ್ಕೆ ಬಳಸುತ್ತಿದೆ.


ಅದರಂತೆ ಹಿಂದಿನ ವರುಷಗಳಲ್ಲಿ ಕೇಂದ್ರದ ಗ್ರಿಡ್‌ನಿಂದ ಹಾಗೂ ನೆರೆಯ ಮಹಾರಾಷ್ಟ್ರ - ಆಂಧ್ರ - ತಮಿಳುನಾಡು ರಾಜ್ಯಗಳಿಂದ ವಿದ್ಯುತ್ತನ್ನು ಖರೀದಿಸಿ ಕೊರತೆಯನ್ನು ನೀಗಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿತ್ತು. ಆದರೆ ಈ ವರ್ಷ ಅಂತಹ ಪ್ರಯತ್ನಗಳೇ ಕಾಣಲಿಲ್ಲ. ಬದಲಾಗಿ ಇದೆಲ್ಲಾ ಕೇಂದ್ರದ ಮಲತಾಯಿ ಧೋರಣೆ ಎಂದು ಖಂಡಿಸುತ್ತಾ ಮಾತನಾಡಿದ್ದು ಬಿಟ್ಟರೆ ಯಡಿಯೂರಪ್ಪನವರ ಯತ್ನ ಏನೂ ಇರಲಿಲ್ಲ. ಇವುಗಳೊಂದಿಗೆ ಇಂದಿಗೂ ವಿದ್ಯುತ್ ಸೋರಿಕೆಯನ್ನು ತಡೆಯಲಾಗುತ್ತಿಲ್ಲ (ಶೇ. 23 ಸೋರಿಕೆ ಎಂಬ ಅಂದಾಜು) ಇದೆಲ್ಲಾ ಬಹುತೇಕ ಕೈಗಾರಿಕಾ ವಲಯದ ಲೈನ್‌ಗಳಲ್ಲೇ ಇದೆ ಎಂಬುದು ಭ್ರಷ್ಟ ವ್ಯವಹಾರಗಳ ಮುಂದುವರಿಕೆಯನ್ನು ತೋರಿಸುತ್ತದೆ.

ಇಂತಹ ಒಟ್ಟು ಪರಿಸ್ಥಿತಿಯನ್ನು ನಿಭಾಯಿಸಲು ಗಂಭೀರ ಹೆಜ್ಜೆ ಅಗತ್ಯವಿದೆ. ಅದರ ಬದಲು ಬೇಕಾಬಿಟ್ಟೆ ವಿದ್ಯುತ್ ಕಡಿತವೆಂಬುದು ಜನರ ಜೀವನ - ಆರ್ಥಿಕತೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಈಗಾಗಲೇ ಬಿಕ್ಕಟ್ಟಿನಲ್ಲಿರುವ ಸಣ್ಣ ಕೈಗಾರಿಕೆಗಳು ಮುಗ್ಗಟ್ಟಿಗೆ ಒಳಗಾಗುತ್ತಿವೆ. ಇಡೀ ವಾರದಲ್ಲಿ ಒಂದು ದಿನದ ವಿದ್ಯುತ್ ಕಡಿತದ ನೀತಿಯೂ ನೇರವಾಗಿ ಕಾರ್ಮಿಕರ ಗಳಿಕೆಗೆ, ಕೈಗಾರಿಕೆಗೆ ಹಾನಿ ತರುತ್ತಿದೆ. ಇನ್ನು ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಕ್ರಮಗಳು ಆತ್ಮಹತ್ಯೆ ಹಾದಿ ಹಿಡಿದಿರುವ ಗ್ರಾಮೀಣ ಜನರನ್ನು ಇನ್ನಷ್ಟು ನೇಣಿನ ಕುಣಿಕೆಗೆ ನೂಕಲಿದೆ.

ಸರ್ಕಾರ ಜನರ ಬಗ್ಗೆ ಇರುವ ಹೊಣೆಗೇಡಿತನ, ಕಡು ತಿರಸ್ಕಾರ ಈ ಸಂದರ್ಭದಲ್ಲಿ ಮತ್ತೆ ನಿಚ್ಚಳವಾಗಿವೆ. ಪರಿಸ್ಥಿತಿ ಇನ್ನಷ್ಟು ಹದಗೆಡದಂತೆ ಸೂಕ್ತ ಕ್ರಮಗಳನ್ನು ಈಗಲಾದರೂ ಸಮರೋಪಾದಿಯಲ್ಲಿ ಕೈಗೊಳ್ಳಬೇಕು. ವಿದ್ಯುತ್ ಕ್ಷೇತ್ರದಲ್ಲಿ ಜನಪರವಾಗಿರುವ ಸುಧಾರಣೆಗಳಿಗೆ ಸಮಗ್ರ ಯೋಜನೆ ಅತ್ಯಗತ್ಯವಿದೆ. ಅದರತ್ತ ಕಾರ್ಯಪ್ರವೃತ್ತರಾಗಬೇಕು.

ಕೇವಲ ಅಭಿವೃದ್ಧಿಯ ಬಣ್ಣದ ಮಾತುಗಳೂ, ಹಸಿರು ಶಾಲಿನ ಪ್ರದರ್ಶನಗಳು ಜನತೆಗೆ ಪರಿಹಾರ ಒದಗಿಸಲಾರವು ಎಂಬುದನ್ನು ಮುಖ್ಯಮಂತ್ರಿ ಅರಿಯಬೇಕು.

ರಾಮಾಜೋಯಿಸರ ಗೋಲ್ವಾಲ್ಕರ್ ಪ್ರವಚನ



ರಾಜ್ಯದಲ್ಲಿ ಬಿಜೆಪಿಯು ಅಧಿಕಾರದಲ್ಲಿ ಪ್ರತಿಷ್ಠಾಪಿತಗೊಂಡ ನಂತರವಂತೂ 'ಕೇಶವಶಿಲ್ಪ'ದ ಆಸ್ಥಾನಪಂಡಿತರಿಗೆ ಈಗ ಎಲ್ಲಿಲ್ಲದ 'ಡಿಮ್ಯಾಂಡ್' ಸೃಷ್ಟಿಯಾಗಿಬಿಟ್ಟಿದೆ. ಎಲ್ಲಾ ಸಾಧನೆಗಳಿಗೂ ಮೂಲವಾಗಿರುವ 'ಶ್ರಮ'ವನ್ನು ನಿಕೃಷ್ಟವಾಗಿ ಕಂಡು, ಶೋಷಿಸಿ, ಆಶ್ರಮ ಹಾಗೂ ಜ್ಞಾನವನ್ನು ವಿಭಜಿಸಿ, ಜ್ಞಾನವೇ ಪರಮಶ್ರೇಷ್ಠ ಎಂದೆಲ್ಲಾ ಬೊಗಳೆ ಒಪ್ಪಿಸುವ ತಮ್ಮ ವಾದ ವೈಖರಿಗಳನ್ನು ಸಾರ್ವಜನಿಕರೆದುರು ವದರುವುದಕ್ಕೆ ದಾಷ್ಟ್ಯವೂ ಸಿಕ್ಕಿದೆ. ಇಂತಹ 'ಪುಂಗವ'ಕ್ಕೆ 'ಜ್ಞಾನ ಆಯೋಗ' ಎಂಬುದರಲ್ಲಿ ಯಡಿಯೂರಪ್ಪನವರ ಸರ್ಕಾರವು ಪುನರ್‌ವಸತಿ ಕಲ್ಪಿಸುತ್ತಿದೆ. ಇಂತಹವರ 'ಗಾಂಪರೊಡೆಯ'ನೆಂದೇ ಖ್ಯಾತಿಯಾಗಿರುವ ರಾಮಾಜೋಯಿಸ್ ತಮ್ಮ ಅಮೋಘ 'ಚಿಂತನ ಗಂಗೆ'ಯನ್ನು ಕಂಡವರ ಮುಂದೆ ಹರಿಸತೊಡಗಿದ್ದಿದೆ. ವಿಶೇಷವೆಂದರೆ ಅವರು ಈಗ ಭಾರತದ 'ಸೆಕ್ಯುಲರಿಸಂ' (ಧರ್ಮನಿರಪೇಕ್ಷತೆ)ನ ಬಗ್ಗೆ ಸಾರ್ವಜನಿಕವಾಗಿ ಪುನಃ ಹರಿಕಥೆ ಆರಂಭಿಸಿರುವುದು.

ಇನ್ನೊಬ್ಬರ ಹಕ್ಕುಗಳನ್ನು ಗೌರವಿಸಬೇಕೆಂಬ ಸಂವಿಧಾನದಲ್ಲಿರುವ ಪ್ರಜಾಪ್ರಭುತ್ವದ ಕನಿಷ್ಟ ನಿರ್ದೇಶನವನ್ನು ಪರಿಗಣಿಸಲು ಅವರು ಸಿದ್ಧರಿಲ್ಲ. ಇಂತಹವರೂ ಸಹ ತಮ್ಮ ಅಭಿಪ್ರಾಯ ಹೇಳಿಕೊಳ್ಳಲು ಅವಕಾಶವಿದೆಯಾದರೂ ಅದನ್ನೇ ಅಂತಿಮ ಸತ್ಯವೆಂದೂ, ಅದನ್ನೇ ಒಪ್ಪಿಕೊಳ್ಳಬೇಕು, ಇಲ್ಲವಾದರೆ 'ನೀವು 'ಪೆಕ್ಯುಲರಿಸ್ಟ್'ಗಳು ಎಂದು ದಬಾವಣೆಯ ನ್ಯಾಯದೇಶ ಹೊರಡಿಸುವುದಕ್ಕೆ ಖಂಡಿತ ಆಕ್ಷೇಪವಿದೆ.

ಮುಚ್ಚಿಟ್ಟ ಕ್ರೌರ್ಯ

ಇತ್ತೀಚೆಗೆ ಬೆಂಗಳೂರಿನಲ್ಲಿ 'ರಾಷ್ಟ್ರ ಋಷಿ ಗುರೂಜಿ' ಎಂಬ ಆರ್.ಎಸ್.ಎಸ್. ಸಂಸ್ಥಾಪಕ ಗೋಲ್ವಾಲ್ಕರ್ ರವರ ಕುರಿತ ಪುಸ್ತಕವನ್ನು ಬಿಡುಗಡೆ ಮಾಡುತ್ತಾ, ಗುರೂಜಿಗೆ (ಅ) 'ಪ್ರಿಯ'ವಾಗಿರುವ ಸೆಕ್ಯುಲರಿಸಂ ಬಗ್ಗೆ ಜೊಯೀಸರು ವಾದ ಮಂಡಿಸತೊಡಗಿದ್ದಾರೆ. ಸೆಕ್ಯುಲರಿಸಂ ನಮ್ಮ (ಸಂಘ ಪರಿವಾರದ) ರಕ್ತದಲ್ಲಿಯೇ ಇದೆ. ಭೂಮಿಯು ಎಲ್ಲಾ ಮಕ್ಕಳನ್ನು ಸಮಾನವಾಗಿ ರಕ್ಷಿಸುವಂತೆ ರಾಷ್ಟ್ರ (ಹಿಂದೂ ರಾಷ್ಟ್ರ) ವ್ಯವಸ್ಥೆಯು ಎಲ್ಲಾ ಪ್ರಜೆಗಳನ್ನು ಸಮಾನವಾಗಿ ಸಲಹುವುದೇ 'ಸೆಕ್ಯುಲರಿಸಂ' ಎಂದಿದ್ದಾರೆ. ಮಾತ್ರವಲ್ಲದೇ 'ಅಸ್ಪೃಶ್ಯತೆ ಆಚರಣೆ ಎಂಬುದು ಅಧರ್ಮವೆಂದೂ ಅದು ಸಮಾಜಕ್ಕೆ ಅಂಟಿದ ಕಳಂಕ'ವೆಂದೂ ಹೇಳುತ್ತಾ 'ಅಸ್ಪೃಶ್ಯತರು, ಮುಸಲ್ಮಾನರು, ಕ್ರಿಶ್ಚಿಯನ್ನರು ಎಲ್ಲರೂ ಭಾರತ ಮಾತೆಯ ಮಕ್ಕಳು' ಎಂದು ಸಾರಿದ್ದಾರೆ. ಇಂತಹ ವಾಕ್ಯಗಳಿಂದ ನಾವು ಎಂತಹ ಉದಾತ್ತ ಚಿಂತನೆ - ಸಂಸ್ಕೃತಿ ಉಳ್ಳವರು ಎಂದು ಹೇಳಹೊರಟಿದ್ದಾರೆ. ಮೊದಲನೋಟದಲ್ಲಿ ಹಾಗೆ ಕಂಡರೂ ಇಂತಹ ವೈಭವೀಕರಣದ ಹೇಳಿಕೆಗಳಿಂದ ವಾಸ್ತವದ ಕ್ರೌರ್ಯವನ್ನು ಮುಚ್ಚಿಬಯಸುತ್ತಾರೆ.

ಸಂಘ ಪರಿವಾರ ಪ್ರತಿಪಾದಿಸುವ ಕೋಮುವಾದಿ ಫ್ಯಾಸಿಸ್ಟ್ ವಾದವನ್ನೇ ಸಮರ್ಥಿಸುತ್ತಾ ಅದನ್ನೇ ಸೆಕ್ಯುಲರಿಸಂ ಎಂದೂ, ಆಧುನಿಕ ಸೆಕ್ಯುಲರಿಸಂನ ಮೇಲೆ ದಾಳಿ ನಡೆಸುತ್ತಾರೆ. ಈ ಮುಚ್ಚಿಟ್ಟ ಅಜೆಂಡಾವು 'ನಮ್ಮ ದೇಶದಲ್ಲಿನ ಸೆಕ್ಯುಲರಿಸ್ಟ್‌ಗಳಂತಹ (ಜಾತ್ಯಾತೀತ) ಪೆಕ್ಯುಲರ್ (ವಿಚಿತ್ರ) ಜನರು ಇನ್ನೆಲ್ಲೂ ಸಿಗುವುದಿಲ್ಲ' ಎಂಬ ಅವರ ಶಬ್ದ ವರಸೆಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಭಾರತದೇಶದ ಎಲ್ಲ ಪ್ರಜೆಗಳನ್ನು ಒಂದೇ ಎಂದಿರುವಾಗ, 'ಅಸ್ಪೃಶ್ಯರು, ಕ್ರಿಶ್ಚಿಯನ್ನರು, ಮುಸ್ಲಿಮರೂ... ಸಹ ಭಾರತ ಮಾತೆ'ಯ ಮಕ್ಕಳೇ ಎನ್ನುವಾಗ ಅವರೂ - ಇವರೂ ಸಹ ಯಾಕೆ? ಭಾರತ ಮಾತೆಯ ಮಕ್ಕಳೆಂದು ಹೇಳುವ ಜೋಯಿಸರು ಅಸ್ಪೃಶ್ಯತೆ ಹಾಗೂ ಅಸಮಾನತೆ, ತಾರತಮ್ಯಗಳ ವಿರುದ್ಧ ದೃಢವಾಗಿ ಹೋರಾಡುವ ಬಗ್ಗೆ, ದಮನಕಾರರ ವಿರುದ್ಧ ಮಾತನಾಡುವುದಿಲ್ಲ.

ಅನಾಗರೀಕ ವಾದಗಳು

ಜೋಯಿಸರ ಈ ಎಲ್ಲಾ ಉದಾತ್ತ ವ್ಯಾಖ್ಯಾನಗಳು, ತೋರಿಕೆಯ ಹೃದಯವೈಶಾಲ್ಯವೂ ಗೋಲ್ವಾಲ್ಕರ್ ಪ್ರತಿಪಾದಿಸಿದ 'ಹಿಂದೂರಾಷ್ಟ್ರ'ದ ಫ್ಯಾಸಿಸ್ಟ್ ಮಾದರಿಯ ವಾದದ ಆವೃತ್ತಿಯೇ ಆಗಿದೆ. ಗೋಲ್ವಾಲ್ಕರ್ ಅವರು ತಮ್ಮ ಚಿಂತನಗಂಗಾ ಒಳಗೊಂಡು ಎಲ್ಲಾ ಕೃತಿಗಳಲ್ಲಿಯೂ ಅತ್ಯಂತ ಅವಮಾನವೀಯವಾದ ಚಾತುರ್ವರ್ಣ್ಯ ಜಾತಿಪದ್ಧತಿಯನ್ನು ಸಮರ್ಥಿಸುತ್ತಾರೆ. "ಹಿಂದುಗಳು ಬಿಟ್ಟರೆ (ಹಿಂದುಗಳೆಂದರೆ ಈಗ ಅವರು ಹೇಳುವ ಜಾತಿಗಳೆಲ್ಲ ಅಲ್ಲ) ಉಳಿದಂತೆ ಮುಸ್ಲಿಮರು, ಕ್ರಿಶ್ಚಿಯನ್ನರು (ದಲಿತರು) ಭಾರತದ ಪ್ರಜೆಗಳೇ ಅಲ್ಲ. ಅವರು ಏನಿದ್ದರೂ ಎರಡನೇಯ ದರ್ಜೆಯವರು, ಅವರು 'ಹಿಂದು'ಗಳ ಅಡಿಯಲ್ಲಿ ಆಶ್ರಯಿಸಿ ಹೇಳಿದಂತೆ - ಕೇಳಿಕೊಂಡು ಬದುಕಿ ಬಿದ್ದಿರಬೇಕಾದವರು. ಹಿಂದುಗಳು ಹೇಳಿದರೆ ದೇಶಾಂತರವಾಗಬೇಕಾದವರು. ಅವರಿಗೆ ಎಲ್ಲರಂತೆ ನಾಗರೀಕ ಹಕ್ಕುಗಳು - ಅವಕಾಶಗಳು ಸಿಗುವುದಿಲ್ಲ. ಅವರು ಅವಕ್ಕೆಲ್ಲಾ ಅರ್ಹರೂ ಅಲ್ಲ... ಅವರಿಗೆ 'ರಾಷ್ಟ್ರೀಯ' ಜೀವನದಲ್ಲಿ ಯಾವುದೇ ಸ್ಥಾನ ಇಲ್ಲ. ತಮ್ಮ ಭಿನ್ನತೆಯನ್ನು ತ್ಯಜಿಸಿ ಈ ದೇಶದ, ಧರ್ಮ, ಸಂಸ್ಕೃತಿ, ಭಾಷೆಯನ್ನು ಸ್ವೀಕರಿಸಿ ರಾಷ್ಟ್ರೀಯ ಜನಾಂಗದಲ್ಲಿ ಸಂಪೂರ್ಣ ಬೆರೆತುಹೋದರೆ ಮಾತ್ರ ಅವರಿಗೊಂದು ಸ್ಥಾನ. ತಮ್ಮ ಜನಾಂಗೀಯ, ಧಾರ್ಮಿಕ, ಸಾಂಸ್ಕೃತಿಕ ಭಿನ್ನತೆಯನ್ನು ಉಳಿಸಿಕೊಂಡಿರುವವರೆಗೂ ಅವರು ವಿದೇಶಿಯರಲ್ಲದೇ ಬೇರೇನೂ ಅಲ್ಲ. ಹಿಂದೂ ಸ್ಥಾನದಲ್ಲಿ ಇರಬೇಕಾದ್ದು ಹಿಂದೂ ರಾಷ್ಟ್ರ ಮಾತ್ರ. ಬೇರೆ ಯಾವುದೂ ರಾಷ್ಟ್ರೀಯ ಜೀವನವ್ಯಾಪ್ತಿಗೆ ಸೇರುವುದಿಲ್ಲ... ಉಳಿದ ಧರ್ಮೀಯರು, ಜನಾಂಗಗಳು ಹಿಂದೂ ದೇಶವನ್ನು ವೈಭವೀಕರಿಸುವುದು ಬಿಟ್ಟು ಬೇರೆ ವಿಚಾರ ಹೊಂದಿರಕೂಡದು. ಹಿಂದೂ ರಾಷ್ಟ್ರಕ್ಕೆ ಸಂಪೂರ್ಣ ಅಡಿಯಾಳಾಗಿರಬೇಕು. ಇಂತಹವರೊಂದಿಗೆ ವಿದೇಶಿ ಜನಾಂಗಗಳೊಡನೆ ಪ್ರಾಚೀನ ದೇಶ

ಪುಟ 14ಕ್ಕೆ

ಸೋಮವಾರಪೇಟೆ : ಕಮಲಧಾರಿಗಳ ಸೇಡಿನ ರಾಜಕಾರಣ

ಮುಸ್ಲಿಮರು ಮತ್ತು ಕ್ರೈಸ್ತರ ವಿರುದ್ಧ ಕಪೋಲ ಕಲ್ಪಿತ ಕಥೆಗಳನ್ನು ಸೃಷ್ಟಿಸಿ ಯಾವಾಗಲೂ ಅಪಪ್ರಚಾರಮಾಡಿ ಸಾಮಾನ್ಯ ಹಿಂದೂಗಳು ಅವರನ್ನು ಸಂಶಯದಿಂದ ನೋಡುವಂತೆ ಮಾಡುವುದು, ಅವರನ್ನು ಮಾನಸಿಕ ಹಿಂಸೆಗೆ ಸದಾ ಬಲಿಯಾಗಿಸುವುದು, ಸಂದರ್ಭ ಸಿಕ್ಕಾಗ ಅವರ ವಿರುದ್ಧ ದೈಹಿಕ ಹಿಂಸೆ ಸಂಘಟಿಸುವುದು ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಭಜರಂಗದಳ, ಭಾ.ಜ.ಪ.ದಂತಹಾ ಸಂಘಟನೆಗಳ ನಿತ್ಯ ಕೆಲಸವಾಗಿದೆ.

ಈಗ ನಮ್ಮ ರಾಜ್ಯದಲ್ಲಿ ಅವರದೇ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅವರ ಈ ಕೃತ್ಯಗಳು ನೂರ್ಮಡಿ ಹೆಚ್ಚಿವೆ. ಕೊಡಗಿನಲ್ಲೂ ಮುಸ್ಲಿಮರ ವಿರುದ್ಧ ಇತ್ತೀಚಿಗೆ ಈ ಸಂಘಟನೆಗಳವರು ಒಂದು ಕರಪತ್ರ ಹೊರಡಿಸಿದ್ದನ್ನು ವಾರಪತ್ರಿಕೆ ಕೊಡಗು ಸಮಾಚಾರ ಪ್ರಕಟಿಸಿತ್ತು.

ರಾಜ್ಯಾದ್ಯಂತ ಕ್ರೈಸ್ತ ದೇವಾಲಯಗಳ ಮೇಲೆ ದಾಳಿ ಸಂಘಟಿಸಲ್ಪಟ್ಟ ಸಂದರ್ಭದಲ್ಲಿ ಕೊಡಗಿನಲ್ಲೂ 'ಬಲಾತ್ಕಾರದ ಮತಾಂತರ'ದ ಗುಲ್ಲೆಬ್ಬಿಸಿದರು. ಸಿದ್ದಾಪುರದ ಸಮೀಪ ಪಳ್ಳಕೆರೆಯಲ್ಲಿ ನಡೆಯದ ಮತಾಂತರ ನಡೆದಿದೆ ಎಂದು ಸುಳ್ಳನ್ನು ಸೃಷ್ಟಿಸಿ ಒರ್ವ ಕ್ರೈಸ್ತ ಗುರುವಿನ ಮತ್ತು ಇತರ ನಾಲ್ವರ ವಿರುದ್ಧ ಮೊಕದ್ದಮೆ ಹೂಡಿಸಿದ ಘಟನೆ ಕುಪ್ರಸಿದ್ದವಾದುದು. ಅನಂತರವೂ ತಿತಿಮತ್ತಿಯಲ್ಲಿ ಕ್ರೈಸ್ತ ಮಠದ ವಾಸಿಗಳ ವಿರುದ್ಧ ನಡೆಸಲಾದ ದಬ್ಬಾಳಿಕೆಯ ವಿವರ ಕೊಡಗು ಸಮಾಚಾರ ಪ್ರಕಟಿಸಿದೆ.

ಈ ಮತ್ತೆ ಸೋಮವಾರಪೇಟೆಯಲ್ಲಿ ಮತ ಸೌಹಾರ್ದವನ್ನು ಕಲಕಲು ವ್ಯವಸ್ಥಿತ ಸಂಚು ನಡೆದಿದೆ. ಸೋಮವಾರಪೇಟೆಯ ಸಮೀಪದ ಹೊಸತೋಟ ಗ್ರಾಮದ ಮುಖ್ಯರಸ್ತೆಯಲ್ಲಿ ಹಾರಿಸಲಾಗಿದ್ದ ಭಗವಾ ಧ್ವಜವನ್ನು ಹರಿದು ಹಾಕಲಾಗಿದೆ ಎಂದು ಆರೋಪಿಸಿ ಅದಕ್ಕೆ ಆ ಪ್ರದೇಶದ ಮುಸ್ಲಿಂ ಯುವಕರೇ ಕಾರಣರೆಂದು ಸಂಘ ಪರಿವಾರದವರು ಮಾಮೂಲಿನಂತೆ ಆರೋಪ ಮಾಡಿದ್ದಾರೆ. ಈ ಬಗ್ಗೆ ಐವರ ಮೇಲೆ ಪುಕಾರು ಕೊಟ್ಟ ಆಧಾರದಲ್ಲಿ ಅವರನ್ನು ಪೋಲೀಸರು ಬಂಧಿಸಿದ್ದಾರೆ. ಪುಕಾರು ಕೊಟ್ಟದ್ದಷ್ಟೇ ಅಲ್ಲದೆ ರಸ್ತೆ ತಡೆ, ಟಯರ್ ಸುಡುವುದು ಮೊದಲಾದ ಕೃತ್ಯಗಳ ಮೂಲಕ ಭಯದ ವಾತಾವರಣವನ್ನೂ ಭಜರಂಗದಳದವರು ಸೃಷ್ಟಿಸಿದ್ದಾರೆ.

'ವಿಚಾರಣೆ ನಡೆಸದೆ, ಸೂಕ್ತ ಆಧಾರಗಳಿಲ್ಲದೆ ಮೇಲುದ್ಧರಿಸಿದ ಸಂಘಟನೆಗಳವರ ಒತ್ತಡಕ್ಕೆ ಮಣಿದು ಸುಮ್ಮನೆ ಸುಮ್ಮನೆ ಅಮಾಯಕರನ್ನು ಬಂಧಿಸಬಾರದು' ಎಂದು ವಿನಂತಿಸಲು ಪೊಲೀಸ್ ಠಾಣೆಗೆ ಹೋದ ಮುಸ್ಲಿಂ ಮುಖಂಡರುಗಳ ವಿರುದ್ಧ ಹರಿಹಾಯ್ದಿದ್ದಾರೆ. ಕೆಲವು ಮುಸ್ಲಿಂ ಯುವಕರ ಮೇಲೆ ಪೊಲೀಸರ ಏದುರು ಹೊಡೆದಿದ್ದಾರೆ.

ಮಸೀದಿಯಲ್ಲಿ ಮುಸ್ಲಿಮರು ಜಮಾಯಿಸಿದಾಗ ಭಜರಂಗದಳದವರು ಅಲ್ಲಿಯೂ ಬಂದು 'ಮಸೀದಿಯಲ್ಲಿ ಮಾರಕಾಯುಧಗಳನ್ನು ಸಂಗ್ರಹಿಸಿಟ್ಟಿದ್ದಾರೆ' ಎಂದು ಸುಳ್ಳು ಪ್ರಚಾರ ಮಾಡಿ ಗಲಭೆ ಸೃಷ್ಟಿಸಲು ಯತ್ನಿಸಿದ್ದಾರೆ. ಪೊಲೀಸರ ಮೇಲೆ ಒತ್ತಡ ಹಾಕಿ ಹಲವರನ್ನು ಬಂಧಿಸುವಂತೆ ಒತ್ತಾಯಿಸಿದ್ದಾರೆ. ಭಜರಂಗದಳದವರ ದಬ್ಬಾಳಿಕೆಗೆ ಹೆದರಿ ಹಿಂದಿನ ಬಾಗಿಲಿನಿಂದ ಓಡಿದವರನ್ನು ಹಿಡಿದು ಭಜರಂಗ ದಳದವರು ಥಳಿಸಿದ್ದಾರೆ. ಈ ರೀತಿ ಭಗವಾ ಧ್ವಜದ ಹೆಸರಿನಲ್ಲಿ ಮುಸ್ಲಿಮರ ಮೇಲೆ ದೈಹಿಕ, ಮಾನಸಿಕ ಹಿಂಸೆ ಸಂಘಟಿಸಿದ್ದಾರೆ. ಪರಿಸ್ಥಿತಿಯನ್ನು ತಿಳಿಗೊಳಿಸಲು ರಂಗಕ್ಕಿಳಿದ ಸ್ಥಳೀಯ ಜನ ನಾಯಕ ವಿ.ಪಿ.ಶಶಿಧರ್ ಮತ್ತು ಇತರ ಪ್ರಗತಿಪರರ ವಿರುದ್ಧ ಪೊಲೀಸರು ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿದ್ದಾರೆ.

ರಾಜ್ಯದಲ್ಲಿ ಭಾ.ಜ.ಪ. ಅಧಿಕಾರಕ್ಕೆ ಬಂದ ಮೇಲೆ ಮುಸ್ಲಿಮರಿಗೆ, ಕ್ರೈಸ್ತರಿಗೆ ನ್ಯಾಯಕ್ಕೆ ರಕ್ಷಣೆ ಇಲ್ಲವಾಗಿದೆ. ಪೊಲೀಸ್ ಠಾಣೆಗಳು ಭಜರಂಗದಳ,



ಪತ್ರಿಕಾಗೋಷ್ಠಿಯಲ್ಲಿ ಜಿ.ವಿಜಯ, ಶಶಿಧರ್

ರಾ.ಸ್ವಯಂ ಸೇವಕ ಸಂಘಟನೆಯಂತಹ ಸಂಘಟನೆಗಳ ಕಚೇರಿಗಳಂತಾಗಿವೆ.

ಶಶಿಧರ್ ಮತ್ತು ಅವರ ಸಹಚರರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿರುವುದನ್ನು ನೋಡಿದರೆ ಮುಸ್ಲಿಮರು, ಕ್ರೈಸ್ತರು, ಪ್ರಗತಿಪರರನ್ನೊಳಗೊಂಡು ರಾಜಕೀಯ ವಿರೋಧಿಗಳ ಮೇಲೆ ಸರ್ಕಾರದ ಯಂತ್ರವನ್ನು ಉಪಯೋಗಿಸಿ ದ್ವೇಷದ ರಾಜಕೀಯದ ಕಾರ್ಯಾಚರಣೆ ನಡೆಸಲು ಯೋಜಿಸಿದ ತಂತ್ರವೇ ಭಗವಾಧ್ವಜ ಪ್ರಕರಣ ಎಂಬ ಸಂಶಯ ಬರುತ್ತಿದೆ.

ಹಿಂದೆ ನಡೆದ ಪಾಲೂರಿನ ದೇವಸ್ಥಾನದ ಘಟನೆ ನೆನಪಿಗೆ ಬರುತ್ತದೆ. ಅಂದು ಈ ಸಂಘಟನೆಗಳವರೇ ಆ ದೇವಸ್ಥಾನವನ್ನು ಹಾಳುಗೆಡವಿ, ಅನಂತರ ಅದನ್ನು ಮುಸ್ಲಿಮರ ಮೇಲೆ ಹಾಕಿ ಕೊಡಗಿನಾದ್ಯಂತ ಗಲಭೆ ಸೃಷ್ಟಿಸಿ ಮುಸ್ಲಿಂ ದೇವಾಲಯಗಳನ್ನು ಒಡೆದುಹಾಕಿದ್ದರು.

ಭಗವಾಧ್ವಜ ಹರಿದ ಘಟನೆ ಮತ್ತು ಅನಂತರದ ಬೆಳವಣಿಗೆಗಳನ್ನು ಗಮನಿಸಿದರೆ ಇಂದೂ ಇದೇ ರೀತಿ ನಡೆದಿರಬಹುದೇ ಎಂದು ಸಂಶಯ ಬರುತ್ತಿದೆ.

ಅಮಾಯಕ ಮುಸ್ಲಿಮರ ರಕ್ಷಣೆಗೆ ಅಲ್ಲಿನ ಜನ ನಾಯಕ ಶಶಿಧರ್‌ರವರ ನೇತೃತ್ವದಲ್ಲಿ ಐಕ್ಯ ವೇದಿಕೆ ರಚನೆಯಾಗಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

ಭಗವಾ ಧ್ವಜವನ್ನು ಹರಿದುಹಾಕಿರುವುದು ಖಂಡನಾರ್ಹ. ಈ ಘಟನೆಯ ಬಗ್ಗೆ ಸಮಗ್ರ, ನಿಷ್ಪಕ್ಷಪಾತ ತನಿಖೆ ಯಾಗಬೇಕು. ಯಾರೇ ತಪ್ಪಿತಸ್ಥರಿದ್ದರೂ ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಈ ಘಟನೆಯ ಹೆಸರಿನಲ್ಲಿ ಅಮಾಯಕ ಮುಸ್ಲೀಮರನ್ನು ದೈಹಿಕವಾಗಿಯೂ, ಮಾನಸಿಕವಾಗಿಯೂ ಹಿಂಸಿಸುವುದನ್ನು ಮಾತ್ರ ಒಪ್ಪುವುದು ಸಾಧ್ಯವಿಲ್ಲ.

ಪಿ.ಶಶಿಧರ್ ನೇತೃತ್ವದಲ್ಲಿ ಜಾತ್ಯಾತೀತ ಶಕ್ತಿಗಳ ವೇದಿಕೆ ರಚಿತವಾಗಿದ್ದು, ಅದರ ಆಶ್ರಯದಲ್ಲಿ ನವೆಂಬರ್ 17 ರಂದು ಸೋಮವಾರಪೇಟೆಯಲ್ಲಿ ನಡೆಯಲಿರುವ ಪ್ರತಿಭಟನಾ ಸಭೆಯ ಸಿದ್ಧತೆ ಭರದಿಂದ ನಡೆಯುತ್ತಿದೆ.

ವರದಿ: **ಸತ್ಯ**

ಈ ಓಬಮ್ಮ ಯಾರ್ಲಾ ?

'ಲೋ..., ಚಿಡ್ಡಿ ಚಿಕ್ಕ, ಆ ಲೈಟು ಆರುಸ್ಲಾ, ಅತ್ಲಾಗೆ'

'ಯಾಕ್ಲ ಎಣ್ಣೆ ತಮ್ಮಣ್ಣ, ಅಪ್ರೂಪಕ್ಕೆನೋ ಕರಂಟ್ ಬಂದೈತೆ, ಇರಗಂಟ ಲೈಟ್ ಇರ್ಲಿ ಬುಡು, ಇನ್ನೇನು ಯಾವಾಗೋಯ್ತದೋ ಈ ಕರೆಂಟು'.

'ಅದಿಕ್ಕೆ ಕನಲಾ ಏಳಿದ್ದು, ಈ ಕತ್ಲಾಗೇ.., ಇದ್ದೂ..., ಇದ್ದೂ..., ಈ ಕಣ್ಣಗೆ ಒಂತರಾ.. ಅಜೆಸ್ಟ್ ಆಗ್ ಬುಟದೆ, ಈ ಕರೆಂಟ್ ದೀಪ ಬಂದ್ರೆ, ನೋಡು ಒಂತರಾ ಕಣ್ಣಗೇ ಕುಕ್‌ದಂಗಾಯ್ತದೆ.'

'ಆದ್ರೂ ಯಾಕೋ ತೀರ ಅದಗೆಟ್ಟೋಯ್ತು ಬುಡು, ಈ ಕರೆಂಟು ಓಯ್ತಾನೆ ಇರುತ್ತೆ. ನಮ್ಮ ಕರನಾಟಕದಾಗೆ ಎಲ್ಲ ಕತ್ಲಲ್ಲೇ ಮುಳುಗೋಗೈತೆ.'

'ಅದ್ಯಾವಾಗ ನಿಮ್ಮ ಬಿ ಜೇ ಪಿ ಕರ್‌ನಾಟಕದಾಗೆ ಆದಿಕಾರಕ್ಕೆ ವಕ್ಕರಿಸ್ಕೊಂತೋ ಅವಾಗ್ಲೆ ಈ ರಾಜ್ಯಕ್ಕೆ ಗರ ಬಡ್ ದಂಗಾಗೈತೆ. ಅವಾಗಿಂದ್ಲೇ ಈ ರಾಜ್ಯ ಅಂದಕಾರದಲ್ಲಿ ಮುಳುಗೋಗೈತೆ ಕಣಲಾ ಚಿಡ್ಡಿ ಚಿಕ್ಕ...,'

'ಏ ಇದೇ ನೋಡು ಸರಿಯಿಲ್ಲ ಅಂತ ಏಳದು. ಅಲ್ಲ ಕಣಲಾ ಈ ಕರೆಂಟೋಗಾಕೂ ರಾಜಕೀಯಕ್ಕೋ ಏನ್ಲಾ ಸಂಮಂದ?'

'ಆ ಹ ಹ..., ಏನೂ ಗೊತ್ತಿಲ್ಲದಂಗೆ ಆಡಬ್ಯಾಡಲೇ...., ನಿಮ್ಮ ಮುಕ್ಯಮಂತ್ರಿ ಏಳಿಲ್ವೇ ಕರೆಂಟ ಇಲ್ದಿರಕ್ಕೆ ಇರೋದ ಪಕ್ಸಗಳೇ ಕಾರಣ ಅಂತ. ಅಲ್ಲ ನೆಟ್ಟುಗೆ ರಾಜ್‌ಬಾರ ಮಾಡಕ್ಯಾದಿದ್ದ ಮ್ಯಾಲೆ ಎಲ್ಲದುಕ್ಕೂ ಇರೋದ ಪಕ್ಸಗಳ ಮ್ಯಾಗೆ ಯಾಕೆ ಆರಾಡ್ ಬೇಕೂಂತಿನಿ, ಕುಣೆಲಾರದೋಳು ನೆಲ ಡೊಂಕು ಅಂದಂಗೆ?'

'ಏನೋ ಕಸ್ಟ ಕಾಲ, ಮಳೆ ಬಂದಿಲ್ಲ ಅಂಗೇ ಸೊಲ್ಪ ಸಾಕರಿಸ್ಕೊಂಡು ಒಗ್ಬೇಕಪ್ಪ....,'

'ಸಾಕರಿಸದೆ ಇನ್ನೆನ್ ಮಾಡ್‌ತಿದೀವಿ. ರೈತ್ರಿಗೆ ಪುಗಸಟ್ಟೆ ಕರೆಂಟು ಕೊಡ್ತಿವಿ ಅಂತ ಬೊಗಳೆ ಬುಟ್ರಲ್ಲಾ ಇದೇನಾ ನಿಮ್ಮ ಪುಗಸಟ್ಟೆ ಕರೆಂಟೂ ಅಂದ್ರೆ?'.

'ಒಗ್ಲಿ ಬುಡ್ಲಾ.., ನೀನು ಯವಾಗ್ಲೂ ಎಣ್ಣೆ ವಡದು ಮನಿಕ್ಕೊಂಡಿರಕ್ಕೆ ಕರೆಂಟು ಯಾತುಕ್ಲಾ?'


'ಲೋ ಚಡ್ಡಿ ಚಿಕ್ಕ...., ಇದು ಯಾಕೋ ..., ಯಾರದೋ ಸಾಪ ಇರಬೇಕು ಅನುಸುತ್ತೆ ಕಣಲಾ..'

'ಯಾಕಂಗಂತೀ...,?'

'ನೋಡ್ಲಾ ನಿಮ್ಮ ಮುಕ್ಯಮಂತ್ರಿ ಆನೆ ಮರಿ ತಗಂಡೋಗಿ ಕೇರಳದ ದೇವಸ್ತಾನಕ್ಕೆ ದಾನ ಕೊಟ್ಟವರಂತೆ. ಇಲ್ಲಿ ನೋಡುದ್ರೆ, ಕರ್ ನಾಟಕದಾಗೆ ಏಸುಟೊಂದು ಆನೆಗುಳ್ನ ಕರೆಂಟ್ ಬುಟ್ಟೂ..., ಬುಟ್ಟೂ...., ಸಾಯುಸ್ತಾವ್ರೆ.., ಆನೆ ಅಂದ್ರೆ ಏನೂ ಅಂತ ಅನ್ಕಂಡಿದಿಯ?'

'ಏನು?'

'ಗಣೇಸ ಕಣಲಾ , ನಮ್ಮ ಸಿವ ಪಾರ್ವತಿ ಮಗ ಗಣಪತಿನೆ ಅಲ್ವೇನ್ಲಾ ಆನೆ? ಆನೆಗೆ ಕರೆಂಟ್ ಬುಟ್ಟು ಸಾಯ್ಸಿದ್ದಿಕ್ಕೆ , ಗಣೇಸ ನೀವೂ ಕರೆಂಟಿಲ್ಲದೆ ಸಾಯ್ರಿ ಅಂತೇನಾದ್ರೂ ಸಾಪ ಕೊಟ್ಟಿರಬೇಕೂ ಅನ್ಸುಸ್ ತ್ಯೆತೆ. ಅದುಕ್ಕೆ ನಮ್ಮ ರಾಜ್ಯದಾಗೆ ಕರೆಂಟೆಲ್ಲ ಎಕ್ಕುಟ್ಟೋಗದೆ.'



'ಸುಮ್ಗಿರಪ್ಪ, ಎಲ್ಲ ಟೀವಿ ವಳಗೂ ಬಂದು ಬುರುಡೆ ಸಾಸ್ತ್ರ ಏಳ್ತರಲ್ಲ ಅಂಗೆ ಬಾಯಿಗೆ ಬಂದುದ್ದೆಲ್ಲ ಏನೇನೋ ವದರಬೇಡ. ಮೊದ್ಲೇ ನಮ್ಮ ಜನ ಇಂತವೆಲ್ಲ ನಂಬದು ಜಾಸ್ತಿ. ಇನ್ನು ಗಣೇಸ ಓಮ, ಆನೆ ಓಮ, ಕರೆಂಟ್ ಓಮ ಅಂತ ಸುರು ಅಚ್ಕಂಡ್ರೆ..., ಓಮ ಮಾಡ್ಸೋರಿಗೆ ಒಳ್ಳೆ ದಂದೆ ಆಯ್ತದೆ ಅಸ್ಟೆಯಾ.'

'ಅಪ್ರೂಪಕ್ಕೆ ಒಂದು ಒಳ್ಳೆ ಮಾತು ಏಳಿದೆ ಕಣಲಾ ಚಿಡ್ಡಿ ಚಿಕ್ಕ, ಸಬಾಸ್. ಅಂದಂಗೆ ನಿನ್ ಎಣ್ ಮಗೀಗೆ ಎಸ್ರು ಇಕ್ ಬೇಕೂ ಅಂತಿದ್ಯಲ್ಲ, ಕರಂಟು ಅಂತ ಎಸ್ರ ಇಕ್ಕು, ಮನೆಲಿ ಯವಾ..ಗ್ಲೂ.., ಕರೆಂಟ್ ಇರ್‌ತ್ಯೆತೆ, ಹ್ಹ.. ಹ್ಹ..., ಹ್ಹಾ.... '.

'ಇಲ್ಲ ಕಣಲಾ ಅದೊಂದು ರಗಳೆ ಆಗಿ ಕುಂತ್ಯೆತೆ, ನನ್ನೆಂಡ್ರು 'ಓಬಮ್ಮ' ಅಂತಿಡನ ಅಂತ ಕುಂತವಳೆ. ನಾನು ಬ್ಯಾಡ ಅಂತಿದೀನಿ.'

'ಒನಕೆ ಓಬವ್ವ ಗೊತ್ತು, ಈ ಓಬಮ್ಮ ಯಾರ್ಲಾ?'

'ಅದ್ಯಾವನೋ ಅಮೆರಿಕದ ಅದ್ಯಕ್ಸ ಆಗವನಂತೆ. ಈಗ ಮಕ್ಕಳಿಗೆ 'ಒಬಾಮ' ಅಂತ ಎಸರು ಇಡೋದೇ ಪ್ಯಾಸನ್ ಅಂತೆ. ಅದುಕ್ಕೆ ನನ್ನೆಂಡ್ರು ನಮ್ಮ ಎಣ್ ಮಗೀಗೆ 'ಓಬಮ್ಮ' ಅಂತ ಎಸರು ಇಡನಾ ಅಂತ ಕೂತವಳೆ...,'

'ಅಲೆ..ಲೆಲೆಲೇ..., ನೋಡ್ಲಾ ಎಂಗದೇ..., ಅಲ್ಲಿ ಅದ್ಯಕ್ಸನ ಎಸ್ರುನೆಲ್ಲ ಮಕ್ಕಳಿಗೆ ಇಡ್‌ತಾವರೆ. ಇಲ್ಲಿ ನಮ್ಮ ರಾಜ್ಯದಲ್ಲಿ ನೋಡು ಯಾರೊಬ್ರಾದ್ರೂ ಅವರ ಮಕ್ಕಳಿಗೆ ಯಡೂರಪ್ಪನ ಎಸರಿಟ್ಟವರಾ?'

'ಏ..., ಜನ ಮಕ್ಕಿಗೆ ಇಡಾದಿರ್ಲಿ, ಅವರೇ ಅವರ ಎಸ್ರು ಇಟ್ ಕಳದಲೇ ಬದಲಾಯಿಸಿಕೊಂಡವರೆ, ಇನ್ನು ಜನ ತಮ್ಮ ಮಕ್ಕಳಿಗೆ ಇಡ ಮಾತೆಲ್ಲಿಂದ ಬಂದೀತು?' ○


ಜನಶಕ್ತಿ ಕನ್ನಡ ವಾರಪತ್ರಿಕೆ

ಕೋಮುವಾದ - ಭಯೋತ್ಪಾದನೆಯ ಕುರಿತ ರಾಜ್ಯಮಟ್ಟದ ವಿಚಾರಸಂಕಿರಣ ಮೈಸೂರಿನಲ್ಲಿ ಇತ್ತೀಚೆಗೆ ನಡೆದಿದೆ. ಪ್ರಕಾಶ್ ಕಾರಟ್ ಮತ್ತಿತರರು ಅಲ್ಲಿ ಹೇಳುವುದೇನು? ಒಂದು ವರದಿ

“ಕೋಮುವಾದಕ್ಕೆ - ಭಯೋತ್ಪಾದನೆಗೆ ಐಕ್ಯ ಚಳುವಳಿಯೇ ಉತ್ತರ”

ಪ್ರಕಾಶ್ ಕಾರಟ್

ಭಾಷಾವಾರು ಪ್ರಾಂತ್ಯಗಳ ರಚನೆಯಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷ ಒಂದು ಆಂದೋಲನಾತ್ಮಕ ಪಾತ್ರವನ್ನು ನಿರ್ವಹಿಸಿತ್ತು. ಇಂದಿಗೂ ಕನ್ನಡ ಆಡಳಿತ ಭಾಷೆಯಾಗಿ ಎಲ್ಲ ಹಂತಗಳಲ್ಲೂ ಜಾರಿಯಾಗುವ ಮೂಲಕ ಜನ ಭಾಗವಹಿಸುವಿಕೆಯನ್ನು ದೃಢಗೊಳಿಸಬೇಕೆಂಬುದು ಜನಪರ ಆಶಯವಾಗಿದೆ. ಕನ್ನಡ ಭಾಷಿಕ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದ ಸಂದರ್ಭವನ್ನು ಉತ್ಸವವನ್ನಾಗಿ ಆಚರಿಸುವುದು ವಾಡಿಕೆ. ಇದೊಂದು ಈ ನೆಲದ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯ ಕೆಲವೇ ಸಂಕೇತಗಳನ್ನು ವಿಜೃಂಭಿಸುವ, ಭಾಷೆಗೆ ಮಾತ್ರವೇ ಮಹತ್ವ ನೀಡುವ ಆಚರಣೆಯಾಗಿ ಸೀಮಿತವಾಗಿದೆ. ದೇಶದ ಐಕ್ಯತೆ ಹಾಗೂ ಸಮಗ್ರತೆಗೆ ತೀವ್ರ ಸವಾಲಾಗಿರುವ ಕೋಮುವಾದ, ಭಯೋತ್ಪಾದನೆಗಳಿಗೆ ಎದುರಾಗಿ ಸೌಹಾರ್ದ ಜೀವನ ವಿಧಾನವನ್ನು ಜಾತ್ಯಾತೀತ ಮೌಲ್ಯಗಳು ಹಾಸು ಹೊಕ್ಕಾಗಿರುವ ಶರಣ, ದಾಸ, ಸೂಫಿ ಸಾಹಿತ್ಯ ಪರಂಪರೆಯನ್ನು ಕರ್ನಾಟಕವು ಒಪ್ಪಿಕೊಂಡಿದೆ. ಆದರೆ ಇತ್ತೀಚಿನ ಕೆಲ ಅವಧಿಯಲ್ಲಿ ಮತೀಯವಾದವು ರಾಜ್ಯದ ಎಲ್ಲೆಡೆ ನೆಲೆ ಕಂಡುಕೊಳ್ಳುತ್ತಿರುವುದು ಆತಂಕಕಾರಿಯಾಗಿದೆ. ದಕ್ಷಿಣ ಭಾರತದಲ್ಲಿ ಮೊತ್ತ ಮೊದಲ ಬಾರಿಗೆ ರಾಜ್ಯವೊಂದರ ಅಧಿಕಾರ ಹಿಡಿದ ಬಿಜೆಪಿಯ ತನ್ನ ಸಂಘ ಪರಿವಾರದ ವಿಧ್ವಂಸಕ ನಿರ್ದೇಶಿತ ಸೂತ್ರಗಳ ಜಾರಿಗೆ ಕರ್ನಾಟಕದ ನೆಲವನ್ನು ಹದಗೊಳಿಸಿದೆ. ಕ್ರೈಸ್ತ ಧಾರ್ಮಿಯರ ಮೇಲು, ಅವರ ಆರಾಧನಾ ಸ್ಥಳಗಳ ಮೇಲೂ ದಾಳಿ ನಡೆಸುವ ಮೂಲಕ ತಮ್ಮ ಅಸಹನೆಯನ್ನು ವ್ಯಕ್ತಪಡಿಸಿದ ಸಂಘ ಪರಿವಾರದ ಭಜರಂಗಿಗಳು ಇಡೀ ರಾಜ್ಯಕ್ಕೆ ಕಿಚ್ಚಿಟ್ಟಿವೆ. ಕೋಮುಗಲಭೆಗಳನ್ನು ಹುಟ್ಟುಹಾಕಿ ಇಡೀ ಸಮಾಜವನ್ನು ಪ್ರಕ್ಷುಬ್ದಗೊಳಿಸಿ ಧ್ರುವೀಕರಣಕ್ಕೆ ಅವಕಾಶಮಾಡಿಕೊಟ್ಟು ಅಧಿಕಾರಕ್ಕೇರುವ ಬಿಜೆಪಿಯ ಹುನ್ನಾರ ಈಗಾಗಲೇ ಜಗಜ್ಜಾಹೀರಾಗಿದೆ. ಕರ್ನಾಟಕದ ಈ ನೆಲವನ್ನು ಕೋಮುವಾದಿಗಳ ಹಿಂಸಾ ಕಣವನ್ನಾಗಿಸಲು ಬಿಡದೆ ಕುವೆಂಪುರವರ ಆಶಯದ ಸರ್ವಜನಾಂಗದ ಶಾಂತಿಯ ತೋಟವಾಗಿಯೇ ಮುಂದುವರೆಯಬೇಕು ಎನ್ನುವ ಸದಾಶಯದೊಂದಿಗೆ ಸಿಪಿಐ(ಎಂ) ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಈ ಬಾರಿಯ ರಾಜ್ಯೋತ್ಸವವನ್ನು ಸೌಹಾರ್ದ ಕರ್ನಾಟಕ ರಾಜ್ಯೋತ್ಸವವನ್ನಾಗಿ ಆಚರಿಸಲು ನಿರ್ಧರಿಸಿ ಹಲವಾರು ಕಾರ್ಯಕ್ರಮಗಳನ್ನು ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಸಾಂಸ್ಕೃತಿಕ ರಾಜಧಾನಿ ಎಂದೇ ಪರಿಗಣಿಸಲ್ಪಡುವ ಮೈಸೂರಿನಲ್ಲಿ ದಿನಾಂಕ ೩ರಂದು ಶನಿವಾರ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ:ಪ್ರಕಾಶ್ ಕಾರಟ್ ರವರು ‘ಕೋಮುವಾದ ಮತ್ತು ಭಯೋತ್ಪಾದನೆ’ ಕುರಿತು ವಿಚಾರವನ್ನು ಮಂಡಿಸಿದರು.



ಕಿಕ್ಕಿರಿದು ನೆರೆದ ನಾಗರೀಕರು

ಹಿಂತಿರುಗಿ ನೋಡಿದಾಗ

ಕೋಮುವಾದ ಹಾಗೂ ಭಯೋತ್ಪಾದನೆ ಎಂಬ ಎರಡು ಅಪಾಯಗಳು ಇಂದು ದೇಶಾದ್ಯಂತ ತಮ್ಮ ಹಿಂಸಾತ್ಮಕ ಅಸ್ತಿತ್ವವನ್ನು ವ್ಯಕ್ತಪಡಿಸುತ್ತಾ ನಮ್ಮ ಸಾಮಾಜಿಕ ಸೌಹಾರ್ದತೆಗೆ ಸವಾಲಾಗುತ್ತಿರುವ ಈ ಸಂದರ್ಭದಲ್ಲಿ ಸೌಹಾರ್ದತೆಯನ್ನು ಪ್ರತಿಪಾದಿಸಲು ಭಯೋತ್ಪಾದನೆಯನ್ನು ಖಂಡಿಸುವ ಇಂತಹ ಸಮಾವೇಶ ಸಮಯೋಜಿತವಾಗಿದೆ ಎಂದು ಕಾಂ: ಕಾರಟ್ ನುಡಿದರು. ಭಾರತದಲ್ಲಿ ಕೋಮುವಾದದ ಸಮಸ್ಯೆ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಕಾಡುತ್ತಿತ್ತು. ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಒಂದು ಸಂಘಟಿತ ಐಕ್ಯ ಹೋರಾಟವನ್ನು ಕಟ್ಟುವುದಕ್ಕೂ ಇದು ಅಡ್ಡಿಯಾಗಿತ್ತು. ಹೋರಾಟದ ಅಂತಿಮ ನೆಲೆಯಲ್ಲಿ ವಿಮೋಚನೆಗೊಂಡ ನಂತರವೂ ದೇಶ ವಿಭಜನೆಯಾದಾಗ ಲಕ್ಷಾಂತರ ಜನ ಕೋಮುಗಲಭೆಗಳಲ್ಲಿ ಹತ್ಯೆಗೀಡಾದರು. ತಮ್ಮ ಮನೆಗಳನ್ನು ತೊರೆದು ಇನ್ನೊಂದು ದೇಶಕ್ಕೆ ಹೋಗುವ ಅನಿವಾರ್ಯತೆಗೆ ಒಳಗಾದರು. ಒಂದು ಗಮನಾರ್ಹ ಸಾಧನೆಯನ್ನು ಈ ಸಂದರ್ಭದಲ್ಲಿ ನೆನಪಿಸಲೇಬೇಕಾಗುತ್ತದೆ. ಸ್ವಾತಂತ್ರ್ಯ ಚಳುವಳಿಯ ಕಣ್ನೋಟವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ನಮ್ಮ ಸಂವಿಧಾನ ಕರ್ತೃಗಳು ಭಾರತವು ಒಂದು ಜಾತ್ಯಾತೀತ ಪ್ರಜಾಪ್ರಭುತ್ವ ಗಣರಾಜ್ಯವಾಗಿರ ಬೇಕೆಂದು ಬಯಸಿದರು. ಇದು ಕೋಮುವಾದಿ ಶಕ್ತಿಗಳ ಹಿನ್ನಡೆಗೆ ಕಾರಣವಾಯಿತು. ಆದರೆ ಕಳೆದ ಎರಡು ದಶಕಗಳ ಅವಧಿಯಲ್ಲಿ ಕೋಮುವಾದವನ್ನು ರಾಜಕೀಯ ಕ್ರೋಢೀಕರಣದ ಸರಳ ಮಾರ್ಗವಾಗಿ ಬಳಸಲಾಗುತ್ತಿದೆ. ‘ಹಿಂದೂ ರಾಷ್ಟ್ರ’ ವನ್ನು ಪ್ರತಿಪಾದಿಸುವ ಬಹುಸಂಖ್ಯಾತ ಕೋಮುವಾದ ಹಾಗೂ ಪ್ರತಿಗಾಮಿ ಸಿದ್ಧಾಂತದ ಅಲ್ಪಸಂಖ್ಯಾತ ಕೋಮುವಾದ ಹೇಗೆ ಬೆಳೆದವು ಎನ್ನುವುದರ ವಿವರಗಳು ಈಗಾಗಲೇ ಮನವರಿಕೆ ಯಾಗಿರುವುದರಿಂದ ಆ ಬಗ್ಗೆ ವಿವರಗಳನ್ನು ನೀಡುವ ಅವಶ್ಯಕತೆ ಇಲ್ಲ ಎಂದು ಕಾಂ:ಕಾರಟ್ ಹೇಳಿದರು.

ಜಾತ್ಯಾತೀತರ ಕೊರತೆ - ತಪ್ಪುಗಳು

ಬಂಡವಾಳಶಾಹಿ ವ್ಯವಸ್ಥೆಯು ಈಗಿನ ಸಾಮಾಜಿಕ ಕ್ರಮದಲ್ಲಿ ಸ್ವಾತಂತ್ರ ಭಾರತದ ಆಳುವ ವರ್ಗಗಳು ಜನರ ಆರ್ಥಿಕ, ಸಾಮಾಜಿಕ ಕಾಳಜಿಗಳ ಬಗ್ಗೆ ದಿವ್ಯ ನಿರ್ಲಕ್ಷ್ಯವನ್ನು ತೋರುತ್ತಿವೆ. ಆಶೋತ್ತರಗಳಿಗೆ ಸ್ಪಂದಿಸುವಲ್ಲಿ ವಿಫಲವಾಗಿದೆ. ಜಾತ್ಯಾತೀತ ನಿಲುವನ್ನು ಹೊಂದಿರುವ ಪಕ್ಷಗಳು, ಸಮೂಹಗಳು, ಸಂಘಟನೆಗಳು ಕೋಮುವಾದದ ಜೊತೆ ರಾಜಿಯಾಗುವ ಮೂಲಕ ಈ ತಪ್ಪುಗಳನ್ನು ಮತ್ತೆ ಮತ್ತೆ ಎಸಗುತ್ತಿವೆ. ದೇಶದ ಜಾತ್ಯಾತೀತ ಗುಣಗಳ ಸ್ವರೂಪವನ್ನು ಕಾಯ್ದುಕೊಳ್ಳುವಲ್ಲಿ ಮಾತು ಹಾಗೂ ಕೃತಿಯಲ್ಲಿ ಹಿಂಜರಿತವನ್ನು ಅವು ವ್ಯಕ್ತಪಡಿಸುತ್ತಿವೆ.


ವಿಚಾರಸಂಕಿರಣ ಉದ್ಘಾಟನೆ

ರಾಜಕೀಯ ಕೋಮುವಾದೀಕರಣ ಪ್ರಚ್ಛನ್ನವಾಗಿ ಗೋಚರಿಸುತ್ತಿದೆ. ಬಿಜೆಪಿ, ಆರ್‌ಎಸ್‌ಎಸ್‌ಗಳು ದಿನವೂ ಅಧಿಕಾರ ಗ್ರಹಣದ ತಮ್ಮ ರಾಜಕೀಯ ಕಾರ್ಯಸೂಚಿಯ ಜಾರಿಗೆ ಸಮಾಜವನ್ನು ಕೋಮು ಆಧಾರದಲ್ಲಿ ಧೃವೀಕರಿಸುವ ಅನಂತರ ಕ್ರೋಢೀಕರಿಸುವ ಕಾರ್ಯದಲ್ಲಿ ತೊಡಗಿವೆ. ಕೋಮುವಾದವನ್ನು ಸೈದ್ಧಾಂತಿಕವಾಗಿ ಎದುರಿಸಬೇಕಾದ ಜಾತ್ಯಾತೀತ ಶಕ್ತಿಗಳ ವಿಫಲತೆಯು ಕೋಮುವಾದಕ್ಕೆ ಮುಕ್ತ ಅವಕಾಶ ಮಾಡಿಕೊಟ್ಟಿದೆ. ಮಹಾರಾಷ್ಟ್ರದ ಧುಳೆಯಲ್ಲಿ, ಉತ್ತರ ಪ್ರದೇಶದ ಆಜಮ್‌ಘರದಲ್ಲಿ, ಒರಿಸ್ಸಾದಲ್ಲಿ ಕರ್ನಾಟದಲ್ಲಿ ಘಟಿಸಿದ ಕೋಮು ಗಲಭೆಗಳು ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ಪರಿವಾರ ಕೋಮು ಧೃವೀಕರಣಗೊಳಿಸುವ ಪ್ರಯತ್ನಗಳಾಗಿವೆ. ಒರಿಸ್ಸಾದಲ್ಲಿ ಕ್ರೈಸ್ತರ ಮೇಲೆ ಯೋಜಿತ ಹಿಂಸಾದಾಳಿಯನ್ನು ನಡೆಸಲಾಯಿತು. ಕಂದಮಾಲ್ ಜಿಲ್ಲೆಯಲ್ಲಿ ಪೋಲೀಸರ, ಆಡಳಿತದ ಮಧ್ಯಪ್ರವೇಶವಿಲ್ಲದೇ ಇದ್ದುದರಿಂದ ಮೂವತ್ತು ಸಾವಿರ ಜನ ನಿರ್ವಸಿತರಾದರು. ಮೂರು ಸಾವಿರ ಮನೆಗಳನ್ನು ಧ್ವಂಸಗೊಳಿಸಲಾಯಿತು. ಪ್ಯಾರಾ ಮಿಲಿಟರಿಯ ನಲವತ್ತು ಕಂಪನಿಗಳು ಇದ್ದಾಗಲೂ ಆರು ವಾರಗಳಿಂದ ನಿರಂತರ ಹಿಂಸಾಚಾರ ನಡೆಯುತ್ತಿದೆ. ಒರಿಸ್ಸಾದಲ್ಲಿ ಬಿಜೆಪಿಯು ಸಮಿಶ್ರ ಸರ್ಕಾರದ ಪಾಲುದಾರ ಪಕ್ಷವಾಗಿದೆ. ಆಡಳಿತ ವ್ಯವಸ್ಥೆಯು ಸಂಪೂರ್ಣವಾಗಿ ಕೋಮುವಾದೀ ಕರಣಗೊಂಡಿರುವುದರಿಂದ ಒಬ್ಬ ಕ್ರೈಸ್ತ ಸನ್ಯಾಸಿನಿಯನ್ನು ಬೆತ್ತಲೆ ಮೆರವಣಿಗೆ ಮಾಡಿದಾಗ ಪೋಲೀಸರು ಮಧ್ಯಪ್ರವೇಶ ಮಾಡಲಿಲ್ಲ. ಪ್ರಚೋದನಕಾರಿಯಾದ, ಧೃವೀಕರಣಗೊಳಿಸುವ ನಿರಂತರ ಪ್ರಚಾರಗಳು ಪ್ರಭುತ್ವದ ಎಲ್ಲ ಸಂಸ್ಥೆಗಳ ಮೇಲೆ ಪರಿಣಾಮ ಬೀರುತ್ತದೆ. ಕರ್ನಾಟಕದಲ್ಲಿ ಇದೇ ರೀತಿಯ ವಾತಾವರಣವಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಾದ ಕ್ರೈಸ್ತರ ಪ್ರಾರ್ಥನಾ ಮಂದಿರಗಳ ಮೇಲಿನ ದಾಳಿಗಳು ಎಲ್ಲರ ಗಮನಕ್ಕಿವೆ. ಇಲ್ಲಿಯೂ ಬಿಜೆಪಿ ಅಧಿಕಾರದಲ್ಲಿದೆ. ಎಲ್ಲೆಲ್ಲಾ ಬಿಜೆಪಿ ಅಧಿಕಾರದಲ್ಲಿದೆಯೋ ಅಲ್ಲೆಲ್ಲ ಮುಸ್ಲಿಮರು, ಕ್ರೈಸ್ತರ ಮೇಲೆ ದಾಳಿಗಳು ಅಬಾಧಿತವಾಗಿ ನಡೆಯುತ್ತಿವೆ. ಮಧ್ಯಪ್ರದೇಶದಲ್ಲಿ ದಿನಕ್ಕೊಂದರಂತೆ ಗಲಭೆಗಳು ವರದಿಯಾಗುತ್ತಿವೆ. ರಾಜಸ್ಥಾನದಲ್ಲಿ ಛತ್ತೀಸ್‌ಘಡದಲ್ಲಿಯೂ ಪರಿಸ್ಥಿತಿ ವಿಭಿನ್ನವಾಗೇನೂ ಇಲ್ಲ ಎಂದು ಕಾಂ: ಕಾರಟ್ ವಿವರಿಸಿದರು.

ಎಲ್ಲಿ ಮತಾಂತರ?

ಈ ಎಲ್ಲಾ ಗಲಭೆಗಳ ಹಿಂದೆ ವ್ಯವಸ್ಥಿತವಾದ ಪ್ರಚಾರವೊಂದು ಕೆಲಸ ಮಾಡುತ್ತಿದೆ. ದೊಡ್ಡ

ಪುಟ 15ಕ್ಕೆ

ವೇದಿಕೆಯಲ್ಲಿ ಕಾಂ. ವಿ.ಜೆ.ಕೆ.ನಾಯರ್, ಕೆ. ಬಸವರಾಜು, ಜಿ.ವಿ.ಶ್ರೀರಾಮರೆಡ್ಡಿ, ಎಸ್.ವರಲಕ್ಷ್ಮಿ, ಪ್ರಕಾಶ್ ಕಾರಟ್, ಜಗನ್ನಾಥ್ ಮುಂತಾದವರು



ಜನಶಕ್ತಿ ಕನ್ನಡ ವಾರಪತ್ರಿಕೆ

ನವೆಂಬರ್ 23, 2008

ಬೆಳ್ತಂಗಡಿ

ರೈತರ ಬೆಳೆಯನ್ನು ಕೊಂದ ಸರ್ಕಾರ

ರೈತರು - ಇದು ತಾವು ಕಾನೂನುಬದ್ಧವಾಗಿ ಮಾಲೀಕತ್ವ ಹೊಂದಿರುವ ಜಮೀನು. ರಬ್ಬರ್ ಗಿಡಗಳನ್ನು ಕಡಿಯಬೇಡಿ ಎಂದು ಎಷ್ಟೆಲ್ಲಾ ಕೇಳಿಕೊಂಡರು ಅವರು ಕೇಳಿಲಿಲ್ಲ. ಆ ಅರಣ್ಯ ಇಲಾಖೆ ಅಧಿಕಾರಿಗಳು ಬೆಳೆದು ನಿಂತ ರಬ್ಬರ್ ತೋಟವನ್ನು ಕಡಿಸೇ ಬಿಟ್ಟರು. ತೀವ್ರ ಪ್ರತಿಭಟನೆ, ವಿಚಾರಣೆಯ ನಂತರ ಈಗ ಅದು ಅರಣ್ಯ ಇಲಾಖೆಗೆ ಸೇರಿದ್ದಲ್ಲ, ರೈತರಿಗೆ ಸೇರಿದ ಜಮೀನೆಂದು ಸಾಬೀತಾಗಿದೆ. ಆಗಿರುವ ಲಕ್ಷಾಂತರ ರೂಪಾಯಿಗಳ ನಷ್ಟಕ್ಕೆ ಯಾರು ಹೊಣೆ?.

ಬೆಳ್ತಂಗಡಿ ತಾಲ್ಲೂಕು ಇಂದಬೆಟ್ಟು ಮತ್ತು ಕಡಿರುದ್ಯಾವರ ಗ್ರಾಮದ 8 ರೈತರ ಕೃಷಿ ಭೂಮಿಗೆ ಅಕ್ರಮ ಪ್ರವೇಶ ಮಾಡಿ ಜಮೀನಿಲ್ಲಿ ಬೆಳೆದಿದ್ದ 3 ರಿಂದ 4 ವರ್ಷ ಪ್ರಾಯದ ರಬ್ಬರ್ ಗಿಡಗಳನ್ನು ಬೆಳ್ತಂಗಡಿ ಅರಣ್ಯ ಇಲಾಖೆ ಕಡಿದು ಹಾಕಿದೆ. ಈ ಸ್ಥಳ ಸರ್ಕಾರಿ ಸ್ಥಳವಾಗಿದ್ದು, ಅಕ್ರಮಸಕ್ರಮ ಕಾನೂನಿನಡಿಯಲ್ಲಿ 9 ವರ್ಷಗಳ ಹಿಂದೆ ಸರ್ಕಾರದಿಂದ ಹಕ್ಕು ಪತ್ರ ಪಡೆದು, ಬ್ಯಾಂಕಿನಲ್ಲಿ ಜಮೀನು ಒತ್ತೆ ಇಟ್ಟು ಸಾಲ ಮಾಡಿ ರಬ್ಬರ್ ಬೆಳೆ ಬೆಳೆದ ರೈತರನ್ನು ಕಂಡು ನಂಜುಗಾರಿದ ಸರ್ಕಾರದ ಕತೆಯಿದು.

ಅರಣ್ಯ ಇಲಾಖಾಧಿಕಾರಿಗಳಾದ ಮನೋಹರ ಸುವರ್ಣ(ವನ್ಯ ಜೀವಿ ವಿಭಾಗ) ರವಿಚಂದ್ರ ಬಾಲಕೃಷ್ಣ ಮೊದಲಾದವರ ದರ್ಪ ದಬ್ಬಾಳಿಕೆಗಳಿಗೆ ಈ ಗ್ರಾಮಗಳ ಬಡ ರೈತರು ಬಲಿಯಾಗಿದ್ದಾರೆ.

"ಸರ್ವೆ ಮಾಡಿಸಿ ಅದು ಅರಣ್ಯ ಇಲಾಖೆ ಜಾಗ ಆಗಿದ್ದರೆ ಬಿಟ್ಟು ಕೊಡುತ್ತೇವೆ. ಗಿಡ ಕಡಿಯಬೇಡಿ" ಎಂದು ಮನೆ ಮಂದಿಯಲ್ಲಾ ಅಂಗಲಾಚಿ ಬೇಡಿಕೊಂಡರು. ಆದರೂ ಕೇಳದ ಅಧಿಕಾರಿಗಳು ಮಹಿಳೆಯರನ್ನು ಕೆಟ್ಟ ಮಾತುಗಳಿಂದ ಹೀಯಾಳಿಸಿ, ಕೋವಿ ತೋರಿಸಿ ಬೆದರಿಸಿ ಗಂಡಸರನ್ನು ಬಂಧಿಸಿದರು. ತರುವಾಯ ಯಾವ ತಡೆಯೂ ಇಲ್ಲದೆ ತೋಟ ನಾಶವಾಯಿತು.

ಇದರ ವಿರುದ್ಧ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆ ಜಂಟಿಯಾಗಿ ಬೆಳ್ತಂಗಡಿಯಲ್ಲಿ ಈ ಅರಣ್ಯ ಇಲಾಖೆಯ ದೌರ್ಜನ್ಯ ಖಂಡಿಸಿ, ಸೂಕ್ತ ಪರಿಹಾರ ಹಾಗೂ ನ್ಯಾಯಕ್ಕಾಗಿ ಹೋರಾಟ ನಡೆಸಿದರು.

ಹೋರಾಟವನ್ನುದ್ದೇಶಿಸಿ ಜನವಾದಿ ಮಹಿಳಾ ಸಂಘದ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷರಾದ ಕೆ.ನೀಲಾ ಅವರು ಮಾತನಾಡುತ್ತಾ, ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ ನೀಡಿ ದೇಶವನ್ನು ಸಾಕುವ ರೈತರ ಬೆಳೆಯನ್ನೇ ಕಡಿದು ನಾಶ ಮಾಡುವ ಸರ್ಕಾರದ ಪೈ ಶಾಚಿಕ ನೀತಿಯನ್ನು ಖಂಡಿಸಿದರು. ಬೆಳ್ತಂಗಡಿ ಕ್ಷೇತ್ರದಲ್ಲಿ ಕಾಂಗ್ರೆಸ್ ಎಂ.ಎಲ್.ಎ. ಇದ್ದಾರೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ. ಹೀಗಿದ್ದು ಬೆಳೆದು ನಿಂತ ಗಿಡಗಳ ರಕ್ಷಣೆ ಮಾಡುವ ಬದಲು ಕಡಿದು ನಾಶ ಮಾಡುವ ಪ್ರವೃತ್ತಿ ದಕ್ಷಿಣ ಕನ್ನಡ ಜಿಲ್ಲೆಯೇ ನಾಚುವಂತೆ ಕೃತ್ಯ ಈ ಅರಣ್ಯ ಇಲಾಖೆ ಮೂಲಕ ಸರ್ಕಾರ ಮಾಡಿದೆ ಎಂದರು.

ಈ ರೈತರಿಗೆ ಪರಿಹಾರ ನೀಡಬೇಕು, ನಾಶವಾದ ಕೃಷಿಯನ್ನು ಮತ್ತೆ ಬೆಳೆಸಿ ಕೊಡಬೇಕು. ಈ ದುಷ್ಕೃತ್ಯ ವೆಸಗಿದಲ್ಲದೆ ಮಹಿಳೆಯನ್ನು ಅವಾಚ್ಯವಾಗಿ ಕಂಡು, ಬಂದೂಕು ತೋರಿಸಿ ಹೆದರಿಸಿ, ರೈತರನ್ನು ಬಂಧಿಸಿ ಕಾನೂನು ಬಾಹಿರ ಚಟುವಟಿಕೆ ಮಾಡಿದ ಅರಣ್ಯ ಅಧಿಕಾರಿಗಳನ್ನು ಕೆಲಸದಿಂದ ವಜಾಗೊಳಿಸಬೇಕು ಎಂದರು.

ಜನವಾದಿ ಮಹಿಳಾ ಸಂಘಟನೆಯ ಇನ್ನೋರ್ವ ಮುಖಂಡರಾದ ಮೀನಾಕ್ಷಿ ಬಾಳಿ, ರಾಜ್ಯ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿ, ಕಾರ್ಮಿಕ ಮುಖಂಡರಾದ ನ್ಯಾಯವಾದಿ ಬಿ.ಎಂ.ಭಟ್ ಮುಂತಾದವರು ಹೋರಾಟ ಬೆಂಬಲಿಸಿ ಮಾತನಾಡಿದರು.

ಮೊದಲಿಗೆ ಪ್ರಸ್ತಾವನೆ ಮಾಡಿದ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಹರಿದಾಸ ಮಾತನಾಡುತ್ತಾ ರೈತರಿಗೆ ಮಾತ್ರ ರೈತರ ನೋವು ಅರ್ಥ ಆಗಲು ಸಾಧ್ಯ ರಬ್ಬರ್ ಬೆಳೆ ನಾಶ ಆದ ರೈತರ ಮನೆಯಲ್ಲಿ ಸ್ಮಶಾನ ಮೌನ ಆವಿರಿಸಿದೆ. ರೈತರಿಗಾದ ಈ ಅನ್ಯಾಯ ದೇಶಕ್ಕಾದ ಅನ್ಯಾಯ ರಬ್ಬರ್ ಗಿಡವು ಹಸಿರೇ ಆಗಿರುವಾಗ ಹಸಿರನ್ನೇ ನಾಶ ಮಾಡುವ ಕೆಲಸ ಅರಣ್ಯ ಇಲಾಖೆಯ ಕೆಲಸ ಎಂಬುದು ನಿಜವಾಗಿದೆ ಎಂದರು.

ಮುತ್ತಿಗೆ

ಕೊನೆಗೆ ಉಪ ತಹಶೀಲ್ದಾರ್‌ರು ಮನವಿ ಸ್ವೀಕರಿಸಿ, ಕ್ರಮ ಕೈಗೊಳ್ಳುತ್ತೇನೆ ಎಂದಾಗ ಒಪ್ಪದ ಪ್ರತಿಭಟನಾಕಾರರು ಈಗಲೇ ಕ್ರಮ ಕೈಗೊಳ್ಳಬೇಕೆಂದು ಪಟ್ಟು ಹಿಡಿದು ತಾಲ್ಲೂಕು ಕಛೇರಿಗೆ ಮುತ್ತಿಗೆ ಹಾಕಿದರು. ತಹಶೀಲ್ದಾರ್‌ರು ಬರಲಿ ಅಲ್ಲಿಯ ತನಕ ಕಾಯುತ್ತೇವೆ ಎಂದರು ಕೊನೆಗೆ ಸಂಜೆ ತಹಶೀಲ್ದಾರರವರು 1 ವಾರದ ಒಳಗೆ ಜಾಗದ ಅಳತೆ ಮಾಡಿಸಿ ನ್ಯಾಯ ತಿಳಿದು ಕ್ರಮ ಕೈಗೊಳ್ಳುವುದಾಗಿ ಭರವಸೆ ಇತ್ತರು.

ಸತ್ಯ ಏನೆಂಬುದು ಸಿದ್ಧವಾಯಿತು

ಇದೀಗ ಸದರಿ ಜಮೀನಿನ ಅಳತೆ ನಡೆದಿದೆ. ಅದು ಅರಣ್ಯ ಇಲಾಖೆಗೆ ಸೇರಿದ ಜಮೀನಲ್ಲವೆಂದು ದೃಢಪಟ್ಟಿದೆ. ಈಗ ರೈತರಿಗೆ ತಲಾ 20 ಲಕ್ಷ ರೂ ಪರಿಹಾರ, ಪುನಃ ಕೃಷಿ ಮಾಡುವ ವೆಚ್ಚ, ನೀಡಬೇಕು ಹಾಗೂ ತಪ್ಪು ಮಾಡಿದ ಅಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಬೇಕೆಂದು ರೈತ ಸಂಘ ಒತ್ತಾಯಿಸಿದೆ.

ಈ ನಡುವೆ ಇಂಗು ತಿಂದ ಮಂಗನಂತಾದ ಬಿಜೆಪಿಯವರು ಅದು ಅರಣ್ಯ ಇಲಾಖೆಯ ಕೆಲಸ. ಅವರ ವಿರುದ್ಧ ಹೋರಾಡಿ ಎನ್ನುತ್ತಿದೆ. ಸರ್ಕಾರದಿಂದ ಅರಣ್ಯ ಇಲಾಖೆ ಮೇಲೋ ಕೆಳಗೋ ಎಂಬ ಪ್ರಶ್ನೆ ರೈತರು ಬಿಜೆಪಿಗರಲ್ಲಿ ಕೇಳುವಂತಾಗಿದೆ. ತಮಗೆ ಅನ್ಯಾಯ, ಅವಮಾನ ಮಾಡಿದ ಅಧಿಕಾರಿಗಳ ವಿರುದ್ದ ಪ್ರತಿಭಟಿಸಲು ನೆರವಾದ ಸಾಧ್ಯವಾದ ಮಹಿಳಾ ಸಂಘ, ಸಂಘ ರೈತ ಸಂಘಗಳ ಬಗ್ಗೆಯೂ ರೈತ ಮಹಿಳೆಯರಲ್ಲಿ ಗೌರವ ಮೂಡುವಂತಾಗಿದೆ. ಹೋರಾಟ ಕಾರ್ಯಕ್ರಮವನ್ನು ಸಮುದಾಯದ ಕ್ರಾಂತಿ ಗೀತೆಯೊಂದಿಗೆ, ಜನವಾದಿ ಮಹಿಳಾ ಸಂಘದ ಬೆಳ್ತಂಗಡಿ ತಾಲ್ಲೂಕು ಸಮಿತಿಯ ಅಧ್ಯಕ್ಷರಾದ ವಕೀಲರಾದ ಸುಕನ್ಯ ಅವರು ನಡೆಸಿಕೊಟ್ಟರು. ಹೋರಾಟಕ್ಕೆ ಬೆಂಬಲ ನೀಡಿ ಸಿಪಿಐ(ಎಂ) ಪಕ್ಷದ ತಾಲ್ಲೂಕು ಕಾರ್ಯದರ್ಶಿ ವಕೀಲರಾದ ಶಿವಕುಮರ್ ಮಾತಾಡಿದರು. ಹೋರಾಟದಲ್ಲಿ ಜೆಎಂಎಸ್ ತಾಲ್ಲೂಕು ಕಾರ್ಯದರ್ಶಿ ಕಿರಣ್ ಪ್ರಭಾ, ನೆಬಿಸ, ಬಾಲಕ್ಕ, ಸುಧಾ ಕೆ.ರಾವ್, ಸಿಐಟಿಯುನ ಮುಖಂಡರಾದ ಸುಂದರಿ, ಜಯರಾಂ, ಗೀತ ಯಶೋಧ, ನಿಲೇಶ್, ಈಶ್ವರಿ, ಜುಬೇದ, ಕವಿತ, ರೋಹಿಣಿ, ಸುಮಲತಾ, ವಿಜಯ ಮೊದಲಾದವರು ನೇತೃತ್ವ ವಹಿಸಿದ್ದರು.

ವರದಿ : **ಕವಿತ ಬೆಳಾಲು**

ಭಯೋತ್ಪಾದನೆ ಮತ್ತು ಕೋಮುವಾದ : ಸಂಘ ಪರಿವಾರದ 'ದ್ವಿಮುಖ ನೀತಿ'

ಮಂಗಳೂರು ಸೌಹಾರ್ದ ಕರ್ನಾಟಕ ಸಮಾವೇಶದಲ್ಲಿ ಸೀತಾರಾಂ ಯೆಚೂರಿ

ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಹಮ್ಮಿಕೊಂಡಿದ್ದ ಸೌಹಾರ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಪಕ್ಷದ ಪೊಲಿಟ್ ಬ್ಯೂರೊ ಸದಸ್ಯರೂ ಹಾಗೂ ರಾಜ್ಯಸಭೆಯ ಸದಸ್ಯರೂ ಆದ ಸೀತಾರಾಮ ಯೆಚೂರಿಯವರು ಭಾಗವಹಿಸಿ ದೇಶದ ಸಮಕಾಲೀನ ರಾಜಕೀಯ ಸನ್ನಿವೇಶ-ಜಾಗತೀಕವಾಗಿ ಸಾಮ್ರಾಜ್ಯಶಾಹಿ ಬಂಡವಾಳಶಾಹಿ ರಾಷ್ಟ್ರಗಳು ಅನುಭವಿಸುತ್ತಿರುವ ರಾಜಕೀಯ, ಆರ್ಥಿಕ ಸ್ಥಿತ್ಯಂತರದ ಬಗ್ಗೆ ವಿಚಾರ ಮಂಡಿಸಿದರು.

ಮುಂಬಯಿಯ ಮೂಲಕ ಬಜ್ಪೆ ವಿಮಾನ ನಿಲ್ದಾಣಕ್ಕೆ ಯೆಚೂರಿಯವರು ಆಗಮಿಸುವುದನ್ನು ತಿಳಿದುಕೊಂಡ ವಿಮಾನ ನಿಲ್ದಾಣದ ಸಿಬ್ಬಂದಿಗಳು ಹಾಗೂ ಮಂಗಳೂರು ವಿಮಾನ ನಿಲ್ದಾಣದ ಮ್ಯಾನೇಜರ್ ರವರುಗಳು ಸೇರಿದಂತೆ ಸ್ವಾಗತಿಸಲು ಹೋಗಿದ್ದ ಸಿಪಿಐ(ಎಂ) ಪಕ್ಷದ ನಾಯಕರುಗಳು ಅವರನ್ನು ವಿಮಾನ ನಿಲ್ದಾಣದಲ್ಲಿ ಆದರದಿಂದ ಬರಮಾಡಿಕೊಂಡರು. ವಿಮಾನ ನಿಲ್ದಾಣದ ಸಿಬ್ಬಂದಿಗಳು ತಮ್ಮ ಅಹವಾಲುಗಳನ್ನು ತೋಡಿಕೊಂಡಾಗ ಆ ಸಮಸ್ಯೆಗಳ ಬಗ್ಗೆ ಮೊದಲೇ ತಿಳಿದಿದ್ದ ಯೆಚೂರಿಯವರು (ವಾಯುಯಾನ ಇಲಾಖೆ ಸಂಸದೀಯ ಮಂಡಳಿ ಅಧ್ಯಕ್ಷರೂ ಸಹ ಪ್ರತಿಕ್ರಿಯಿಸಿದ್ದು ಅಷ್ಟೇ ವಿಶೇಷವಾಗಿತ್ತು. ಮುಂದಿನ ತಿಂಗಳು ನವದೆಹಲಿಯಲ್ಲಿ ವಿಮಾನಯಾನ ಸೇವೆಯ ನೌಕರರ ಸಮಾವೇಶಕ್ಕೆ ದೆಹಲಿಗೆ ಬಂದಾಗ ಮತ್ತೆ ವಿವರವಾಗಿ ಚರ್ಚಿಸುವ ಭರವಸೆಯನ್ನು ನೀಡಿದರು.

ಸೌಹಾರ್ದ ಸಮಾವೇಶದ ಸಭಾಂಗಣಕ್ಕೆ ಸಂಜೆ 4.15 ಕ್ಕೆ ಆಗಮಿಸುತ್ತಿದ್ದಂತೆಯೇ ವಿಮಾನೌಕರರ ಸಂಘ (ಎಐಐಇಎ) ಉಡುಪಿ ವಿಭಾಗ ಇದರ ಪ್ರಧಾನ ಕಾರ್ಯದರ್ಶಿ ಯು.ಗುರುದತ್‌ರವರನ್ನು ಒಳಗೊಂಡ ಸುಮಾರು 40 ಜನರ ತಂಡ ಆವೇಶಭರಿತ ಘೋಷಣೆಯೊಂದಿಗೆ ಸ್ವಾಗತಿಸುತ್ತಾ ವಿಮಾರಂಗದಲ್ಲಿ ವಿದೇಶಿ ನೇರ ಬಂಡವಾಳವನ್ನು ಜಾಸ್ತಿ ಮಾಡುವ ಯುಪಿಎ ಸರಕಾರದ ಪ್ರಸ್ತಾಪವನ್ನು ವಿರೋಧಿಸಬೇಕೆಂದು ಒತ್ತಾಯಿಸುವ ಮನವಿಯನ್ನು ಸಲ್ಲಿಸಿದರು. ತಕ್ಷಣ ಪ್ರತಿಕ್ರಿಯಿಸಿದ ಸೀತಾರಾಮ ಯೆಚೂರಿಯವರು ಸಿಪಿಐ(ಎಂ) ಪಕ್ಷ ಸಂಸತ್ತಿನ ಒಳಗೆ ಮತ್ತು ಹೊರಗೆ ಈ ದೇಶವಿರೋಧಿ ಪ್ರಸ್ತಾಪದ ವಿರುದ್ಧ ಚಳುವಳಿ ನಡೆಸಲಿದ್ದು

ಪುಟ 12ಕ್ಕೆ



ಇಳಿದ ತೈಲ ಬೆಲೆ ಆದರೂ ನಿಲ್ಲದ ಸುಲಿಗೆ

ಕಳೆದ ಕೆಲವು ತಿಂಗಳಿಂದ ಜನಗಳು ಅಸಹನೀಯ ಬೆಲೆಯೇರಿಕೆಯಿಂದ ನರಳುತ್ತಿರುವಾಗ ಅದಕ್ಕೆ ಜಾಗತಿಕ ಹಣದುಬ್ಬರ ಕಾರಣ ಎಂದು ಕೈಕಟ್ಟಿ ಕುಳಿತಿರುವ ಯುಪಿಎ ಸರಕಾರ ಕಳೆದ ಒಂದು ತಿಂಗಳಿಂದ ದೇಶದ ವಿಮಾನಯಾನ ಉದ್ದಿಮೆಯ 'ಸಂಕಟ' ನಿವಾರಣೆಗೆ ವಿಮಾನ ವೇಗದಲ್ಲೇ ರಿಯಾಯ್ತಿಗಳ ಮೇಲೆ ರಿಯಾಯ್ತಿ ಸುರಿಯುತ್ತಿದೆ. ವಿಮಾನ ಇಂಧನದ ಬೆಲೆಗಳನ್ನು ಇಳಿಸಿದೆ. ಆದರೆ ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ಯಾರಲ್ಲಿಗೆ 147 ಡಾಲರ್‌ಗೇರಿದ್ದ ಕಚ್ಚಾತೈಲ ಬೆಲೆ ಈಗ 60 ಡಾಲರುಗಳಿಗಿಂತಲೂ ಕಡಿಮೆಯಾದರೂ ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಇಳಿಸಲು ಸಾಧ್ಯವಿಲ್ಲ ಎಂದು ನಮ್ಮ ಪ್ರಧಾನ ಮಂತ್ರಿಗಳು ಹೇಳುತ್ತಿದ್ದಾರೆ. ಸಹಜವಾಗಿಯೇ

ನಮ್ಮ ಸಾರ್ವಜನಿಕ ವಲಯದ ತೈಲ ಕಂಪನಿಗಳ ಮೇಲೆ ಈಗಲೂ ಭಾರೀ ಹೊರೆ ಇದೆ, ಆದ್ದರಿಂದ ದರ ಇಳಿಸಲು ಸಾಧ್ಯವಿಲ್ಲ ಎಂದು ಅವರು ಹೇಳುತ್ತಾರೆ. ಹಾಗಿದ್ದರೆ ವಿಮಾನ ಇಂಧನ(ಎಟಿಎಫ್)ದ ಬೆಲೆ ಇಳಿಸಲು ಹೇಗೆ ಸಾಧ್ಯವಾಯಿತು?

ಸರಕಾರ ಖಾಸಗೀ ವಿಮಾನಯಾನ ಕಂಪನಿಗಳ. ಅದರಲ್ಲೂ ಕಿಂಗ್‌ಫಿಶರ್-ಜೆಟ್ ಏರ್‌ವೇಸ್ ಕೂಟದ ಒತ್ತಡಗಳಿಗೆ ತಲೆಬಾಗುತ್ತಿದೆ ಎಂದು ಹೇಳಲಾಗುತ್ತಿದೆ. ಈ ಎರಡು ಕಂಪನಿಗಳು ಈಗ ವಿಮಾನಯಾನ ಮಾರುಕಟ್ಟೆಯಲ್ಲಿ 60ಶೇಕಡ ಹತೋಟಿ ಪಡೆದಿವೆ. ಇವರ ಪರವಾಗಿ ಸ್ವತಃ ನಾಗರಿಕ ವಿಮಾನಯಾನ ಮಂತ್ರಿಗಳೇ ಚಾಟಿ ಬೀಸುತ್ತಿದ್ದಾರಂತೆ. ಈ ಎರಡು ಕಂಪನಿಗಳ ಮಾರುಕಟ್ಟೆ ಪಾಲು ಏರುವುದರಲ್ಲೂ ಇವರ ಪಾತ್ರವಿದೆ ಎನ್ನಲಾಗುತ್ತಿದೆ. ರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳ ಇಂಡಿಯನ್ ಏರ್ ಲೈನ್ಸ್ ಮತ್ತು ಏರ್ ಇಂಡಿಯಾದ ಮಾರುಕಟ್ಟೆ ಪಾಲು 14ಶೇ. ಕ್ಕೆ ಇಳಿದಿದೆ. ಅದು 2004ರಲ್ಲಿ 46ಶೇ. ಇತ್ತು!

ವಿಜಯ ಮಲ್ಯ-ನರೇಶ್ ಅಗರವಾಲ್ ಕೂಟಕ್ಕೆ ಲೀಟರಿಗೆ 26ರೂ. ಪರಿಹಾರ ಕೊಡಲು ಧಾವಿಸುವ ಸರಕಾರಕ್ಕೆ ಪೆಟ್ರೋಲಿಗೆ 5ರೂ., ಡೀಸೆಲಿಗೆ 3ರೂ.ಪರಿಹಾರ ಕೊಡಲು ಸಾಧ್ಯವಿಲ್ಲ ಎಂಬುದು ನಾಚಿಕೆಗೇಡಿನ ಸಂಗತಿ. ವಿಮಾನಯಾನ ಕಂಪನಿಗಳಿಗೆ ಸಂಕಟ ಬಂದರೆ ನಿರುದ್ಯೋಗ ಉಂಟಾಗುತ್ತದೆ ಎನ್ನುವ ಪ್ರಧಾನ ಮಂತ್ರಿಗಳಿಗೆ ಪೆಟ್ರೋಲ್-ಡೀಸೆಲ್ ದರಗಳು ಇಡೀ ಆರ್ಥಿಕದ ಮೇಲೆ ಪರಿಣಾಮ ಬೀರುತ್ತವೆ ಎಂಬುದು ತಿಳಿದಿಲ್ಲವೇ?


ಖಾಸಗೀ ರಿಯಾಯ್ತಿಗಳ ಸುರಿಮಳೆ!

ಕಳೆದ ಮೂರು ತಿಂಗಳಲ್ಲಿ ನಾಲ್ಕು ಹಂತಗಳಲ್ಲಿ ಸರಕಾರ ಎಟಿಎಫ್ ಬೆಲೆಗಳನ್ನು ಇಳಿಸಿದೆ. ಆಗಸ್ಟ್ 2008ರಲ್ಲಿ ಒಂದು ಕಿಲೋಲೀಟರ್ ಎಟಿಎಫ್ ನ ಬೆಲೆ 71028ರೂ. ಇತ್ತು. ಅದನ್ನೀಗ 44968ರೂ.ಗೆ ಇಳಿಸಲಾಗಿದೆ. ಅಂದರೆ ಲೀಟರಿಗೆ ಸುಮಾರು 26ರೂ. ಇಳಿಕೆ. ಅದರ ಮೇಲಿನ ಆಮದು ಸುಂಕದಲ್ಲಿ 5ಶೇ. ಕಡಿತ ಮಾಡಲಾಗಿದೆ. ಸರಕಾರ ಎಟಿಎಫ್ ಮೇಲೆ ಹಾಕುವ ಅಬಕಾರಿ ಸುಂಕ ಲೀಟರಿಗೆ 1.80ರೂ. ಅದೇ ಡೀಸೆಲಿಗೆ 3.60ರೂ. ಮತ್ತು ಪೆಟ್ರೋಲಿಗೆ. 13.35ರೂ. ಇಷ್ಟೇ ಅಲ್ಲ, ಈ ಕಂಪನಿಗಳು ಈಗಲೂ ನಷ್ಟ ಅನುಭವಿಸುತ್ತಿವೆ ಎನ್ನಲಾದ ಸರಕಾರೀ ತೈಲ ಕಂಪನಿಗಳಿಗೆ ಕೊಡಬೇಕಾದ 2000 ಕೋಟಿ ರೂ.ಗಳ ಬಾಕಿಯನ್ನು ಮುಂದೂಡಲಾಗಿದೆ! ಇಷ್ಟು ಬಾಕಿಯಿಟ್ಟುಕೊಳ್ಳಲಿಕ್ಕೆ ಬಿಟ್ಟರೆ ಹೊರೆ ಹೆಚ್ಚದಿರುತ್ತದೆಯೇ? ಇನ್ನೊಂದು ಸಾರ್ವಜನಿಕ ವಲಯದ ಸಂಸ್ಥೆಯಾದ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಈ ಕಂಪನಿಗಳು ಬಾಕಿ ಕೊಡಬೇಕಾಗಿರುವ 1000 ಕೋಟಿ ರೂಪಾಯಿಗಳನ್ನೂ ಮುಂದೂಡಲಾಗಿದೆ!

ಏಕೆ ಜನಸಾಮಾನ್ಯರನ್ನೂ ಬದಿಗೊತ್ತಿ ಈ ಖಾಸಗೀ ಕಂಪನಿಗಳಿಗೆ ಇಂತಹ ವಿಶೇಷ ನೆರವು? ವಿಮಾನಯಾನ ಉದ್ದಿಮೆ ಸಂಕಟದಲ್ಲಿದೆ, ಅದಕ್ಕೆ ಕಾರಣ ದುಬಾರಿ ಇಂಧನ ದರಗಳು ಎಂದು ಹುಯಿಲೆಬ್ಬಿಸಲಾಗಿದೆ. ಈ ದೊಡ್ಡ ವಿಮಾನಯಾನ ಕಂಪನಿಗಳಿಗೆ ಮಾತ್ರ ದರ ಇಳಿಸಿದರೆ ಸರಕಾರ ಕೇವಲ ಶ್ರೀಮಂತರಿಗೆ ಮಾತ್ರ ನೆರವು ಒದಗಿಸಿದಂತಾಗುವುದಿಲ್ಲವೇ ಎಂದು ಕೇಳಿದಾಗ ಪ್ರಧಾನ ಮಂತ್ರಿಗಳು 'ವಿಮಾಯಾನ ಕಂಪನಿಗಳು ಮುಚ್ಚಿದರೆ ನಿರುದ್ಯೋಗ ಹೆಚ್ಚುತ್ತದೆ' ಎಂದರು.

ಎರಡು ಪ್ರಶ್ನೆಗಳು

ಇಲ್ಲಿ ಎರಡು ಪ್ರಶ್ನೆಗಳು ಏಳುತ್ತವೆ. ಒಂದು, ನಿಜವಾಗಿಯೂ ವಿಮಾನಯಾನ ಕಂಪನಿಗಳು ಸಂಕಟದಲ್ಲಿವೆಯೇ, ಇದ್ದರೆ ಅದಕ್ಕೆ ಇಂಧನ ಬೆಲೆಗಳೇ ಕಾರಣವೇ? ಎರಡು, ಸಾರ್ವಜನಿಕ ವಲಯದ ಕಂಪನಿಗಳ ಹೊರೆ ಹೆಚ್ಚಿಸಿ, ಜನಸಾಮಾನ್ಯರ ಹೊರೆ ಹೆಚ್ಚಿಸಿ, ಡೀಸೆಲ್ ಬಳಸುವ ರೈತರು, ಪೆಟ್ರೋಲ್ ಬಳಸುವ ಸ್ಕೂಟರ್ ಇತ್ಯಾದಿ ಬಳಕೆದಾರರು, ಬಸ್/ರೈಲು ಪ್ರಯಾಣಿಕರು, ಆವಶ್ಯಕ ಸಾಮಗ್ರಿಗಳ ಸಾಗಣೆಗೆ ಹಣತೆರಬೇಕಾದ ಜನಸಾಮಾನ್ಯರು ಈ ವಿಮಾನಯಾನ ಕಂಪನಿಗಳಿಗೆ,



ವಿಮಾನ ಪ್ರಯಾಣಕ್ಕೆ ಸಬ್ಸಿಡಿ ಕೊಡಬೇಕೆಂದು ಏಕೆ ನಿರೀಕ್ಷಿಸಲಾಗುತ್ತಿದೆ?

ಒಂದು ವರದಿಯ ಪ್ರಕಾರ ಜೆಟ್ ಏರ್ ವೇಸ್‌ಗೆ 2007-08ರಲ್ಲಿ 806 ಕೋಟಿ ರೂ., ಕಿಂಗ್‌ಫಿಶರ್‌ಗೆ 1000 ಕೋಟಿ ರೂ. ನಷ್ಟವಾಯಿತು. ಆದರೆ ಜೆಟ್ ಏರ್ ವೇಸ್ ನ ವೆಬ್ ಸೈಟಿನಲ್ಲಿ ಹಾಕಿರುವ ಮಾಹಿತಿ ಬೇರೆಯೇ ಕಥೆ ಹೇಳುತ್ತದೆ(ಕಿಂಗ್ ಫಿಶರ್ ಈ ರೀತಿ ಮಾಹಿತಿ ನೀಡಿಲ್ಲ).

- ಜೆಟ್ ಏರ್‌ವೇಸ್ 2006-07ರಲ್ಲಿ 27.94 ಕೋಟಿ ರೂ.ಗಳ ನಿವ್ವಳ ಲಾಭ ಮಾಡಿತು. 2007-08ರಲ್ಲಿ 253.06ಕೋಟಿ ರೂ.ಗಳ ನಷ್ಟ ಅನುಭವಿಸಿತು.
- ಲಾಭ ಗಳಿಸಿದ 2006-07 ರಲ್ಲಿ ಇಂಧನ ವೆಚ್ಚದ ಪ್ರಮಾಣ 34ಶೇ. ಮತ್ತು ನಷ್ಟ ಅನುಭವಿಸಿದ 2007-08ರಲ್ಲಿ ಅದು 35 ಶೇ. , ಕೇವಲ 1ಶೇ. ಹೆಚ್ಚು. ಅಂದರೆ ನಷ್ಟಕ್ಕೆ ಮುಖ್ಯ ಕಾರಣ ಇಂಧನ ಬೆಲೆ ಹೆಚ್ಚಳವಲ್ಲ.
- 253.06 ಕೋಟಿ ರೂ. ನಷ್ಟದ ಮುಖ್ಯ ಭಾಗಗಳು ಹೀಗಿವೆ: 1.ಡಿಪ್ರೆಸಿಯೇಷನ್ ಅಥವಾ ಸವಕಳಿ ಮೌಲ್ಯ 414ಕೋಟಿಗಳಿಂದ 777 ಕೋಟಿಗೇರಿತು. 2. ಬಡ್ಡಿ ಮೊತ್ತ 240ಕೋಟಿಯಿಂದ 492ಕೋಟಿಗೇರಿತು.
- ಅಂದರೆ ಈ 552ಕೋಟಿರೂ.ಗಳ ಹೆಚ್ಚಿನ ವೆಚ್ಚಕ್ಕೆ ಕಾರಣ ಇಂಧನ ಬೆಲೆಯೇರಿಕೆಯಲ್ಲ, ಬದಲು ಹೊಸ ಆಸ್ತಿಗಳನ್ನು ಪಡೆದುದೇ ಕಾರಣ. ಏಪ್ರಿಲ್ 2007ರಲ್ಲಿ ಜೆಟ್ ಏರ್ ವೇಸ್ ಸಹಾರಾ ಏರ್ ಲೈನ್ಸ್ ನ್ನು 1465 ಕೋಟಿ ರೂ.ಗಳಿಗೆ ಖರೀದಿಸಿತು ಎಂಬುದನ್ನು ಇಲ್ಲಿ ಗಮನಿಸಬಹುದು.

ಖಾಸಗೀ ಕಂಪನಿಗಳ ಇಂತಹ ವ್ಯವಹಾರಗಳಿಗೆ ಸರಕಾರ ಏಕೆ ತಲೆಕೆಡಿಸಿಕೊಳ್ಳಬೇಕು? ಅಷ್ಟೇ ಅಲ್ಲ, ಸಾರ್ವಜನಿಕ ವಲಯದ ಕಂಪನಿಗಳು, ಜನಸಾಮಾನ್ಯರು ಅದರ ಹೊರೆಯನ್ನು ಏಕೆ ಹೊರಬೇಕು. ಮಾನ್ಯ ಪ್ರಧಾನ ಮಂತ್ರಿಗಳು, ಹಣಕಾಸು ಮಂತ್ರಿಗಳು ಉತ್ತರಿಸಬಲ್ಲರೇ? ಸರಕಾರ ಈ ಕಂಪನಿಗಳನ್ನು ಪಾರು ಮಾಡಲು ಸಾರ್ವಜನಿಕ ಖಜಾನೆಯಿಂದ ಅಪಾರ ರಿಯಾಯ್ತಿಗಳನ್ನು ಒದಗಿಸುವ ಮೊದಲು ಆ ಕಂಪನಿಗಳ ವ್ಯವಹಾರಗಳ ತನಿಖೆ ನಡೆಸಬೇಕಿತ್ತಲ್ಲವೇ?

ಜನಸಾಮಾನ್ಯರು ಕೇಳುತ್ತಿರುವುದು, ಕಚ್ಚಾತೈಲದ ಬೆಲೆ ಇಳಿದಿರುವಾಗ, ಕಳೆದ ಬಾರಿ ಏರಿಸಿದ್ದ ಬೆಲೆಗಳನ್ನು ಇಳಿಸಿರಿ ಎಂದು. ವಿಜಯ ಮಲ್ಯ-ನರೇಶ್ ಅಗರವಾಲ್ ಕೂಟದ ಕಾರ್ಪೊರೆಟ್ ಹಿತಗಳಿಗೆ 26ರೂ. ಇಳಿಸಲು ಸಾಧ್ಯವಿರುವಾಗ ಪೆಟ್ರೋಲಿಗೆ 5ರೂ., ಡೀಸೆಲ್‌ಗೆ 3ರೂ. ಇಳಿಸಲು ಸಾಧ್ಯವಿಲ್ಲವೇ? ವಿಮಾನಯಾನ ಕಂಪನಿಗಳಿಗೆ ಸಂಕಟ ಬಂದರೆ ನಿರುದ್ಯೋಗ ಉಂಟಾಗುತ್ತದೆ ಎನ್ನುವ ಪ್ರಧಾನ ಮಂತ್ರಿಗಳಿಗೆ ಪೆಟ್ರೋಲ್- ಡೀಸೆಲ್ ದರ ಏರಿಸಿದರೆ ಅದರ ದುಷ್ಪರಿಣಾಮ ಇಡೀ ಆರ್ಥಿಕವನ್ನು ಆವರಿಸುತ್ತದೆ ಎಂಬುದು ತಿಳಿದಿರಲಿಲ್ಲವೇ? ನಿಜವಾಗಿಯೂ ಇವರದ್ದು ಅವರು ಹೇಳಿಕೊಳ್ಳುವಂತೆ 'ಆಮ್ ಆದ್ಮಿ'ಯ ಅಂದರೆ ಜನಸಾಮಾನ್ಯರ ಸರಕಾರವೇ?

- ಆಗಸ್ಟ್ 2008ರಲ್ಲಿ ಒಂದು ಕಿಲೋಲೀಟರ್ ಎಟಿಎಫ್(ವಿಮಾನ ಇಂಧನ)ನ ಬೆಲೆ 71028ರೂ. ಇತ್ತು. ಅದನ್ನೀಗ 44968ರೂ.ಗೆ ಇಳಿಸಲಾಗಿದೆ. ಅಂದರೆ ಲೀಟರಿಗೆ ಸುಮಾರು 26ರೂ. ಇಳಿಕೆ.
- ಎಟಿಎಫ್ ಮೇಲಿನ ಆಮದು ಸುಂಕದಲ್ಲಿ 5ಶೇ. ಕಡಿತ ಮಾಡಲಾಗಿದೆ.
- ಸರಕಾರ ಎಟಿಎಫ್ ಮೇಲೆ ಹಾಕುವ ಅಬಕಾರಿ ಸುಂಕ ಲೀಟರಿಗೆ 1.80ರೂ. ಅದೇ ಡೀಸೆಲಿಗೆ 3.60ರೂ. ಮತ್ತು ಪೆಟ್ರೋಲಿಗೆ 13.35ರೂ.
- ವಿಮಾನಯಾನ ಕಂಪನಿಗಳು ಈಗಲೂ ನಷ್ಟ ಅನುಭವಿಸುತ್ತಿವೆ ಎನ್ನಲಾದ ಸರಕಾರೀ ತೈಲ ಕಂಪನಿಗಳಿಗೆ ಕೊಡಬೇಕಾದ 2000 ಕೋಟಿ ರೂ.ಗಳ ಬಾಕಿಯನ್ನು ಮುಂದೂಡಲಾಗಿದೆ!
- ಇನ್ನೊಂದು ಸಾರ್ವಜನಿಕ ವಲಯದ ಸಂಸ್ಥೆಯಾದ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಈ ಕಂಪನಿಗಳು ಬಾಕಿ ಕೊಡಬೇಕಾಗಿರುವ 1000 ಕೋಟಿ ರೂಪಾಯಿಗಳನ್ನೂ ಮುಂದೂಡಲಾಗಿದೆ!

ಹೊಸ ಸುದ್ದಿ

ಕೇಳಿದ್ರೆ ಕೇಳಿದ್ರೆ ಹೊಸ ಸುದ್ದಿ ಕೇಳಿ
ಬೀಸುತ್ತಿದೆ ಸುತ್ತೆಲ್ಲ ಮಠ ಗುಡಿಯಗಾಳಿ
ತಿರುಪತಿಯ ಯಾತ್ರಿಕಗೆ ಸಹಸ್ರಕೋಟಿ
ಸೂರಿಲ್ಲದವರೆಲ್ಲ ತಿರುಪತಿಗೆ ಹೊರಡಿ

ವಿಚಂಬಾರಿ

ಕೃಷಿ ಇಲಾಖೆಯ ಕೋಮುವಾದದ ವೈರಸ್

ದುಂಡು ಮೇಜಿನ ಸಭೆ

ಏನಾದರೂ ಮಾಡಿ ಕೃಷಿಯನ್ನು ಖಾಸಗೀಕರಣ ಮಾಡಬೇಕು ಹಾಗೂ ಆ ಮೂಲಕ ಕೋಮುವಾದದ ಅಮಲನ್ನು ಹಳ್ಳಿ ಹಳ್ಳಿಗಳಿಗೂ ಹರಡಬೇಕೆಂದು ನಿರ್ಧರಿಸಿರುವ ಬಿಜೆಪಿ ಸರ್ಕಾರ ಅದಕ್ಕೀಗ 'ಸಾವಯವ ಕೃಷಿ ಮಿಷನ್' ಅನ್ನು ಸಾಧನವನ್ನಾಗಿ ಬಳಸಲು ಬಯಸಿದೆ. ಹಾಗಾದರೆ ಪರಿಣಾಮ ಏನಾದೀತು. ಈ ಕುರಿತು ಬೆಂಗಳೂರಿನಲ್ಲಿ ನಡೆದ ದುಂಡು ಮೇಜಿನ ಸಭೆಯ ವರದಿ.

"ಎಲ್ಲಾ ಸಮಸ್ಯೆಗಳಿಗೆ ಬಿಜೆಪಿಯೇ ಪರಿಹಾರ" ಎಂದು ಅಬ್ಬರದ ಪ್ರಚಾರ ನಡೆಸಿ, ಹಲವು ಅಕ್ರಮಗಳ ಮೂಲಕ ರಾಜ್ಯದಲ್ಲಿ ಅಧಿಕಾರವನ್ನು ಹಿಡಿದಿರುವ ಬಿಜೆಪಿಯು, 'ರೈತರ ಹೆಸರಿನಲ್ಲಿ' ಅಧಿಕಾರ ಸ್ವೀಕಾರ ಮಾಡಿ, ರೈತರ ಸಮಸ್ಯೆಗಳನ್ನು ಪ್ರಥಮ ಆದ್ಯತೆಯಲ್ಲಿ ಇತ್ಯರ್ಥ ಪಡಿಸುವುದಾಗಿ ಘೋಷಿಸಿತು.

ಆದರೆ ಅಧಿಕಾರ ಹಿಡಿದ ಕೆಲವೇ ದಿನಗಳಲ್ಲಿ ರಸಗೊಬ್ಬರ ಕೇಳಿದ ರೈತರ ಮೇಲೆ ರಾಜ್ಯಾದ್ಯಂತ ಸರಣಿ ಲಾಠಿ ಚಾರ್ಜ್‌ಗಳನ್ನು ಆರಂಭಿಸಿ, ಹಾವೇರಿಯ ಸಿದ್ದಲಿಂಗಪ್ಪ ಚೂರಿ, ಪುಟ್ಟಪ್ಪ ಹೊನ್ನತ್ತಿಯೆಂಬ ರೈತರನ್ನು ಪೊಲೀಸ್ ಗುಂಡಿಗೆ ಬಲಿ ತೆಗೆದುಕೊಂಡಿತು. ರಸಗೊಬ್ಬರದ ಕೊರತೆಯ ಸಂದರ್ಭವನ್ನು ದುರುಪಯೋಗಪಡಿಸಿಕೊಂಡು ಕಳ್ಳಸಂತೆಯಲ್ಲಿ ಗೊಬ್ಬರ ಮಾರಾಟ ಮಾಡಿದ ವ್ಯಾಪಾರಸ್ಥರ ಮೇಲೆ ಸಾಕ್ಷಿ ಸಮೇತ ಹಲವಾರು ದೂರುಗಳನ್ನು ನೀಡಿದರೂ ಅವರ ಮೇಲೆ ಯಾವುದೇ ಕ್ರಮಗಳನ್ನು ಕೈಗೊಳ್ಳದೇ ತನ್ನ ನಿಜಸ್ವರೂಪವನ್ನು ಪ್ರದರ್ಶಿಸಿತು. ರೈತರ ಪಂಪ್‌ಸೆಟ್‌ಗೆ 'ಉಚಿತ ವಿದ್ಯುತ್'ನ್ನು ನೀಡುವುದಾಗಿ ಘೋಷಿಸಿದ ಬಿಜೆಪಿಯು ರೈತರ ಪಂಪ್‌ಸೆಟ್‌ಗಳನ್ನು ಮಾತ್ರವಲ್ಲ ಇಡೀ 'ಗ್ರಾಮೀಣ ಕರ್ನಾಟಕವನ್ನು ಕತ್ತಲೆ ಮಾಡಿದೆ' ಹೀಗೆ ರೈತರ ಸಮಸ್ಯೆಗಳ ಇತ್ಯರ್ಥವಲ್ಲ, ಸಮಸ್ಯೆಗಳನ್ನು ಮತ್ತು ಹೆಚ್ಚು ಮಾಡಿದ್ದಲ್ಲದೆ ಈಗ ಹೊಸ ಸಮಸ್ಯೆಗಳನ್ನು ಸೃಷ್ಟಿಸಲು ಬಿಜೆಪಿಯ ಸರ್ಕಾರ ಟೊಂಕ ಕಟ್ಟಿನಿಂತಿದೆ.

ಕೃಷಿ ಇಲಾಖೆಯ ಕೋಮುವಾದೀಕರಣಕ್ಕೆ ಗಂಭೀರ ಪ್ರಯತ್ನ :

ರಾಜ್ಯದ ಶೇ.65ರಷ್ಟು ಇರುವ ಕೃಷಿಕರು ಮತ್ತು ಕೃಷಿ ಕೂಲಿಕಾರರು ಅತ್ಯಂತ ಸಂಕಷ್ಟದಲ್ಲಿ ತಮ್ಮ ಬದುಕನ್ನು ಸಾಗಿಸುತ್ತಿದ್ದಾರೆ. ಕಳೆದ ಒಂದೂವರೆ ದಶಕದಿಂದ ಜಾರಿಯಾಗುತ್ತಿರುವ ಜಾಗತೀಕರಣ ನೀತಿಗಳ ಫಲವಾಗಿ ಕೃಷಿ ಬಿಕ್ಕಟ್ಟು ಮತ್ತು ಬಿಗಡಾಯಿಸಿದೆ. ಪರಿಣಾಮ ಆರಂಭವಾದ ರೈತರ ಆತ್ಮಹತ್ಯೆಗಳು, ಕೃಷಿ ಕೂಲಿಕಾರರ ಹಸಿವಿನ ವಲಸೆಗಳು ಯಥೇಚ್ಚವಾಗಿ ಮುಂದುವರಿದಿವೆ. ಬಿಜೆಪಿಯು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರದಲ್ಲಿಯೂ ರಾಜ್ಯದ ಸುಮಾರು 185 ರೈತರು ಆತ್ಮಹತ್ಯೆಗಳಿಗೆ ಮೊರೆಹೋಗಿದ್ದರೆಂಬ ವರದಿಗಳು ನಮ್ಮ ಕಣ್ಣ ಮುಂದೇ ಇವೆ.

ಇಂತಹ ಸ್ಥಿತಿಯಲ್ಲಿ ಒಟ್ಟಾರೆ ನೀತಿಗಳ ಭಾಗವಾಗಿ ಕೃಷಿ ಕ್ಷೇತ್ರದ ಬಿಕ್ಕಟ್ಟನ್ನು ಪರಿಹರಿಸುವ ದಿಕ್ಕಿನಲ್ಲಿ ಕೃಷಿ ಇಲಾಖೆಯನ್ನು ರೈತಪರವಾಗಿ ಮಾರ್ಪಡಿಸುವ ರೂಪೀಕರಣಗೊಳಿಸುವ ಕೆಲಸಕ್ಕೆ ಆದ್ಯತೆ ಸಿಗಬೇಕಾಗಿತ್ತು. ಆದರೆ ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕಾದ ಸಂದರ್ಭದಲ್ಲಿ ಪರಿಸ್ಥಿತಿಯ ಅಗತ್ಯತೆಗೆ ವಿರುದ್ಧವಾಗಿ ಅದೇ ಜಾಗತೀಕರಣದ ನೀತಿಗಳನ್ನು ಜಾರಿ ಮಾಡುತ್ತಿದೆ ಮಾತ್ರವಲ್ಲ ಬಿಜೆಪಿಯು ತನ್ನ ಬಚ್ಚಿಟ್ಟ ಸಂಘಪರಿವಾರದ ಅಜೆಂಡಾವನ್ನು ಕೃಷಿಕ್ಷೇತ್ರ ಮತ್ತು ಇಲಾಖೆಯಲ್ಲಿ ಜಾರಿಗೊಳಿಸಲು ಸಜ್ಜಾಗಿ ನಿಂತಿದೆ.

ಕೃಷಿ ಇಲಾಖೆಯ ಕೋಮುವಾದೀಕರಣಕ್ಕೆ ಬಿಜೆಪಿಯ ರಾಜ್ಯ ಸರ್ಕಾರದ ಪಿತೂರಿ :

ರಾಜ್ಯದಲ್ಲಿ ರಸಗೊಬ್ಬರ ಸಮಸ್ಯೆಯು ತೀವ್ರಗೊಂಡ ಸಂದರ್ಭದಲ್ಲಿ ಈ ಸಮಸ್ಯೆಯನ್ನು ಇತ್ಯರ್ಥಪಡಿಸಲು ಅಸಮರ್ಥವಾದ ಬಿಜೆಪಿ ಸರ್ಕಾರ 'ಸಾವಯವ ಕೃಷಿ'ಯೇ ರಸಗೊಬ್ಬರದ ಬಳಕೆಗೆ 'ಪರ್ಯಾಯ' ಎನ್ನುವ ರೀತಿಯಲ್ಲಿ ಪ್ರಚಾರ ಮಾಡುತ್ತಾ, ಇದನ್ನು ಉತ್ತೇಜಿಸಲು ತನ್ನ ಬಜೆಟ್‌ನಲ್ಲಿ ರೂ.100 ಕೋಟಿಗಳನ್ನು ಘೋಷಿಸಿತು. ಇದನ್ನು ಜಾರಿ ಮಾಡಲು 'ಸಾವಯವ ಕೃಷಿ ಪರಿಷತ್'ನ್ನು ಸಹ ರಚಿಸಿತು. ಈ 'ಕೃಷಿ ಪರಿಷತ್' ಸಾವಯವ ಕೃಷಿಗಾಗಿ ಈಗ ಸದ್ಯ ನೀಡಿರುವ ರೂ.100 ಕೋಟಿಗಳನ್ನು ಮತ್ತು ಮುಂದಿನ ಬಜೆಟ್‌ಗಳಲ್ಲಿ ಬರಲಿರುವ ನೂರಾರು ಕೋಟಿ ರೂ.ಗಳನ್ನು ಖರ್ಚು ಮಾಡಲು 'ತಾಲ್ಲೂಕಿಗೊಂದು ಮೂರು ಜನರ ಟ್ರಸ್ಟೊಂದನ್ನು ರೂಪಿಸಲು ಹೊರಟಿದೆ. ಈ 'ಟ್ರಸ್ಟ್'ನಲ್ಲಿ ಸಂಪೂರ್ಣವಾಗಿ ಆರ್‌ಎಸ್‌ಎಸ್ ಜನರನ್ನು ತುಂಬಿಸುವ ಕೆಲಸಕ್ಕೆ ಮುಂದಾಗಿದೆ. ಅಲ್ಲದೆ ಈ ನಡುವೆ ನಡೆದ 'ಸಾವಯುವ ಕೃಷಿ ಪರಿಷತ್' ಸಭೆಗಳಲ್ಲಿ ಸಂಘ ಪರಿವಾರದ ಬೆಂಬಲಿಗ ಸದಸ್ಯರು, ಸಾವಯವ ಕೃಷಿಯನ್ನು ರಾಜ್ಯದಲ್ಲಿ ಸಮೃದ್ಧವಾಗಿ ಅಭಿವೃದ್ಧಿಪಡಿಸಲು ಸಗಣಿ, ಗೋಮೂತ್ರ ಸಂರಕ್ಷಣೆಯ ಹೆಸರಿನಲ್ಲಿ 'ಗೋಹತ್ಯೆ ನಿಷೇದ' ವನ್ನು ಜಾರಿ ಮಾಡುವ ನಿರ್ಣಯವನ್ನು ಕೈಗೊಳ್ಳಬೇಕೆಂದು ಪ್ರಯತ್ನಗಳನ್ನು ನಡೆಸಿದ್ದಾರೆ.

ಕೃಷಿ ಮಿಷನ್ ಕಾಯ್ದೆ ರೂಪಿಸುವ ಅಧಿಕಾರ!?

'ಸಾವಯವ ಕೃಷಿ ಮಿಷನ್'ಗೆ ಸಂಬಂಧಿಸಿದ ಸರ್ಕಾರಿ ಆದೇಶ ಸಂಖ್ಯೆ ಕೃತೋಇ/103/ಕೃಉಇ/08, ಬೆಂಗಳೂರು ದಿನಾಂಕ 29.09.2008 ರಲ್ಲಿ ಕೆಲಸ ಕಾರ್ಯಗಳು ಮತ್ತು ಜವಾಬ್ದಾರಿಗಳು' ಎಂಬಲ್ಲಿ 5ನೇ ಅಂಶವಾಗಿ 'ಸಾವಯವ ಕೃಷಿಗೆ ಸಂಬಂಧಪಟ್ಟಂತೆ ಅಗತ್ಯವಿದ್ದಲ್ಲಿ ಕಾಯ್ದೆಗಳನ್ನು ರೂಪಿಸುವುದು' ಇತ್ಯಾದಿ ಅಂಶಗಳು ಹಾಗೂ ಬಿಜೆಪಿಯು ಅಧಿಕಾರ ನಡೆಸಿರುವ ರಾಜ್ಯಗಳಲ್ಲಿನ ಅನುಭವದ ಹಿನ್ನೆಲೆಯಲ್ಲಿ ಈ ಚರ್ಚೆಗಳನ್ನು ಗಮನಿಸಬೇಕಿದೆ.



ಈ ಮೂಲಕ ಜನರ ತೆರಿಗೆ ಹಣವಾದ ನೂರಾರು ಕೋಟಿಗಳನ್ನು ಅಕ್ರಮವಾಗಿ ಬಳಸಿ, ಸಂಘ ಪರಿವಾರದ ಸೈದ್ಧಾಂತಿಕ, ಸಂಘಟನಾ ಕೆಲಸಗಳನ್ನು ಮಾಡುವ ಆಮೂಲಕ ರಾಜ್ಯದ ಸದ್ಯದ ಕೋಮು ಸಾಮರಸ್ಯಗಳನ್ನು ನಾಶಪಡಿಸಿ, ಅಲ್ಪಸಂಖ್ಯಾತ ಮುಸ್ಲಿಂ, ಕ್ರಿಶ್ಚಿಯನ್ ಜನಸಮುದಾಯಗಳು ಮಾತ್ರವಲ್ಲದೆ ದಲಿತ ಸಮುದಾಯದ ಆಹಾರದ ಹಕ್ಕು ಮತ್ತಿತರೆ ಹಕ್ಕುಗಳನ್ನು ದಮನ ಮಾಡುವ ಪಿತೂರಿ ಇದರಲ್ಲಿ ಅಡಗಿದೆ.

'ರೈತ ಸಂಪರ್ಕ ಕೇಂದ್ರ'ಗಳು ಎನ್‌ಜಿಒಗಳಿಗೆ: ಕೃಷಿ ಇಲಾಖೆಯ ಖಾಸಗೀಕರಣದ ಸಂಚು:

ಕೃಷಿ ಸಂಶೋಧನೆ, ತಾಂತ್ರಿಕತೆ, ಮಾರುಕಟ್ಟೆ ಕುರಿತು ತಿಳುವಳಿಕೆ ಇತ್ಯಾದಿಗಳನ್ನು ರೈತರಿಗೆ ತಲುಪಿಸುವುದು ಬಾರಿ ಮುಖ್ಯವೆಂದು, ಹೇಳುತ್ತಾ, ಈ ಉದ್ದೇಶಗಳನ್ನು ಜಾರಿ ಮಾಡಲು 2000-01ರ ಸಾಲಿನಲ್ಲಿ ಪ್ರತಿ ಹೋಬಳಿ ಮಟ್ಟದಲ್ಲಿ ಆರಂಭದ 'ರೈತ ಸಂಪರ್ಕ ಕೇಂದ್ರ (R.K.S)ಗಳು, ಹಲವಾರು ಕಾರಣಗಳಿಂದ ಮೇಲಿನ ಕೆಲಸಗಳನ್ನು ಸಮರ್ಥವಾಗಿ ಜಾರಿ ಮಾಡುತ್ತಿಲ್ಲವೆಂದು 'ಕರ್ನಾಟಕ ಕೃಷಿ ಮಿಷನ್' ತನ್ನ ವಾದವನ್ನು ಮಂಡಿಸುತ್ತದೆ. ನಿಜ, ಬಿಜೆಪಿಯ ಆಡಳಿತಾವಧಿಯಲ್ಲಿ ರೂಪಿತಗೊಂಡಿರುವ ಈ ಕರ್ನಾಟಕ ಕೃಷಿ ಮಿಷನ್' ಸತ್ಯವನ್ನೇ ಹೇಳುತ್ತಿದೆ. ಕೃಷಿ ಸಂಶೋಧನೆ, ತಾಂತ್ರಿಕತೆ, ಮಾರುಕಟ್ಟೆಗೆ ಸಂಬಂಧಿಸಿದ ಮಾಹಿತಿ ಇತ್ಯಾದಿಗಳನ್ನು ರೈತರಿಗೆ ತಲುಪಿಸುವಂತಹ ವಿಸ್ತರಣೆ - ಕೆಲಸ ಎಕ್ಸ್‌ಟೆನ್ಷನ್ ಹಿಂದಿಗಿಂತ ಇವತ್ತಿನ ಸ್ಥಿತಿಯಲ್ಲಿ ತುಂಬಾ ಅಗತ್ಯ ಕೆಲಸವಾಗಿದೆ. ಆದರೆ 'ರೈತ ಸಂಪರ್ಕ ಕೇಂದ್ರ'ಗಳು ಮೇಲಿನ ಕೆಲಸವನ್ನು ಮಾಡಲು ಸಾಧ್ಯವಾಗದೇ ಇರುವುದಕ್ಕೆ ಬಾರಿ ಮುಖ್ಯ ಕಾರಣ, ಎಕ್ಸ್‌ಟೆನ್ಷನ್ (ವಿಸ್ತರಣೆ) ಕೆಲಸಕ್ಕೆ ಇಲಾಖೆಯು ಆದ್ಯ ಗಮನ ಕೊಡದಿರುವ ದೃಷ್ಟಿಕೋನದ ಗಂಭೀರ ಕೊರತೆ ಮತ್ತು ಇದಕ್ಕಾಗಿ ಅಗತ್ಯವಿರುವ ಗ್ರಾಮ ಸಹಾಯಕ ಸಹಾಯಕ ಕೃಷಿ ಅಧಿಕಾರಿ (ಎಎಒ)ಗಳಂತಹ ತಳಮಟ್ಟದ ಸಿಬ್ಬಂದಿಯ ಹುದ್ದೆಗಳನ್ನು ರದ್ದುಮಾಡಿರುವುದು ಮುಖ್ಯವೆಂಬುದನ್ನು ಅಷ್ಟೇ ಸ್ಪಷ್ಟವಾಗಿ ಹೇಳಲು 'ಕೃಷಿ ಮಿಷನ್' ಹಿಂಜರಿಯುತ್ತದೆ. ಮಾತ್ರವಲ್ಲ, ಇವತ್ತಿನ ಸಮಸ್ಯೆಗೆ ಸಂಪೂರ್ಣ ಪರಿಹಾರ ಸರ್ಕಾರಿಯೇತರ ಸಂಸ್ಥೆ (ಎನ್‌ಜಿಒ)ಗಳು ಎಂಬ ತೀರ್ಮಾನಕ್ಕೆ ಬರುತ್ತದೆ. ಹೀಗಾಗಿ ಇವುಗಳನ್ನು ಬಳಸಿಕೊಂಡು 'ರೈತ ಸಂಪರ್ಕ ಕೇಂದ್ರ (ಆರ್‌ಎಸ್‌ಕೆ)ಗಳನ್ನು ಬಲಪಡಿಸಬೇಕೆಂದು ಹೇಳುತ್ತದೆ.

ಈ ಬಗ್ಗೆ ಯಾವುದೇ ಚರ್ಚೆ ಇಲ್ಲದೆ, 'ರೈತ ಸಂಪರ್ಕ ಕೇಂದ್ರ (ಆರ್‌ಎಸ್‌ಕೆ)'ಗಳ ಅಡಿಯಲ್ಲಿ ವಿಸ್ತರಣೆ (ಎಕ್ಸ್‌ಟೆನ್ಷನ್) ಕೆಲಸವನ್ನು ಮಾಡಲು ಸಿದ್ಧವಿರುವ ಎನ್.ಜಿ.ಒ.ಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಸುಮಾರು 745 'ರೈತಸಂಪರ್ಕ ಕೇಂದ್ರ' ಗಳ ಅಡಿಯಲ್ಲಿ ಕೆಲಸ ಮಾಡುವ ಎನ್‌ಜಿಒ ಗಳ ಕೆಲಸವನ್ನು ಸಮನ್ವಯಗೊಳಿಸಲು ರಾಜ್ಯ ಮಾಡಲಾದ ಕೆಲಸಕ್ಕೆ ಸರ್ಕಾರ ಮುಂದಾಗಿದೆ.

ವಿಸ್ತರಣೆ (ಎಕ್ಸ್‌ಟೆನ್ಷನ್) ಕೆಲಸಕ್ಕೆ ಅಗತ್ಯವಿರುವ ಸಿಬ್ಬಂದಿಯ ಬಗ್ಗೆ ನಿರ್ಧಿಷ್ಟ ಪ್ರಸ್ತಾಪವಿಲ್ಲದೆ, ಸರ್ಕಾರಿಯೇತರ ಸಂಸ್ಥೆ (ಎನ್‌ಜಿಒ) ಗಳ ನೇಮಕಾತಿಯ ಮೂಲಕವೇ ಎಕ್ಸ್‌ಟೆನ್ಷನ್ ಕೆಲಸ ಎನ್ನುವ ಈ ವಾದವು 'ರೈತ ಸಂಪರ್ಕ ಕೇಂದ್ರಗಳನ್ನು ಖಾಸಗೀಕರಣ ಮಾಡುವ ಹುನ್ನಾರವಾಗಿದೆ. ಅಲ್ಲದೆ, ಎನ್.ಜಿ.ಒ.ಗಳ ಹೆಸರಿನಲ್ಲಿ ಇಲ್ಲಿಯೂ ಅನೇಕ ರೀತಿಯ ಎನ್.ಜಿ.ಒ.ಗಳು ವಿಶೇಷವಾಗಿ ಸಂಘ ಪರಿವಾರದ ಪ್ರಯೋಜಿತ ಎನ್‌ಜಿಒಗಳ ನಿರ್ಣಾಯಕ ಪಾತ್ರ ವಹಿಸುವ ಸಾಧ್ಯತೆಗಳು ಹೆಚ್ಚಿವೆ.

ಈ ಹಿನ್ನೆಲೆಯಲ್ಲಿ, ರಾಜ್ಯದ ಬಹುಸಂಖ್ಯಾತರ ಜನಸಮುದಾಯಕ್ಕೆ ಸಂಬಂಧಪಟ್ಟ ಈ ವಿಷಯಗಳ ಕುರಿತು ವಿಧಾನಸಭೆ, ಪರಿಷತ್‌ಗಳು, ರೈತಸಂಘಗಳು, ಕೃಷಿ ತಜ್ಞರು ಇತ್ಯಾದಿ ವೇದಿಕೆಗಳಲ್ಲಿ ಚರ್ಚೆ, ಸಂವಾದ ನಡೆಸದೇ, ತನ್ನ ಸಂಘ ಪರಿವಾರ



ಅಜೆಂಡಾಗಳನ್ನು ಜಾರಿಮಾಡಲು ಬಿಜೆಪಿಯ ರಾಜ್ಯ ಸರ್ಕಾರ, 'ಕೃಷಿ ಇಲಾಖೆಯನ್ನು ಕೋಮುವಾದೀಕರಣ ಮತ್ತು ಖಾಸಗೀಕರಣ' ಮಾಡಲು ಹೊರಟಿದೆ.

ಈ ವಿಚಾರವಾಗಿ ಚರ್ಚಿಸಲು ಹಾಗೂ ಹೋರಾಟವನ್ನು ರೂಪಿಸುವ ನಿಟ್ಟಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್ಎಸ್) ರಾಜ್ಯ ಸಮಿತಿಯು ನವೆಂಬರ್ 11, 2008 ರಂದು ಬೆಂಗಳೂರಿನಲ್ಲಿ ಶಾಸಕರ ಭವನ, ಸಮ್ಮೇಳನ ಸಭಾಂಗಣದಲ್ಲಿ 'ದುಂಡು ಮೇಜಿನ ಸಭೆ' ಯೊಂದನ್ನು ಸಂಘಟಿಸಿತ್ತು. ಪ್ರಾಂತ ರೈತ ಸಂಘ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರ ಅಧ್ಯಕ್ಷತೆಯಲ್ಲಿ ನಡೆದ ಚರ್ಚೆಯಲ್ಲಿ ಮೊದಲಿಗೆ ಸಂಘ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿರವರು ಮೇಲ್ಕಂಡ ಅಂಶಗಳನ್ನು ವಿವರಿಸುವ ವಿಷಯ ಮಂಡಿಸಿದರು. ರಾಜ್ಯ ಬಿಜೆಪಿ ಸರ್ಕಾರದ ಕೃಷಿ ರಂಗದ ಖಾಸಗೀಕರಣ, ಕೋಮುವಾದೀಕರಣಗಳ ಪ್ರಯತ್ನವನ್ನು ಕುರಿತು ವಿವರಿಸಿದ ಅವರು ರಾಜ್ಯದ 745 ರೈತ ಸಂಪರ್ಕ ಕೇಂದ್ರಗಳ ಅಡಿಯಲ್ಲಿ ಕೆಲಸ ಮಾಡುವಂತೆ ಉದ್ದೇಶಿಸಿರುವ ಸ್ವಯಂ ಸೇವಾ ಸಂಘಟನೆ(ಎನ್‌ಜಿಓ)ಗಳಿಗೆ ಲೀಡ್ ಎನ್.ಜಿ.ಓ. ಆಗಿ ಆರೆಸ್ಸೆಸ್ ಕೇಂದ್ರದ 'ಕೇಶವ ಕೃಪ' ಕೆಲಸ ಮಾಡಬಹುದು. ಉಡುಪಿಯ ಪೇಜಾವರರೇ ಇವುಗಳಿಗೆಲ್ಲಾ ಮಾರ್ಗದರ್ಶಕರಾಗಬಹುದು. ಇದೊಂದು ಅತ್ಯಂತ ಅಪಾಯಕಾರಿ ಸಂಗತಿ. ಆರೆಸ್ಸೆಸ್‌ನಿಂದ ಕೃಷಿ ರಂಗವನ್ನು ಉಳಿಸಬೇಕಿದೆ ಎಂದರು. ದುಂಡು ಮೇಜಿನ ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ವಿವಿಧ ಚಳುವಳಿ ಸಂಘಟನೆಗಳು ಮುಖಂಡರು ಪಾಲ್ಗೊಂಡಿದ್ದರು. ಭಾಗವಹಿಸಿದ ಮುಖಂಡರು ಕೃಷಿಯ ಖಾಸಗೀಕರಣ ಕೋಮುವಾದೀಕರಣದ ಕುರಿತು ಸಂಘವು ಮಂಡಿಸಿದ ವಿಚಾರಗಳನ್ನು ಅನುಮೋದಿಸಿದರು. ಮಾತ್ರವಲ್ಲ ತಾವು ಕಂಡಂತಹ ಅಂಶಗಳನ್ನು ಸಭೆಯ ಗಮನಕ್ಕೆ ತಂದರು. ಕೃಷಿ ಮಾತ್ರವೇ ಅಲ್ಲ, ಪ್ರಜಾತಂತ್ರ ವ್ಯವಸ್ಥೆಗೆ ಹಾನಿ ತರುವ ಬಿಜೆಪಿ ಸರ್ಕಾರದ ಹಲವು ಅಪಾಯಕಾರಿ ನೀತಿಗಳ ಬಗೆಗೆ ಮಾಹಿತಿ ನೀಡಿದರು.

...ಳ್ಳು ಭರವಸೆ, ವಿರೋಧ ಪಕ್ಷಗಳ ದಮನ'

- ಉಗ್ರಪ್ಪ, ವಿರೋಧಪಕ್ಷದ ಮುಖಂಡರು, ವಿಧಾನಪರಿಷತ್

"ರೈತ ನಾಯಕ ಎಂದು ನನ್ನನ್ನು ತಾನು ಬಿಂಬಿಸಿಕೊಂಡ ಮುಖ್ಯಮಂತ್ರಿ ಯಡಿಯೂರಪ್ಪನವರ ಸರ್ಕಾರದ ತಹಶೀಲ್ದಾರರು, ಅಧಿಕಾರಿಗಳು ಹಾವೇರಿ ಗೋಲಿಬಾರ್ ಪ್ರಕರಣದಲ್ಲಿ ಸತ್ತವರು ರೈತರಲ್ಲ ಗಲಭೆಕೋರರು ಎಂದು ಈ ಕುರಿತು ವಿಚಾರಣೆ ನಡೆಸುತ್ತಿರುವ ಜಸ್ಟೀಸ್ ಜಗನ್ನಾಥ್ ಆಯೋಗದ ಮುಂದೆ ಹೇಳಿಕೆ ನೀಡಿದ್ದಾರೆ. ಇದು ಬಿಜೆಪಿ ಸರ್ಕಾರದ ನೀತಿ.

ಮಹಾರಾಜ(ಮು.ಮ.) ಹೆಸರಿನಲ್ಲಿ ರಾಜ್ಯದ ದೇವಸ್ಥಾನಗಳಲ್ಲಿ ನಿತ್ಯಪೂಜೆ ಮಾಡುವುದು ದೇವಸ್ಥಾನಗಳನ್ನು ಮಠಗಳಿಗೆ ನೀಡುವುದು, 'ಅಮ್ಯೂಸ್ ಮಹಲ್' ಹಸ್ತಾಂತರ ಇವೇ ಈ ಸರ್ಕಾರದ ಪ್ರವೃತ್ತಿಗಳು. ಸರ್ಕಾರ ವಿರೋಧ ಪಕ್ಷಗಳನ್ನು ದಮನ ಮಾಡಲು ಯತ್ನಿಸುತ್ತಿದೆ. (ನನಗೆ ಮತ್ತು

ಪುಟ 12 ಕ್ಕೆ

ಕೆ.ಎಂ.ಎಫ್. ಮೇಲೆ ಯಡಿಯೂರಪ್ಪ ಮುಗಿಬಿದ್ದಿರುವುದೇಕೆ?

ಸಹಕಾರಿ ಕ್ಷೇತ್ರದ ಒಂದು ಸ್ವಾಯತ್ತ ಸಂಸ್ಥೆಯಾದ ಕೆ.ಎಂ.ಎಫ್ ಎಂಬ ನಂದಿನಿ ಹಾಲಿನ ಡೈರಿಯ ಮೇಲೆ ಕರ್ನಾಟಕ ರಾಜ್ಯ ಸರ್ಕಾರ ಮುಗಿಬಿದ್ದಿದ್ದು ಅದು ಕಾನೂನು ಸಮರಕ್ಕೂ ವಿಸ್ತರಿಸಿ ಈಗ ನ್ಯಾಯಾಲಯದ ಮಧ್ಯಂತರ ಆದೇಶದಿಂದಾಗಿ ಒಂದು ಘಟ್ಟ ತಲುಪಿದೆ.

ದೇವೇಗೌಡರ ಪ್ರೀತಿಯ ಪುತ್ರ, ಜನತಾದಳ(ಎಸ್) ಮುಖಂಡ ಎಚ್.ಡಿ.ರೇವಣ್ಣ, ಕೆ.ಎಂ.ಎಫ್ ನ ಅಧ್ಯಕ್ಷರಾಗಿದ್ದಾರೆ. ಅವರು ಹಾಲಿನ ಬೆಲೆ ಏರಿಕೆ ಪರವಾಗಿದ್ದಾರೆಂದರೆ ಅದನ್ನೇ ಜನರ ಮುಂದೆ ಬಿಂಬಿಸಿ ರಾಜಕೀಯ ಲಾಭ ಮಾಡಿಕೊಳ್ಳುವ ಅವಕಾಶವನ್ನು ಬಿಜೆಪಿ ಬಿಟ್ಟೀತೆ. ಅದೂ 20:20 ಸರ್ಕಾರದ ಸಂದರ್ಭದಲ್ಲಿ ಬಿಜೆಪಿಗೆ ಅಧಿಕಾರವನ್ನು ಜನತಾದಳ ಬಿಟ್ಟುಕೊಡಲು ನಿರಾಕರಿಸಿರುವಾಗ. ಆಪರೇಷನ್ ಕಮಲದ ಮೂಲಕ ವಿರೋಧ ಪಕ್ಷಗಳನ್ನು ದಮನ ಮಾಡುವ ಪ್ರಜಾಪ್ರಭುತ್ವ ವಿರೋಧಿ ಸೇಡಿನ ರಾಜಕೀಯವೇ ಇಲ್ಲಿಗೂ ವಿಸ್ತರಿಸಿದೆ ಎಂದರೆ ತಪ್ಪಾಗಲಾರದು. ಕೆ.ಎಂ.ಎಫ್.ಗೆ ಬಿಜೆಪಿ ಚೇಲಾಗಳೋ ಆರೆಸ್ಸೆಸ್ ಪರಿವಾರದ ಚೆಡ್ಡಿಗಳಲ್ಲಿ ಯಾರಾದರೂ ಅಧ್ಯಕ್ಷರಾಗಿದ್ದರೆ ಯಡಿಯೂರಪ್ಪ ಹೀಗೇ ಮಾಡುತ್ತಿದ್ದರೇ ಎಂದು ಯೋಚಿಸಬೇಕಿದೆ.

ತನಿಖೆ ಬೇಡವೆಂದಲ್ಲ

ಇದೆಲ್ಲಾ ಹೇಳುವಾಗ ಕೆ.ಎಂ.ಎಫ್.ನ ಲೆಕ್ಕ ಪತ್ರಗಳಲ್ಲಿ ಏನಾದರೂ ಅಕ್ರಮ, ದೋಷಗಳಿದ್ದರೆ, ನೇಮಕಾತಿ ಪ್ರಕ್ರಿಯೆಯಲ್ಲಿ ಸಾಮಾಜಿಕ ನ್ಯಾಯದ ಉಲ್ಲಂಘನೆಯಾಗಿದ್ದಲ್ಲಿ ಅದಕ್ಕಾಗಿ ನ್ಯಾಯಬದ್ಧವಾದ ತನಿಖೆಯಾದರೆ, ತಪ್ಪಿತಸ್ಥರ ಮೇಲೆ ಕ್ರಮ ವಹಿಸಿದರೆ ಯಾರೂ ಅದಕ್ಕೆ ಆಕ್ಷೇಪ ಎತ್ತಬಾರದು. ಆದರೆ ರಾಜಕೀಯ ವಿರೋಧಿಗಳ ಮೇಲೆ ಸೇಡು ತೀರಿಸಿಕೊಳ್ಳುವ ಅಸ್ತ್ರವಾಗಿ ಇಂತಹ ತನಿಖೆಗಳು ಬಳಕೆಯಾಗಬಾರದು ಎಂಬುದಷ್ಟೇ ಪ್ರಜ್ಞಾವಂತರ ಜನರ ನಿರೀಕ್ಷೆ.

ಸರ್ಕಾರ ಸಹಕಾರ ಇಲಾಖೆಯ 21 ಜನರ



ಹಾಲಿನ ಬೆಲೆ ಏರಿಕೆ ಸಂಬಂಧ ಕೆಎಂಎಫ್-ರಾಜ್ಯ ಸರ್ಕಾರಗಳ ನಡುವೆ ಜಟಾಪಟಿ ನಡೆದಂತೆ ಕಾಣುತ್ತಿದ್ದರೂ ಅದು ಅಷ್ಟು ಮಾತ್ರವಾ?



ತಂಡದಿಂದ ಕೆ.ಎಂ.ಎಫ್.ನ 2001-02008 ರ ನಡುವಿನ ಲೆಕ್ಕಪತ್ರಗಳ ಪರಿಶೀಲನೆಗೆ ಆದೇಶಿಸಿತ್ತು. ಅದೇ ರೀತಿ ಕೆ.ಎಂ.ಎಫ್.ನ ಹಲವು ಉನ್ನತ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಮೀಸಲಾದ ಸ್ಥಾನಗಳಲ್ಲಿ ಇತರೆಯವರನ್ನು ತುಂಬಲಾಗಿದೆಯೆಂಬ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯ ತನಿಖೆಗೆ ಆದೇಶಿಸಿತ್ತು.

ಹಾಲಿನ ಬೆಲೆ ಏರಿಕೆ ಅನಗತ್ಯವೇ? ಅನಿವಾರ್ಯವೇ?

ಹಾಲಿನ ಬೆಲೆಯ ಪ್ರಶ್ನೆಗೆ ಮುಖ್ಯವಾಗಿ ಎರಡು ಮುಖಗಳಿವೆ. ಎರಡನ್ನೂ ಗಮನಿಸಬೇಕಿದೆ. ಒಂದು ಹಾಲನ್ನು ಬಳಸುವ ಗ್ರಾಹಕರು. ಮತ್ತೊಂದು ಹಾಲನ್ನು ಉತ್ಪಾದಿಸುವ ರೈತರು. ಇಬ್ಬರ ಹಿತಾಸಕ್ತಿಯೂ ಮುಖ್ಯವೇ.

ರಾಜ್ಯ ಸರ್ಕಾರ ಹಾಲಿನ ಬೆಲೆ ಏರಿಸುವ ಬದಲಿಗೆ ತಲಾ ಲೀಟರ್ ಹಾಲಿಗೆ 2 ರೂಪಾಯಿ ಸಹಾಯಧನವನ್ನು ರೈತರಿಗೆ ನೀಡುವುದಾಗಿ ಘೋಷಿಸಿದೆ. ಇದು ಸ್ವಾಗತಾರ್ಹವೇ. ಈ ಭರವಸೆ ಸಮರ್ಪಕವಾಗಿ ಜಾರಿಯಾಗಿ ಸಹಾಯಧನ ರೈತರ ಕೈಗೆ ಇನ್ನೂ ಸಿಗಬೇಕಿದೆ. ಆದರೆ ಹಾಲು ಉತ್ಪಾದಿಸುವ ರೈತರ ಕಷ್ಟ ಎಷ್ಟು ತೀವ್ರವಾಗಿದೆ ಎಂದರೆ ಈ ಎರಡು ರೂಪಾಯಿಗಳ ಸಹಾಯಧನದ ನಂತರವೂ ಅವರು ಸಂಕಷ್ಟದಲ್ಲಿ ಉಳಿಯುತ್ತಾರೆಂಬುದೇ ಈ ಒಟ್ಟು ಪ್ರಕರಣ ಒಂದು ಪ್ರಮುಖ ಪ್ರಶ್ನೆ. ದುಬಾರಿಯಾದ ಹಾಲು ಉತ್ಪಾದನಾ ವೆಚ್ಚ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ತತ್ತರಿಸಿರುವಂತೆ ಆಹಾರಗಳ ಬೆಲೆ ಏರಿಕೆಯಿಂದ ರೈತರು ತತ್ತರಿಸಿ ಹೋಗಿದ್ದಾರೆ.

ಏನೂ ಗಿಟ್ಟಲ್ಲ

"ಕಳೆದ ವರ್ಷ 50 ಕೆ.ಜಿ. ಹಿಂಡಿಗೆ 800 ರೂಪಾಯಿ ಇದ್ದದ್ದು ಈಗ 950 ಆಗಿದೆ. ಚಕ್ಕೆ ಬೂಸಾ 50 ಕೆ.ಜಿ.ಗೆ 320 ರೂ. ಇದ್ದದ್ದು 380 ಆಗಿದೆ. ರವೆ ಬೂಸಾ 380 ರಿಂದ 480 ರೂ. ಆಗಿದೆ. ಫೀಡ್ಸ್ 350 ಇದ್ದದ್ದು 480 ಆಗಿದೆ. ಒಂದು ಸಣ್ಣ ಕಂತೆ ಹಸಿ ಹುಲ್ಲಿಗೆ 25-30 ರೂಪಾಯಿ ಕೊಡಬೇಕು. ಈ ಹಸು ಸಾಕೋದೇ ಬೇಡಪ್ಪ ಅನಿಸಿಬಿಟ್ಟಿದೆ. ಎಷ್ಟೋ ಜನ ಹಸುಗಳನ್ನು ಮಾರಿಬಿಟ್ಟು ಬೇರೆ ಏನಾದರೂ ಮಾಡಬೇಕು ಅಂತ ಹೊರಟಿದ್ದಾರೆ. ಡೈರಿಯವರು ಕೊಡುವ 13 ರೂಪಾಯಿಗೆ ಏನೂ ಗಿಟ್ಟಲ್ಲ".

ಅಂತಾರೆ ಬೆಂಗಳೂರು ಮಾಗಡಿ ರಸ್ತೆಯ ಚಿಕ್ಕಗೊಲ್ಲರಹಟ್ಟಿ ಸಮೀಪದಲ್ಲಿ ಹಸು ಸಾಕಾಣಿಕೆ ಮಾಡುತ್ತಿರುವ ಪ್ರಕಾಶ್ ಮತ್ತು ರಾಜಮ್ಮ ಕುಟುಂಬದವರು.

"ಹಸುವಿಗೆ ಬಾವು ಬಂದಿದೆ ಅಂತ ಒಮ್ಮೆ ಡಾಕ್ಟರ್ ಬಂದು ಹೋದರೆ 250 ರೂಪಾಯಿ ಖರ್ಚಾಗುತ್ತೆ. ಹಸುವಿಗೆ ಕ್ಯಾಲ್ಸಿಯಂ ಕೊಡಿಸಿದರೆ ಏನಿಲ್ಲಾಂದ್ರೂ 300 ರೂ. ಖರ್ಚಾಗುತ್ತೆ. ಇವತ್ತು ನಾಟಿ ಕ್ರಾಸ್ ಹಸು ಕೊಂಡು ತರಬೇಕೂಂದ್ರೆ 15-20 ಸಾವಿರ ಆಗುತ್ತೆ. ಎಚ್-ಎಫ್ ಹಸು 30 ಸಾವಿರ ಆಗುತ್ತೆ. ನಾಟಿ ಹಸು ಅಂದ್ರೂನೂ 15 ಸಾವಿರಕ್ಕೆ ಕಮ್ಮಿಗೆ ಸಿಗೋದಿಲ್ಲ. ಹಿಂಗಿರೋವಾಗ ನಾವು ಏನು ದನಗಳನ್ನು ಸಾಕೋದು? ಏನ್ ಜೀವನ ಮಾಡೋದು?" ಅಂತ ಅವರ ಪ್ರಶ್ನೆ.

ಪಶು ಆಹಾರದ ಉತ್ಪಾದನೆಗೆ ಅಗತ್ಯವಾದ ಕಚ್ಚಾವಸ್ತುಗಳ ಬೆಲೆ ಏರಿಕೆಯಿಂದಾಗಿ ಪಶು ಆಹಾರ ಉತ್ಪಾದಿಸುವ ಕೆಎಂಎಫ್ ಕೂಡ ಇಕ್ಕಟ್ಟಿಗೆ ಸಿಲುಕಿದೆ ಎನ್ನುತ್ತದೆ. ಕೆ.ಎಂ.ಎಫ್ ದಾಖಲೆ.


ಹಾಲು ಉತ್ಪಾದಕರಿಗೆ ಕನಿಷ್ಟ ಲೀಟರ್‌ಗೆ 15.5 ರೂಪಾಯಿ ಕೊಡುವುದು ಕೆಎಂಎಫ್ ನ ಉದ್ದೇಶ. ಬೆಲೆ ಏರಿಕೆಯಿಂದ ಬರುವ ಹೆಚ್ಚುವರಿ ಹಣದಲ್ಲಿ ಜಿಲ್ಲಾ ಹಾಲು ಒಕ್ಕೂಟಗಳ ನಷ್ಟವನ್ನು ಸರಿದೂಗಿಸಿ ಉಳಿದಷ್ಟನ್ನು ರೈತರಿಗೆ ವರ್ಗಾಯಿಸುತ್ತೇವೆ ಎನ್ನುತ್ತಾರೆ ಕೆ.ಎಂ.ಎಫ್. ನಿರ್ದೇಶಕರು.


ನಂದಿನಿ ಹಾಲಿನಲ್ಲಿ ವಿವಿಧ ಬಗೆಗಳಿದ್ದರೂ ಶೇ.3.0 ಜಿಡ್ಡಿನ ಅಂಶವಿರುವ ಟೋನ್ಡ್ ಹಾಲು ಅತಿಹೆಚ್ಚು ಬಳಕೆಯಲ್ಲಿರುವುದು. ಇದು ಲೀಟರ್‌ಗೆ 16 ರೂಪಾಯಿ ಇದೆ. ಇದೇ ಹಾಲಿಗೆ ಕೇರಳದಲ್ಲಿ 19 ರೂ. ತಮಿಳುನಾಡಿನಲ್ಲಿ 18 ರೂ. ಆಂಧ್ರಪ್ರದೇಶದಲ್ಲಿ 21 ರೂ. ಗೋವಾದಲ್ಲಿ 22 ರೂ. ಬಾಂಬೆಯಲ್ಲಿ ಕೂಡ 22 ರೂ. ಬೆಲೆ ಇದೆಯಂತೆ. ಕೆ.ಎಂ.ಎಫ್ ಹೇಳುವಂತೆ ಇಡೀ ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿ ಅತಿ ಕಡಿಮೆ ಬೆಲೆಗೆ ಹಾಲನ್ನು ಮಾರಲಾಗುತ್ತಿದೆ.

ಸ್ವಾಯತ್ತತೆ ಪ್ರಶ್ನೆ :

ಹಾಲು ಉತ್ಪಾದಕರಾದ ರೈತರು ಸಂಕಷ್ಟದಲ್ಲಿದ್ದಾರೆ ಎನ್ನುವುದರ ಜೊತೆಗೆ ಇಲ್ಲಿ ಇನ್ನೊಂದು ಮುಖ್ಯವಾದ ಪ್ರಶ್ನೆ ಇದೆ. ಕೆ.ಎಂ.ಎಫ್. ಎಂಬುದು ಒಂದು ಸ್ವಾಯತ್ತ ಸಂಸ್ಥೆ. ಹಾಲಿನ ಬೆಲೆ ನಿಗದಿ ಇತ್ಯಾದಿ ಪ್ರಶ್ನೆಗಳಲ್ಲಿ ತನ್ನದೇ ಆದ ತೀರ್ಮಾನ ತೆಗೆದುಕೊಳ್ಳುವ ಈ ಸ್ವಾಯತ್ತ ಸಹಕಾರಿ ಸಂಸ್ಥೆಯ ಹಕ್ಕನ್ನು ಕಸಿದುಕೊಂಡು ಸಂಘರ್ಷಕ್ಕಿಳಿಯುವುದು

ಪುಟ 10ಕ್ಕೆ





ಕೆ.ನೀಲಾ

ಕಡಲು ದಾಟಬಾರದು ಅಂತಾ ಸಂಪ್ರದಾಯ ಹೇಳ್ತಿದ್ರು. ಆದ್ರೆ ಕಡಲಿರೋದಕ್ಕೆ, ಕಡಲು ದಾಟಿರೋದಕ್ಕೇ ಅಲ್ವೆ ಏನೆಲ್ಲಾ ಪಡೆದಿರೋದು...?

'ಸಮುದ್ರವೇ ನೀನು ಸಂಘರ್ಷದ ಸಂಕೇತ'

ಮಂಗಳೂರಿಗೆ ಮತ್ತೊಮ್ಮೆ ಹೊರಡುವ ಸಂಭ್ರಮ ಒದಗಿತು. ಬಟ್ಟಬಯಲು ಮತ್ತು ಬಿರೀಬಿಸಿಲ ನಾಡಿನವಳಾದ ನಾನು ಕಡಲನ್ನು ಮಲೆನಾಡನ್ನು ಆಪ್ತವಾಗಿ ಪ್ರೀತಿಸುತ್ತ ಬೆಳೆದವಳು. ಶಿವರಾಮ್ ಕಾರಂತರ ಕಾದಂಬರಿಗಳು ಮತ್ತು ಅವರ ಜೀವನ ಚರಿತ್ರೆಯನ್ನು ತುಂಬ ಚಿಕ್ಕ ವಯಸ್ಸಿನಿಂದಲೇ ಹಠ ಹಿಡಿದು ಓದಿದ ಪರಿಣಾಮವೂ ಹೌದಿರಬೇಕು. ಕಡಲ ಕಿನಾರೆಯಲ್ಲಿ ಗಳಿಗೆಗಳ ಲೆಕ್ಕವಿಲ್ಲದೆ ಹೆಡೆಯೆತ್ತಿ ಹರಿದು ಬರುವ ಅಲೆಗಳನ್ನು ಮತ್ತೆ ಮತ್ತೆ ಎಣಿಸುವ ಹುಚ್ಚು ಮನಸ್ಸು, ಮರ್ಜಿ-ಮುಲಾಜುಗಳ ಹಮ್ಮು-ಬಿಮ್ಮುಗಳ ಹಂಗು ತೊರೆದು ಭೋರ್ಗರೆದ ಸಮುದ್ರದಂಚಿನಲ್ಲಿ ಸುಮ್ಮನೆ ನಿರಾಳ ನಿತಾಂತವಾಗಿ ಹೊತ್ತುಗಳೆವ ಬಯಕೆಯದು. ಸಮುದ್ರವೆಂದರೆ ಪ್ರೀತಿ, ಸಮುದ್ರವೆಂದರೆ ಸಹನೆ, ಸಮುದ್ರವೆಂದರೆ ವೈಶಾಲ್ಯತೆ, ಸಮುದ್ರವೆಂದರೆ ಹೋರಾಟ. ಅಷ್ಟೇ ಯಾಕೆ ಮತ್ತೆ ಮತ್ತೆ ಧಾವಿಸುವ ದಣಿವರಿಯುದ ಅಲೆಗಳು ಸಂಘರ್ಷದ ಪ್ರತೀಕವಲ್ಲವೇ? ಜಲರಾಶಿಯದು ಸಮಾನತೆಯ ಸಂಕೇತವಲ್ಲವೇ?

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳು ಅನೇಕ ಸಕಾರಾತ್ಮಕ ಅಂಶಗಳಿಗೆ ಹೆಸರುಳ್ಳ ಪ್ರದೇಶ. ಮೇಲ್ಮಟ್ಟದ ಆರ್ಥಿಕತೆ, ಸಾಕ್ಷರತೆಯಲ್ಲೂ ಅಗ್ರಸ್ಥಾನವೇ. ಕಡಲು ಏನೆಲ್ಲ ಜ್ಞಾನಶಾಖೆಗೆ ಹಾದಿ ಮಾಡಿಕೊಟ್ಟಿದೆ. ಡಚ್ಚರು, ಪೋರ್ಚುಗೀಸರು, ಇಂಗ್ಲೀಷರು ಸೀದಾ ಬಂದಿದ್ದು ಈ ಕಡಲ ದಂಡೆಗೇ. ವೀರಪರಂಪರೆಯು ಮೈ ನವಿರೇಳಿಸುವಂಥ ದೀರ ಜೀವನಗಾಥೆಗಳಿಗೆ ಸಾಕ್ಷಿಯಾಗಿ ನಿಂತಿದೆ. ಸಾಹಿತ್ಯಿಕ ಸಾಂಸ್ಕೃತಿಕವಾಗಿಯೂ ಈ ಕರಾವಳಿ ನೆಲ ಶ್ರೀಮಂತ ಫಲ ಕೊಟ್ಟಿದೆ. ಅರೆಪಾಳೇಗಾರಿ ತೆಕ್ಕೆಯಲ್ಲಿ ಇನ್ನೂ ನರಳುತ್ತಿರುವ ಹೈದರಾಬಾದ್ ಕರ್ನಾಟಕದ ಜಾನಪದ ಮಹಿಳೆಯು ಬಂಜೆತನಕ್ಕೆ ವೈಧವ್ಯಕ್ಕೆ ಹೆದರಿ ನರಳುತ ಹೆಣ್ಣಿನ ಜನುಮವೇ ಬೇಡೆಂದು ಗೋಗರೆವ ಹೊತ್ತಲ್ಲಿ ಗಂಡನಿಗೂ ಮಗನಿಗೂ ಸಮಾಜಕ್ಕೂ ಸವಾಲೆಸೆದು ತನ್ನ ಅಸಿತ್ವ ಅಸ್ಮಿತತೆಯ ಹಿರಿಮೆ-ಗರಿಮೆ ಮೆರೆದ 'ಸಿರಿ' ಎಂಬ ಛಲಗಾತಿ ಮಹಿಳೆಯರ ಜಾನಪದ ಪೌಢ್ಯನ ಈ ನೆಲದುದ್ದಕ್ಕೂ ಹಾಸು ಹೊಕ್ಕಾಗಿದೆ. ಪೋರ್ಚುಗೀಸರೊಂದಿಗೆ ಶಾಮೀಲಾದ ಗಂಡನ ವಿರುದ್ಧವೇ ಸಮರ ಸಾರಿದ ಉಳ್ಳಾಲದ ರಾಣಿ ಅಬ್ಬಕ್ಕದೇವಿಯ ಶೌರ್ಯ ಮತ್ತು ನೆಲದ ಪ್ರೇಮಕ್ಕೆ ಸಾಟಿ ಯಾವುದು ಹೇಳಿ? ಎಲ್ಲದಕ್ಕೂ ಸಾಕ್ಷಿಯಾಗಿ ಮೊರೆಯುತ್ತಿದೆ ಸಮುದ್ರ. ಹೆಂಚು-ಬೀಡಿ ಕಾರ್ಮಿಕರ ಹೋರಾಟದಿಂದ ಸ್ಫುಟಗೊಂಡ ಬಂಡಾಯಗಾಥೆ ಯುವಜನತೆಯ ಕೈಗೆ ಕೆಂಬಾವುಟವಿತ್ತು ಕ್ರಾಂತಿಯ ನಡೆಗೆ ಕಾವಿನ ಗತಿ ತಂದಿದೆ. ಭಾಸ್ಕರ ಕುಂಬ್ಳೆ, ಶ್ರೀನಿವಾಸ್ ಬಜಾಲ್‌ನನ್ನು ಹತ್ಯೆಗೈದ ಸಂಘ ಪರಿವಾರಿಗಳಿಗೆ ಸಡ್ಡು ಹೊಡೆದು ಸಮತೆಯ ಜ್ಯೋತಿ ಬೆಳಗಲು ಮುನ್ನುಗ್ಗಿದ ಯುವ ಪಡೆಯೇ ಇಲ್ಲಿದೆ.

ಇದೇ ಸಂದರ್ಭದಲ್ಲಿ ಸನಾತನ ಸಂಸ್ಕೃತಿಯು ಬಾಚಿಕೊಳ್ಳುತ್ತಿರುವ ಅಪಾಯವೂ ಢಾಳಾಗಿ ಕಾಣಿಸುತ್ತದೆ. ಧಾರ್ಮಿಕ ಮಾಫಿಯಾ ಧರ್ಮಸ್ಥಳದ ಕೇಂದ್ರದಿಂದಲೇ ಮೊದಲಿಟ್ಟಿದೆ. ಭೂಗತ ಲೋಕದ ನಂಟೂ ಬೆಸೆದುಕೊಂಡಿದೆ. ಉಡುಪಿಯ ಪೇಜಾವರ ಸ್ವಾಮಿಯು ಕರ್ನಾಟಕದ ಸೌಹಾರ್ದತೆಗೇ ಕೊಳ್ಳಿಯಿಡುವ ಹಠ ತೊಟ್ಟಂತೆ ಕಾರ್ಯೋನ್ಮುಖರಾಗಿದ್ದಿದೆ. ನಾನು, ಲಕ್ಷ್ಮಿ ಮೀನಾಕ್ಷಿ, ಪ್ರಮಿಳಾ, ಶಶಿ ಮಂಗಳೂರು ಚರ್ಚಿಗೆ ಭೇಟಿಯಿತ್ತೆವು. ಎಂಥ ಭಯಾನಕ ಸ್ಥಿತಿಯಿದು? ರಾತ್ರೋರಾತ್ರಿ ಇದ್ದಕ್ಕಿದ್ದಂತೆ ಬಾರ್ಬರಿಕ ಧಾಳಿ ಮಾಡಿದ್ದು ಆರೆಸ್ಸೆಸ್ ಮತ್ತು ಭಜರಂಗ ಪಡೆಯೇ. ಚರ್ಚಿನ ಭಕ್ತಾದಿಗಳ ಕಣ್ಣಲ್ಲಿ ಭಯವೆಂಬುದು ಭಯಾನಕವಾಗಿ ಕಾಲೂರಿತ್ತು. ಬಾಗಿಲಿನ ಕಿಟಕಿಯ ಗ್ಲಾಸುಗಳು ಒಡೆದು, ಮಾರಕಾಸ್ತ್ರಗಳನ್ನು ಝಳಪಿಸಿ ಬೆದರಿಕೆಯೊಡ್ಡಿದ್ದಾರೆ..... ಮೂಡಬಿದಿರೆಯಲ್ಲಿ ರಮಣಿ ಅಕ್ಕನೊಂದಿಗೆ.... ಮಂದಿರಕ್ಕೆ ಹೋದಾಗ ಗೋವಾ ಮೂಲದ ಕಾವಲುಗಾರ ವ್ಯಕ್ತಿಯೊಬ್ಬರು "ಬಾಂಬೆಯಲ್ಲಿ ರಾಜ್ ಠಾಕ್ರೆ ಮಾಡೋ ಕೆಲಸವೂ ತಪ್ಪು ಮತ್ತು ಕರ್ನಾಟಕದಲ್ಲಿ ಚರ್ಚ್‌ಗಳ ಮೇಲೆ ಧಾಳಿ ಮಾಡ್ತಿರೋದೂ ತಪ್ಪು..." ಎಂದು ಹೇಳುವಾಗ ಆತನ ಎದೆಯಲ್ಲಿ ಯಾವ ಅಳುಕೂ ಇರಲಿಲ್ಲ.

ನನ್ನೊಳಗಿನ ಕ್ಯಾಮೆರಾ ಕಣ್ಣೊಂದು ಸೌಹಾರ್ದ ನೆಲೆಗಾಗಿ ಹುಡುಕುತ್ತಲೇ ಇತ್ತು. ಬೆಳ್ತಂಗಡಿಯಿಂದ ಸಂಗಾತಿ ನಿಲೇಶ್ ಹೇಳುತ್ತಿದ್ದರು "ಕಾಮ್ರೇಡ್ ಮಂಗಳೂರಿನ ಹತ್ತಿರ ಭಾವೈಕ್ಯತೆಗೆ ಹೆಸರಾದ ಬಪ್ಪ ನಾಡುಂಟು. ಬಪ್ಪ ಬ್ಯಾರಿಯ ತಾಣವದು. ಅಲ್ಲಿಗೆ ಹೋಗೋಣ, ತುಂಬಾ ಮಾಹಿತಿ ಸಿಗಲಿಕ್ಕುಂಟು" ಇನ್ನೂ ಬಹಳಷ್ಟು ಐತಿಹಾಸಿಕ ಸಂಗತಿಗಳ ವಿವರಣೆ ಅವರಲ್ಲಿತ್ತು. "ಮತ್ತೆ ಬರಾಣ ಕಾಮ್ರೇಡ್..... ನಂಗಿಲ್ಲಿ ಬಾಳಷ್ಟು ತಿಳ್ಕೊಳ್ಳಿಕ್ಕುಂಟು....." ಅಂದೆ.

ಬೆಳ್ತಂಗಡಿಯಲ್ಲಿ ತಹಸೀಲ ಕಛೇರಿಯ ಮುಂದೆ ಜನವಾದಿ ಮತ್ತು ಪ್ರಾಂತ ರೈತ ಸಂಘದ ಬಾವುಟ ಹಿಡಿದ ರೈತ ಮಹಿಳೆಯರು ಪುರುಷರು. ಒಂದೂವರೆ ಸಾವಿರದಷ್ಟು ರಬ್ಬರ್ ಗಿಡಗಳನ್ನು ನಿಷ್ಕರುಣೆಯಂತೆ ಕತ್ತರಿಸಿದ್ದು ಅರಣ್ಯ ಇಲಾಖೆಯ ರೇಂಜರ್ ಮನೋಹರ್. ಈ ಕಟುಕ ಆಯುಧಗಳಿಂದ ಹದಿನೈದು ನವಿಲು ಮೊಟ್ಟೆಗಳನ್ನು ಒಡೆದು ಕಾಲಲ್ಲಿ ಹೊಸಕಿದನಂತೆ. ಲಕ್ಷಗಟ್ಟಲೆ ಬ್ಯಾಂಕ್ ಸಾಲ ಮಾಡಿ ಬೆಳೆಸಿದ ರಬ್ಬರ್ ಗಿಡಗಳನ್ನು ನಾಶ ಮಾಡುವಾಗ ನೋಟಿಸ್ ಸಹ ಕೊಡಲಿಲ್ಲ. ಹೋರಾಟ ಮತ್ತು ಸಂಘರ್ಷವೊಂದೇ ಅಸ್ತ್ರವಲ್ಲವೇ. ಹೋರಾಟಗಾರರು ತಹಸೀಲ ಕಛೇರಿ ಘೇರಾವ್ ಮಾಡಿದರು. ಸಮಸ್ಯೆ ಪರಿಹರಿಸುವುದಾಗಿ ಹೇಳಿದ ಮೇಲೆ ಸಂಗಾತಿಗಳು ಸೆಮಿನಾರಿನತ್ತ ಹೆಜ್ಜೆ ಹಾಕಿದರು. ಎತ್ತರ ಕಾರಣ ಬಿ.ಎಂ.ಭಟ್ ಮತ್ತು ಸುಕನ್ಯ ಹೇಳ್ತಿದ್ದರು. ರೇಂಜರ್‌ನನ್ನು ಸಸ್ಪೆಂಡ್ ಮಾಡುವುದಾಗಿ ಸಚಿವರು ಬಹಿರಂಗ ಸಭೆಯಲ್ಲಿ ಹೇಳಿದ್ರು ಅಂತ. ಸರ್ವೆ ಆಗಿ ರಬ್ಬರ್ ಗಿಡ ಬೆಳೆದ ಪ್ರದೇಶ ಅರಣ್ಯ ಇಲಾಖೆ ವ್ಯಾಪ್ತಿಲಿ ಬರೋದಿಲ್ಲ ಎಂದಾಯ್ತು. ಪರಿಹಾರದ ಬೇಡಿಕೆ ಪಟ್ಟಲಿದೆ.

ರಾತ್ರಿ ಶಿವಕುಮಾರ ಮನೆಯಲ್ಲಿ ಅವರ ಹೆಂಡತಿ ಪ್ರೀತಿಯಿಂದ ಉಣಬಡಿಸಿದ ಪಲಾವ್ ಅನ್ನದ ರುಚಿಗೆ ಮನಸ್ಸು ಅರಳಿಸಿಕೊಂಡು ಮುಡಬಿದಿರೆಗೆ ಬಂದು ತಲುಪಿದಾಗ ಸರಿ ರಾತ್ರಿ ಜಾರಿತ್ತು. ಬೀಡಿ ಯೂನಿಯನ್ ಕಚೇರಿಯು ಆ ಕಾರ್ಮಿಕರ ಹೆಮ್ಮೆಯ ಸಾಧನೆಯೇ ಹೌದು. ರಮಣಿಯಕ್ಕನ ಮನೆಯ ನೀರ್ದೋಸೆ, ಹಲಸಿನ ಕಾಯಿಯ ಫೈ ನ ಸವಿಗಿಂತಲೂ ಆ ಮನೆಯ ಸದಸ್ಯರ ಕಳ್ಳು-ಬಳ್ಳಿ ಸಂಬಂಧ ಒಡನಾಟ ಹೆಚ್ಚು ಹಿತವೆನಿಸಿತು. ಪಂಜರದ ಗಿಣಿರಾಮ ಭುಜದ ಮೇಲೆ ಕೂತು ಹಣೆಯ ಬಿಂದಿ ಬಾಯಿಗಿಟ್ಟುಕೊಂಡ.

ಬೆರಗು ತಂದ ಪ್ರಶ್ನೆಯೊಂದು ಬೆನ್ಹತ್ತಿ ಕಾಡುತ್ತಿತ್ತು. ನಲವತ್ತು ವರ್ಷಕ್ಕೂ ಮಿಕ್ಕು ಪ್ರಾಯದ ಅವಿವಾಹಿತರ ಸಂಖ್ಯೆ ಬಹಳಷ್ಟಿರುವುದು ಯಾಕೆ? ದೊಡ್ಡಕ್ಕನಿಗೆ ಮದುವೆಯಾಗದೆ ಚಿಕ್ಕವಳಿಗೆ ಆಗಲಿಕ್ಕುಂಟಾ ಕಾಮ್ರೇಡ್...?" "ಜಾತಿ -ಗೋತ್ರ ಬಿಡಲಿಕ್ಕುಂಟ"? ಅಂತಸ್ತು ಅಂತೆಲ್ಲ ಬೇಡ್ವಾ...? ಮದುವೆ ಅಂದ್ರೆ ಕಮ್ಮಿ ಖರ್ಚಾ? ಪವನಗಟ್ಟಲೆ ಚಿನ್ನ ಎಣಸಲಿಕ್ಕಾಗದಷ್ಟು ಹಣ ಇಲ್ಲಾಂದ್ರೆ ಮದುವೆ ಯೋಗ ಸನಿಹಕ್ಕೂ ಸುಳಿಯಲಿಕ್ಕಿಲ್ಲ.

"ಒಂದು ಹೆಣ್ಣು ಒಂದು ಗಂಡು ಮನಸ್ಸೊಂದಾದ್ರೆ ಪರಸ್ಪರ ಗೌರವಿಸ್ಕೊಂಡು ಒಂದ್ ಕಡೆ ಬದುಕ್ಲಿಕ್ಕೆ ಇಷ್ಟೆಲ್ಲ ರಗಳೆ ಯಾಕೆ? ಈ ಜಾತಿ-ಗೀತಿನ್ನೆಲ್ಲ ಒದ್ದಾಕ್ಬಿಡ್ರಿ. ಇದೂ ಹೋರಾಟದ ಭಾಗವೇ ಅಲ್ಲವೇ? ಸರಳ ವಿವಾಹ, ಸುಂದರ ಬದುಕು, ಪ್ರಜಾಪ್ರಭುತ್ವೀಯ ಕುಟುಂಬ ಕಷ್ಟವೇನು? ಜೊತೆ-ಜೊತೆಗೆ ದುಡಿದು ಬದುಕಿದ್ರಾಯ್ತು."

ನಮ್ಮ ಮಾತಿಗೆ ಕೆಲವರ ಕಣ್ಣು ಅಚ್ಚರಿ ವ್ಯಕ್ತಿಸಿದವು. "ಈಗೆಲ್ಲ ಇಂಥ ಮದುವೆ ಆಗ್ತಾ ಉಂಟು. ಆದ್ರೂ ಸಂಪ್ರದಾಯ ಅಂತ ಇರುತ್ತೆ ನೋಡಿ...." ರಾಗ ಎಳೆದರೊಬ್ಬರು.

ಕಡಲು ದಾಟಬಾರದು ಅಂತ ಸಂಪ್ರದಾಯ ಹೇಳ್ತಿದ್ದರು. ಆದ್ರೆ ಕಡಲಿರೋದಕ್ಕೆ ಕಡಲು ದಾಟಿರೋದಕ್ಕೆ ಅಲ್ವೆ ನೀವು ಏನೆಲ್ಲ ಪಡೆದಿರೋದು? ಸಂಪ್ರದಾಯ ಮುರಿದಿದ್ರೆ ಹೇಗೆ? ಸಮುದ್ರದ ಬೆನ್ನೇರಿ ಸೆಣಸುವ ಜನ ನೀವು ಸನಾತನ ಸಂಪ್ರದಾಯಕ್ಕೆ ಶರಣಾಗೋದು ಬೇಡ...." ನಾನು ನಗುತ ಹೇಳುವಾಗ ಅನೇಕ ಸಂಗಾತಿಗಳ ಮೊಗದಲ್ಲಿ ಉತ್ಸುಕತೆ ಇತ್ತು. ಸಮುದ್ರದಂತೆ.

ಸಮುದ್ರವೇ ನೀನು ನಿತ್ಯ ನೂತನ
ಸಮುದ್ರವೇ ನೀನು ಉಲ್ಲಾಸದ ಚೇತನ
ಸಮುದ್ರವೇ ನೀನು ಸಂಘರ್ಷದ ಸಿಂಚನ.

ಕೆ.ಎಂ.ಎಫ್. ಮೇಲೆ ಯಡಿಯೂರಪ್ಪ....


ಪುಟ 9 ರಿಂದ

ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಅಷ್ಟೇನೂ ಒಳ್ಳೆಯದಲ್ಲ ಎನಿಸುತ್ತದೆ.

ಇದರ ಅರ್ಥ ಜನಸಾಮಾನ್ಯರಿಗೆ ಬೆಲೆ ಏರಿಕೆಯ ಬರೆಬೀಳಲಿ ಅಂತ ಅಲ್ಲ. ಸರ್ಕಾರ, ರೈತ ಪ್ರತಿನಿಧಿಗಳು, ಕೆ.ಎಂ.ಎಫ್ ಎಲ್ಲರೂ ಸೇರಿ ಸಮಸ್ಯೆಗೆ ಸೂಕ್ತ ಪರಿಹಾರ ಹುಡುಕುವ ಕುರಿತು ಚಿಂತಿಸ ಬಹುದು. ಚರ್ಚಿಸಿ ಪರಿಹಾರ ಕಂಡುಕೊಳ್ಳಬಹುದು

ಆ ಪರಿಹಾರದಲ್ಲಿ ಕೆ.ಎಂ.ಎಫ್.ನ ಆಡಳಿತಾತ್ಮಕ ವೆಚ್ಚವನ್ನು ತಗ್ಗಿಸಿ ಪರಿಸ್ಥಿತಿ ನಿಭಾಯಿಸಲು ಸಾಧ್ಯವೇ. ಈ ಕುರಿತು ಚಿಂತಿಸುವುದೂ ಒಳ್ಳೆಯದೇ. ಸರ್ಕಾರ ನೀಡುವ ಸಹಾಯಧನದ ಹೆಚ್ಚಳ ಸಾಧ್ಯವೇ. ಅದನ್ನು ಪರಿಶೀಲಿಸಬಹುದು. ಆದರೆ ಜನತೆಗೆ ಹೊರೆ ಬೀಳದಂತೆ ಹಾಗೂ ಹಾಲು ಉತ್ಪಾದಿಸುವ ರೈತರಿಗೆ ಜೀವನ ನಡೆಯುವಂತೆ ಸರಿಯಾದ ಬೆಲೆ ನೀಡಬೇಕು ಎನ್ನುವುದು ಇವತ್ತಿನ ತುರ್ತಿನ ಅಗತ್ಯವಾಗಿದೆ.

ಕೆ.ಎಂಎಫ್ ಅಧ್ಯಕ್ಷರ ಮನವಿಯನ್ನು ಮನ್ನಿಸಿ ನ್ಯಾಯಾಲಯವು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಅಡಿಯಲ್ಲಿ ಬರುವ ಸೂಕ್ತ ಕಲಂ ನ್ನು ಬಳಕೆ ಮಾಡದೇ ವಿವೇಚನಾರಹಿತವಾಗಿ ಆದೇಶ ನೀಡಲಾಗಿದೆ ಎಂಬ ಆಧಾರದಲ್ಲಿ ಸರ್ಕಾರ ಈಗ ನೀಡಿರುವ ಲೆಕ್ಕಪತ್ರಗಳ ತನಿಖೆ ಮತ್ತು ನೇಮಕಾತಿ ಪ್ರಕ್ರಿಯೆ ಕುರಿತ ತನಿಖೆಗೆ ಮಧ್ಯಂತರ ತಡೆ ಆದೇಶ ನೀಡಿದೆ. ಈ ಕಾನೂನಿನ ಪ್ರಕ್ರಿಯೆ ತನ್ನ ನಿಯಮದಂತೆ ಪೂರ್ಣಗೊಳ್ಳಲಿ, ಆದರೆ ರೈತರಿಗೆ ಆದಷ್ಟು ಬೇಗ ಪರಿಹಾರ ಸಿಗಲಿ ದ್ವೇಷದ ರಾಜಕಾರಣಕ್ಕೆ ಸಹಕಾರಿ ಸಂಸ್ಥೆಯೊಂದು ಬಲಿಯಾಗದಿರಲಿ ಎಂದು ಆಶಿಸೋಣ.



ಜಾಗತಿಕ ಹಣಕಾಸು ಬಿಕ್ಕಟ್ಟು ಈಗ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹಂತಕ್ಕೇರಿದೆ. ಇಂತಹ ಸಂದರ್ಭದಲ್ಲಿ ಯುಪಿಎ ಸರಕಾರದ ಪ್ರತಿಕ್ರಿಯೆ ಅತ್ಯಂತ ನಿರಾಶಾದಾಯಕವಾಗಿದೆ. ಹಾಗೆಂದು ದೇಶದ ಪ್ರಜಾಪ್ರಭುತ್ವವಾದಿ ಶಕ್ತಿಗಳು ಸುಮ್ಮನೆ ಕೂರುವುದು ಸಾಧ್ಯವಿಲ್ಲ. ಸಿಪಿಐ(ಎಂ) ಮತ್ತು ಇತರ ಎಡ-ಪ್ರಗತಿಪರ ಶಕ್ತಿಗಳು ಈ ಕುರಿತು ನಿರ್ದಿಷ್ಟ ಸಲಹೆ-ಸೂಚನೆಗಳನ್ನು ಮುಂದಿಟ್ಟಿವೆ. ಸರಕಾರ ಅವನ್ನು ಗಂಭೀರವಾಗಿ ಪರಿಶೀಲಿಸುವಂತೆ ಮಾಡಬೇಕಾಗಿದೆ.

ಭಾರತದ ಜನಗಳನ್ನು ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ರಕ್ಷಿಸುವುದು ಹೇಗೆ?

ಸೆಪ್ಟೆಂಬರ್ ತಿಂಗಳಲ್ಲಿ ಅಮೆರಿಕಾದಲ್ಲಿ ಮತ್ತು ಜಗತ್ತಿನಾದ್ಯಂತ ಶೇರು ಮಾರುಕಟ್ಟೆ ಕುಸಿತದಿಂದ ಎಲ್ಲರನ್ನು ದಿಗಿಲುಗೊಳಿಸಿದ ಜಾಗತಿಕ ಹಣಕಾಸು ಬಿಕ್ಕಟ್ಟು ಈಗ ಇನ್ನೂ ಗಂಭೀರ ಸ್ವರೂಪ ತಳೆದು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹಂತಕ್ಕೇರಿದೆ. ಮುಂದುವರೆದ ದೇಶಗಳನ್ನು ದೀರ್ಘಕಾಲದ ಆರ್ಥಿಕ ಹಿಂಜರಿತ ಬಲವಾಗಿ ತಟ್ಟಲಿದೆ ಎಂಬ ಭಯ ಆವರಿಸಿದೆ. ಇದು ಭಾರತದಂತಹ ಮುಂದುವರಿಯುತ್ತಿರುವ ದೇಶಗಳ ಮೇಲೂ ಪ್ರತಿಕೂಲ ಪರಿಣಾಮ ಬೀರಲಿದೆ.

ಇಂತಹ ಸಂದರ್ಭದಲ್ಲಿ ಯುಪಿಎ ಸರಕಾರದ ಪ್ರತಿಕ್ರಿಯೆ ಅತ್ಯಂತ ನಿರಾಶಾದಾಯಕವಾಗಿದೆ. ಮೊದಲಿಗೆ ಅದು ನಮಗೇನೂ ಆಗುವುದಿಲ್ಲ ಎಂದು ಹೇಳಿತು. ನಂತರ ಅದು ರಿಸರ್ವ್ ಬ್ಯಾಂಕ್ ಮೂಲಕ ಕೈಗೊಳ್ಳುತ್ತಿರುವ ಕ್ರಮಗಳನ್ನು ನೋಡಿದರೆ ಅದಕ್ಕೆ ಈ ಬಿಕ್ಕಟ್ಟಿನ ಕಾರಣಗಳು ಮತ್ತು ಎಂತಹ ಅಗಾಧ ಪ್ರಮಾಣದಲ್ಲಿ ಇದು ಸಂಭವಿಸಿದೆ ಎಂಬುದನ್ನು ಗ್ರಹಿಸಲು ಸಾಧ್ಯವಾಗುತ್ತಿಲ್ಲವೇನೋ ಎಂದನಿಸುತ್ತದೆ. ಕೇವಲ ಬಡ್ಡಿದರಗಳನ್ನು ಬದಲಿಸಿ ಪರಿಸ್ಥಿತಿಯನ್ನು ಎದುರಿಸಬಹುದು, ಅದೊಂದೇ ಕ್ರಮದಿಂದ ಒಂದೆಡೆ ಹಣದುಬ್ಬರವನ್ನೂ ತಡೆಯಬಹುದು, ಇನ್ನೊಂದೆಡೆ ಆರ್ಥಿಕ ನಿಧಾನಗತಿಯನ್ನೂ ಹೋಗಲಾಡಿಸಬಹುದು ಎಂಬುದು ಮನಮೋಹನ್ ಸಿಂಗ್-ಚಿದಂಬರಂ ನಿರೀಕ್ಷೆಯಿದ್ದಂತೆ ಕಾಣುತ್ತದೆ.

ಈ ಬಿಕ್ಕಟ್ಟು ಕೇವಲ ದೇಶದ ಹಣಕಾಸು ಮತ್ತು ಕಾರ್ಪೊರೇಟ್ ಹಿತಾಸಕ್ತಿಗಳಿಗೆ ಮಾತ್ರ ಸಂಬಂಧಪಟ್ಟದ್ದು ಎಂದು ಅವರು ಭಾವಿಸಿದಂತಿದೆ. ಆದ್ದರಿಂದ ಕೆಲವು ದೊಡ್ಡ ಉದ್ಯಮಿಗಳನ್ನು ಮತ್ತು ಬ್ಯಾಂಕರುಗಳನ್ನು ಮಾತ್ರ ಈ ವಿಷಯದಲ್ಲಿ ಭೇಟಿ ಮಾಡಿ ಚರ್ಚಿಸಿದೆ. ದೇಶದ ಆರ್ಥಿಕದಲ್ಲಿ ಭಾಗೀದಾರರಾದ ರಾಜ್ಯ ಸರಕಾರಗಳು, ರಾಜಕೀಯ ಪಕ್ಷಗಳು; ಕಾರ್ಮಿಕ ಸಂಘಗಳು, ರೈತರ ಸಂಘಟನೆಗಳು ಮತ್ತು ಇತರ ಸಂಘಟನೆಗಳನ್ನು ಈ ಸಮಾಲೋಚನೆಗಳಲ್ಲಿ ಒಳಗೊಳ್ಳಬೇಕು ಎಂದು ಅದಕ್ಕೆ ಇದುವರೆಗೂ ಅನಿಸದಿರುವುದು ಅದಿನ್ನೂ ಐಎಂಎಫ್-ವಿಶ್ವಬ್ಯಾಂಕ್ ಹೇರಿದ ನವ-ಉದಾರವಾದಿ ಚೌಕಟ್ಟಿನಲ್ಲೇ ಸಿಲುಕಿಕೊಂಡಿದೆ ಎಂಬುದನ್ನು ತೋರಿಸುತ್ತದೆ. ಜಗತಿನಲ್ಲೆಲ್ಲ ಈ ಬಗ್ಗೆ ಗಂಭೀರ ಪುನರಾಲೋಚನೆ ನಡೆಯುತ್ತಿರುವಾಗ ಮನಮೋಹನ ಸಿಂಗ್-ಚಿದಂಬರಂ ಜೋಡಿ ಈಗಲೂ ಅದಕ್ಕೇ ಜೋತು ಬಿದ್ದಿದೆ. ಅದರಿಂದಾಗಿ ಈ ದೇಶದ ಜನಸಾಮಾನ್ಯರ ಬದುಕನ್ನು ಮುಂಬರುವ ಸಂಕಟಗಳಿಂದ ರಕ್ಷಿಸುವುದು ಹೇಗೆ ಎಂದು ಅದು ಯೋಚಿಸುತ್ತಿಲ್ಲ.

ನಿರ್ದಿಷ್ಟ ಕ್ರಮಗಳು

ಆದರೆ ದೇಶದ ಪ್ರಜಾಪ್ರಭುತ್ವವಾದಿ ಶಕ್ತಿಗಳು ಸುಮ್ಮನೆ ಕೂರುವುದು ಸಾಧ್ಯವಿಲ್ಲ. ಈ ವಿಫಲ ಚೌಕಟ್ಟಿನ ಆಚೆಗೆ ಹೋಗಲೇಬೇಕಾಗಿದೆ. ಸಿಪಿಐ(ಎಂ) ಮತ್ತು ಇತರ ಎಡ-ಪ್ರಗತಿಪರ ಶಕ್ತಿಗಳು ಈ ಕುರಿತು ನಿರ್ದಿಷ್ಟ ಸಲಹೆ-ಸೂಚನೆಗಳನ್ನು ಮುಂದಿಟ್ಟಿವೆ. ಸರಕಾರ ಅವನ್ನು ಗಂಭೀರವಾಗಿ ಪರಿಶೀಲಿಸಬೇಕಾಗಿದೆ.

ಆರ್ಥಿಕದಲ್ಲಿ ಹೆಚ್ಚು ಹಣ ಹರಿಯುವಂತೆ ಮಾಡಿದರಷ್ಟೇ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಿಲ್ಲ, ಬೇಡಿಕೆಯನ್ನು ಹೆಚ್ಚಿಸುವ, ಅದಕ್ಕಾಗಿ ಜನಸಾಮಾನ್ಯರ ಕೊಳ್ಳುವ ಶಕ್ತಿಯನ್ನು ಕೂಡಾ ಹೆಚ್ಚಿಸುವ ಕ್ರಮಗಳನ್ನೂ ಕೈಗೊಳ್ಳಬೇಕು ಎಂಬುದು ಈ ಸಲಹೆ-ಸೂಚನೆಗಳ ಸ್ಥೂಲ ಅಂಶ. ಅಂದರೆ ವಿಶಾಲ ಸ್ವರೂಪದ ಬೆಳವಣಿಗೆಗೆ ಹಣಕಾಸು ಪ್ರಚೋದನೆ ಒದಗಿಸುವ ಕ್ರಮಗಳನ್ನು ಸರಕಾರ ಕೈಗೊಳ್ಳಬೇಕಾಗಿದೆ ಎಂದು ಪ್ರಗತಿಶೀಲ ಆರ್ಥಿಕ ತಜ್ಞರು ಪ್ರತಿಪಾದಿಸುತ್ತಿದ್ದಾರೆ.

ದುಡಿಯುವ ಜನಗಳ, ಅದರಲ್ಲೂ ದುರ್ಬಲ ಸ್ಥಿತಿಯಲ್ಲಿರುವ ವಿಭಾಗಗಳ ಆದಾಯ ಮತ್ತು ಬಳಕೆ ಪ್ರಮಾಣವನ್ನು ಹೆಚ್ಚಿಸುವಂತೆ ಸಾರ್ವಜನಿಕ ವೆಚ್ಚವನ್ನು ವಿಸ್ತರಿಸುವ ದಿಕ್ಕಿನಲ್ಲಿ ಕೇಂದ್ರ ಸರಕಾರ ಒಂದು ವಿಶೇಷ ಹಣಕಾಸು ಪ್ಯಾಕೇಜನ್ನು ಪ್ರಕಟಿಸಬೇಕು.

ಕೇಂದ್ರ ಸರಕಾರ ಮಾತ್ರವಲ್ಲ, ರಾಜ್ಯ ಸರಕಾರಗಳೂ ಕೊರತೆ ಹಣಕಾಸಿನ ಪ್ರಮಾಣವನ್ನು ವಿಸ್ತರಿಸಲು ಇದು ಸೂಕ್ತ ಸಮಯ. ಕೊರತೆ ಹಣಕಾಸಿಗೆ ಕಡಿವಾಣ ಹಾಕುವ ಹೆಸರಿನಲ್ಲಿ ಅಭಿವೃದ್ಧಿ ಖರ್ಚುಗಳನ್ನು ಕಡಿತ ಮಾಡಲು ಒತ್ತಡ ಹೇರುವ ಎಫ್‌ಆರ್‌ಬಿಎಂ ಕಾನೂನನ್ನು ರದ್ದು ಮಾಡಿ ರಾಜ್ಯ ಸರಕಾರಗಳು ವಿಸ್ತಾರವಾದ ಹಣಕಾಸು ಕ್ರಮಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸುವಂತೆ ಒಂದು ಸಮಗ್ರ ಸಾಲ ಪರಿಹಾರ ಯೋಜನೆಯನ್ನು ಅಂಗೀಕರಿಸಬೇಕು.

ಈಗಿರುವ ಉದ್ಯೋಗಗಳ ರಕ್ಷಣೆ


ಜಾಗತಿಕ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ದೇಶದೊಳಗೆ ಈಗ ಇರುವ ಉದ್ಯೋಗಾವಕಾಶಗಳು ಕಡಿತಗೊಳ್ಳದಂತೆ ರಕ್ಷಿಸಲು ಸರಕಾರ ಆದ್ಯತೆ ಕೊಡಬೇಕು.

ಒಂದು ನಿರ್ದಿಷ್ಟ ಸಮಯದ ವರೆಗೆ ಸಂಘಟಿತ ವಲಯದಲ್ಲಿ ಕೆಲಸ ಕಡಿತ, ಸಂಬಳ ಕಡಿತ ಇತ್ಯಾದಿ ಮಾಡದಂತೆ ಕ್ರಮಗಳನ್ನು ಕೈಗೊಳ್ಳಬೇಕು. ರಾಷ್ಟ್ರೀಯ ಆರ್ಥಿಕದ ದೃಷ್ಟಿಯಿಂದ ಇದು ಅಗತ್ಯ. ಏಕೆಂದರೆ ಕೆಲಸ ಕಡಿತ ಅಥವ ಸಂಬಳ ಕಡಿತ ಆರ್ಥಿಕದಲ್ಲಿ ಬೇಡಿಕೆಯ ಪ್ರಮಾಣವನ್ನು ಕುಗ್ಗಿಸುತ್ತದೆ, ಇದರಿಂದ ಹಿಂಜರಿತದ ಸ್ಥಿತಿ ಉಲ್ಬಣಗೊಳ್ಳುತ್ತದೆ. ರಾಜ್ಯ ಸರಕಾರಗಳು ರಿಟ್ರೆಂಚ್‌ಮೆಂಟ್, ಲೇಆಫ್ ಇತ್ಯಾದಿಗಳನ್ನು ತಡೆಯಲು ಈಗಾಗಲೇ ಕಾರ್ಮಿಕ ಕಾನೂನುಗಳಲ್ಲಿರುವ ಅಂಶಗಳನ್ನು ಬಳಸಬೇಕು.

ಮಾಲಕರು 'ವೆಚ್ಚ ಹೊಂದಾಣಿಕೆ' ಮಾಡಬೇಕಾಗುತ್ತದೆ ಎನ್ನುವಾಗ ಮೊದಲ ಏಟು ಲಾಭಗಳು ಮತ್ತು ಉಚ್ಛ ಅಧಿಕಾರಿಗಳ ಸೌಲಭ್ಯಗಳ ಮೇಲೆ ಬೀಳಬೇಕೇ ಹೊರತು ಕಾರ್ಮಿಕರ ಸಂಬಳಗಳ ಮೇಲಲ್ಲ. ಇತ್ತೀಚಿನ ಅವಧಿಯಲ್ಲಿ ಲಾಭಗಳು ಮತ್ತು ಉಚ್ಛ ಅಧಿಕಾರಿಗಳ ಸೌಲಭ್ಯಗಳು ವಿಪರೀತವಾಗಿ ಬಲೂನಿನಂತೆ ಹಿಗ್ಗಿವೆ. ಭಾರತದಲ್ಲಿ ಒಂದು ಆದಾಯ ನೀತಿ ರೂಪಿಸಿ ಕಂಪನಿಗಳ ಉಚ್ಛ ಅಧಿಕಾರಿಗಳ ಸಂಬಳ-ಸಾರಿಗೆಗೂ, ಬೆಲೆಗಳಿಗೂ ಮತ್ತು ಕಾರ್ಮಿಕರ ಸಂಬಳಗಳಿಗೂ ಪರಸ್ಪರ ಸಂಬಂಧವಿರುವಂತೆ ಮಾಡಬೇಕಾಗಿದೆ.

ಉದ್ಯೋಗ ಸೃಷ್ಟಿಸುವ ನಿಜವಾದ ಆರ್ಥಿಕ ಚಟುವಟಿಕೆಗಳ'ಲ್ಲಿ ಉತ್ಸಾಹ ತುಂಬಲು ನಿರ್ದಿಷ್ಟ ಕ್ರಮಗಳು

ಸರಕಾರ ರಫ್ತು-ಆಧಾರಿತ ವಲಯಗಳಲ್ಲಿ ಉದ್ಯೋಗ ಕಳಕೊಳ್ಳುವವರಿಗೆ ಉದ್ಯೋಗ ನೀಡಬಲ್ಲ ವಲಯಗಳಲ್ಲಿ ಬೃಹತ್ ಪ್ರಮಾಣದಲ್ಲಿ



ಸಾರ್ವಜನಿಕ ಹಣ ಹೂಡಿಕೆ ಮಾಡಬೇಕು.

ಉದ್ಯೋಗ ಖಾತರಿ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾನೂನನ್ನು ಬಲಪಡಿಸಬೇಕು ಮತ್ತು ಅದನ್ನು ನಗರ ಪ್ರದೇಶಗಳಿಗೆ ವಿಸ್ತರಿಸಬೇಕು. ಈಗ ನೂರು ದಿನಗಳ ಉದ್ಯೋಗದ ಖಾತರಿಯನ್ನು ಈ ಕಾನೂನು ಕೊಡುತ್ತದೆ. ಅದನ್ನು ಹೆಚ್ಚಿಸುವ ಬಗ್ಗೆ ಯೋಚಿಸಬೇಕು.

ಕೃಷಿ: ಆಹಾರಧಾನ್ಯಗಳ ಉತ್ಪಾದನೆಗೆ ಪ್ರೋತ್ಸಾಹ ನೀಡಬೇಕು; ದೇಶದಲ್ಲೆಲ್ಲಾ ಎಲ್ಲಾ ಪ್ರಮುಖ ಬೆಳೆಗಳ ಸಾರ್ವಜನಿಕ ಸಂಗ್ರಹ ಕಾರ್ಯಾಚರಣೆಯನ್ನು ವಿಸ್ತರಿಸಬೇಕು. ಆಹಾರ ಭದ್ರತೆಯ ಮಿಶನ್ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಬಾಬ್ತಿಗೆ ನೀಡಿರುವ ಹಣವನ್ನು ಗಮನಾರ್ಹವಾಗಿ ಹೆಚ್ಚಿಸಬೇಕು. ನೀರಾವರಿಯಲ್ಲಿ ಸಾರ್ವಜನಿಕ ಹೂಡಿಕೆಯನ್ನು ಕೂಡಾ ಹೆಚ್ಚಿಸಬೇಕಾದ ಅಗತ್ಯವಿದೆ. ಹತ್ತಿ, ಎಣ್ಣೆಬೀಜಗಳಂತಹ ಹಣದ ಬೆಳೆಗಳ ರಕ್ಷಣೆಗೆ ಹೆಚ್ಚಿನ ಸುಂಕದರಗಳ ಮೂಲಕ ಆಮದು ರಕ್ಷಣೆ ಒದಗಿಸಬೇಕು. ರಬ್ಬರ್, ಗೇರು ಮುಂತಾದ ಹಣದ ಬೆಳೆಗಳಿಗೂ ಅವುಗಳ ಬೆಲೆಗಳಲ್ಲಿ ತೀವ್ರ ಕುಸಿತವಾಗದಂತೆ ತಡೆಯಲು ರಕ್ಷಣೆ ನೀಡಬೇಕು.

ಆಹಾರ ಮತ್ತು ಇಂಧನ ಬೆಲೆಗಳು: ಅಂತರ್‍ರಾಷ್ಟ್ರೀಯ ತೈಲಬೆಲೆಗಳು ತೀವ್ರವಾಗಿ (ಬ್ಯಾರಲ್ಲಿಗೆ 60 ಡಾಲರಿಗಿಂತಲೂ ಕೆಳಗೆ) ಇಳಿದಿರುವ ಹಿನ್ನೆಲೆಯಲ್ಲಿ ಡೀಸೆಲ್ ಮತ್ತು ಪೆಟ್ರೋಲ್ ದರಗಳಲ್ಲಿ ಇತ್ತೀಚೆಗೆ ಮಾಡಿದ ಏರಿಕೆಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರೀಕರಿಸಬೇಕು, ಬಲಪಡಿಸಬೇಕು ಮತ್ತು ಈ ಮೂಲಕ ಅಗ್ಗದ ಬೆಲೆಗಳಲ್ಲಿ ಆಹಾರಧಾನ್ಯಗಳು ಪ್ರತಿಯೊಂದು ವಾಸಪ್ರದೇಶಗಳಿಗೆ ತಲುಪಬೇಕು. ಆರ್ಥಿಕದಲ್ಲಿ ಬಳಕೆಯ ಬೇಡಿಕೆಯನ್ನು ಹೆಚ್ಚಿಸಿ ಅದಕ್ಕೆ ಬಲನೀಡಲು ಇದು ಅತ್ಯಗತ್ಯ.

ಚಿಲ್ಲರೆ ವ್ಯಾಪಾರ: ಆದಾಯ ಕುಸಿದು ಜನಗಳ ಬಳಕೆ ಪ್ರಮಾಣ ನಿಧಾನಗೊಳ್ಳುವುದರಿಂದ ಸಣ್ಣ ಮತ್ತು ಅಸಂಘಟಿತ ಚಿಲ್ಲರೆ ವ್ಯಾಪಾರಿಗಳ ವ್ಯಾಪಾರವೂ ಕುಗ್ಗುತ್ತದೆ, ಅದು ಅವರ ಬದುಕನ್ನೂ ತಟ್ಟುತ್ತದೆ. ಈ ಹಿನ್ನೆಲೆಯಲ್ಲಿ ದೊಡ್ಡ ಸಂಘಟಿತ ರಿಟೈಲ್ ವ್ಯಾಪಾರಿಗಳು ಮಾರುಕಟ್ಟೆಯನ್ನು ಕಬಳಿಸಲು ಅವಕಾಶ ನೀಡಿದರೆ ಪರಿಸ್ಥಿತಿ ಇನ್ನಷ್ಟು ಉಲ್ಬಣಗೊಳ್ಳುತ್ತದೆ. ದೊಡ್ಡ ಕಾರ್ಪೊರೇಟ್ ಮಾಲ್‌ಗಳ ವಿಸ್ತರಣೆಯನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು.

ಸಣ್ಣ ಪ್ರಮಾಣದ ಉದ್ದಿಮೆಗಳು: ಸಣ್ಣ ಪ್ರಮಾಣದ ಉದ್ದಿಮೆಗಳನ್ನು ಈ ಬಿಕ್ಕಟ್ಟು ತಟ್ಟಿದರೆ ಬೃಹತ್ ಪ್ರಮಾಣದಲ್ಲಿ ಉದ್ಯೋಗ-ನಷ್ಟ ಸಂಭವಿಸುತ್ತದೆ. ಅದು ಜನಗಳ ಬದುಕನ್ನು ಬೃಹತ್ ಪ್ರಮಾಣದಲ್ಲಿ ತಟ್ಟುತ್ತದೆ. ಸರಕಾರ ಪ್ರತಿಯೊಂದು ವಲಯಕ್ಕೆ ನಿರ್ದಿಷ್ಟವಾದ ಪರಿಹಾರ ಪ್ಯಾಕೇಜುಗಳನ್ನು ರೂಪಿಸಬೇಕಾಗುತ್ತದೆ. ಇದು ವಿಶೇಷವಾಗಿ ಗಾರ್ಮೆಂಟ್, ಚರ್ಮ ಮುಂತಾದ ರಫ್ತು-ಆಧಾರಿತ, ಶ್ರಮಶಕ್ತಿಯ ಬಳಕೆ ಹೆಚ್ಚಾಗಿರುವ ವಲಯಗಳಿಗೆ ಅತ್ಯಗತ್ಯ. ಸಣ್ಣ ಪ್ರಮಾಣದ ಉದ್ದಿಮೆಗಳ ಮತ್ತು ಅವುಗಳ ಕಾರ್ಮಿಕರನ್ನು ಗಮನದಲ್ಲಿ ಇಟ್ಟುಕೊಂಡು ಈ ಪರಿಹಾರಗಳನ್ನು ರೂಪಿಸಬೇಕು. ಇದರಲ್ಲಿ ಈ ಸಣ್ಣ ಉದ್ದಿಮೆಗಳ ಬ್ಯಾಂಕ್ ಸಾಲ ಮರುಪಾವತಿಯನ್ನು ಪುನರ್‍ರೂಪಿಸುವುದು, ನೇರ ಸಬ್ಸಿಡಿಗಳು ಮತ್ತು ಉದ್ಯೋಗ ರಕ್ಷಣೆಗೆ ಪ್ರೋತ್ಸಾಹಕಗಳು ಸೇರಿರಬೇಕು.

ಸುಂಕದರಗಳ ರಕ್ಷಣೆ: ಆರ್ಥಿಕದೊಳಗೆ ಸಾರ್ವಜನಿಕ ಹೂಡಿಕೆಗಳ ಮೂಲಕ ತುಂಬುವ ಬೇಡಿಕೆ ಆಮದುಗಳ ಮೂಲಕ ಸೋರಿ ಹೋಗದಂತೆ ತಡೆಯಲು ಸೀಮಾ(ಕಸ್ಟಮ್ಸ್)ಸುಂಕಗಳನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಬೇಕು. ಯಾವುದೇ ಅಸಮಾನ ಒಪ್ಪಂದಗಳ ಹೆಸರಲ್ಲಿ ಇನ್ನಷ್ಟು ಸುಂಕ ರಿಯಾಯ್ತಿಗಳನ್ನು ಕೊಡಬಾರದು.

ಹಣಕಾಸು ನಿಯಂತ್ರಣಗಳನ್ನು ಬಿಗಿಗೊಳಿಸಬೇಕು ಮತ್ತು ಅಭಿವೃದ್ಧಿ ಹಣಕಾಸನ್ನು ಪುನರುಜ್ಜೀವನಗೊಳಿಸಬೇಕು

ಕೃಷಿ ಇಲಾಖೆಯ ಕೋಮುವಾದೀಕರಣ ....

ಪುಟ 9 ರಿಂದ

ಖರ್ಗೆಯವರಿಗೆ ಇಲ್ಲಿಯವರೆಗೆ ಅಧಿಕೃತ ನಿವಾಸಗಳನ್ನು ನೀಡಿಲ್ಲ.) ಯಾವ ಯಾವ ಇಲಾಖೆಯಲ್ಲಿ ಯಾವ ಯಾವ ಉದ್ದೇಶಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂದು ಪತ್ರ ಬರೆದು ತಿಂಗಳುಗಳೇ ಕಳೆದರೂ ಸರ್ಕಾರದಿಂದ ಉತ್ತರ ಇಲ್ಲ. ರೈತರಿಗೆ ಉಚಿತ ವಿದ್ಯುತ್ ಕೊಡುತ್ತೇವೆ ಎನ್ನುವ ಸರ್ಕಾರ 1 ಸಾವಿರ ಮೆಗಾವ್ಯಾಟ್ ವಿದ್ಯುತ್ ಹೆಚ್ಚು ಉತ್ಪಾದಿಸುವುದಾಗಿ ಹೇಳುತ್ತಿದೆ. ಆದರೆ ವಿದ್ಯುತ್ ಉತ್ಪಾದನೆಗೆ ಬಜೆಟ್‌ನಲ್ಲಿ ಕೇವಲ 3000 ಕೋಟಿ ರೂ.ಇಡಲಾಗಿದೆ.

ರೈತರ ಬೆಳೆಗೆ ನ್ಯಾಯಬದ್ಧವಾದ ಬೆಲೆ, ಗೊಬ್ಬರ, ಬೀಜ ಕೊಡಲಾಗದ ಸರ್ಕಾರ 'ಬಿಸ್ಕತ್ ಹಾಕುವಂತೆ' ರೈತ ಕುಟುಂಬಕ್ಕೆ 1,000ರೂ.ಕೊಡುತ್ತೇವೆ ಎನ್ನುತ್ತಿದೆ.

ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಜಾಸ್ತಿ ಮಾಡಿ ಎಂದರೆ ಅದರಿಂದ ಕೃಷಿಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ ಎಂದು ಸರ್ಕಾರ ಹೇಳುತ್ತಿದೆ. ಸರ್ಕಾರ ಭೂ ಮಾಲೀಕರ ಪರ ವಹಿಸಿದೆ. ಸಾವಯವ ಕೃಷಿ ಎಲ್ಲಕ್ಕೂ ಪರಿಹಾರ ಎನ್ನುವ ಸರ್ಕಾರ ಅದಕ್ಕಾಗಿ ತೆಗೆದಿಟ್ಟಿರುವುದು ಕೇವಲ 100 ಕೋಟಿ ಮಾತ್ರ.

ಸಾವಯವ ಕೃಷಿ ಮಿಷನ್‌ನಲ್ಲಿನ 14 ಜನರಲ್ಲಿ ಅಧಿಕಾರೇತರರು ಆರೆಸ್ಸೆಸ್‌ನವರಾಗಿದ್ದಾರೆ. ಈ ಮಿಷನ್‌ಗೆ ಸಂಬಂಧಿಸಿದ ಸುತ್ತೋಲೆಯಲ್ಲಿ 11 ಉದ್ದೇಶಗಳನ್ನು ಘೋಷಿಸಲಾಗಿದೆ. ಸಾವಯವ ಕೃಷಿಗೆ ನೆರವಿನ ಮಟ್ಟವನ್ನು ರಿಯಾಯಿತಿಯನ್ನು ನಿಗದಿಪಡಿಸುವುದು ಅಗತ್ಯಬಿದ್ದಲ್ಲಿ ಕಾಯಿದೆ ರಚಿಸುವುದು, ಸಂಘ ಸಂಸ್ಥೆಗಳನ್ನು ಗುರುತಿಸಿ, ಅನುದಾನ ನೀಡುವ ಹಕ್ಕು ಹೀಗೆ ವಿವಿಧ ಹಕ್ಕುಗಳನ್ನು ಸಮಿತಿಗೆ ನೀಡಲಾಗಿದೆ.

ಇದಲ್ಲದೆ ಗ್ರಾಮ ಪಂಚಾಯತ್‌ಗಳ ಮೇಲ್ವಿಚಾರಣೆ ನಡೆಸಲು, ಶಾಲೆಗಳಿಗೆ ಶಾಲಾ ಅಭಿವೃದ್ಧಿ ಸಮಿತಿ(ಎಸ್‌ಡಿಎಂಸಿ) ಗಳಿರುವಂತೆ ಮೇಲ್ವಿಚಾರಣಾ ಸಮಿತಿ ರಚಿಸಲು ಸರ್ಕಾರ ಹೊರಟಿದೆ ಇದು ಅಧಿಕಾರ ವಿಕೇಂದ್ರೀಕರಣದ ಕಲ್ಪನೆಗೆ ಹಾಗೂ ಪ್ರಜಾಪ್ರಭುತ್ವ ಮಾರಕವಾಗಿದೆ."

'ಸಾವಯವ ಕೃಷಿ ಪರಿಹಾರವಲ್ಲ'

- ಕೋಡಿಹಳ್ಳಿ ಚಂದ್ರಶೇಖರ್,
ಕಾರ್ಯಾಧ್ಯಕ್ಷರು,
ಕರ್ನಾಟಕ ರಾಜ್ಯ ರೈತ ಸಂಘ

"ಜನ ಸಾಮಾನ್ಯರು" ಸರ್ಕಾರ ಹೇಳುತ್ತಿರುವ ಸಾವಯವ ಕೃಷಿ ಮಾಡುವುದು ಕಷ್ಟಕರ. ಆಫ್ರಿಕಾದಿಂದ ಎರೆಹುಳು ತರುವುದು. ಕಾಂಪೋಸ್ಟ್ ತಯಾರಿಕೆ ಎಲ್ಲರಿಗೂ ಆಗುವುದಿಲ್ಲ. 25 ಎಕರೆ ಜಮೀನಿದ್ದವರು. 2 ಎಕರೆ ಸಾವಯವ ಕೃಷಿ ಮಾಡಬಹುದಷ್ಟೆ, ಸರ್ಕಾರ ಗೋರಕ್ಷಣೆ ಬಗೆಗೆ ತುಂಬಾ ಮಾತನಾಡುತ್ತಿದೆ. ಆದರೆ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದ ಅವಧಿಯಲ್ಲಿ ದೇಶದಿಂದ ಹೊರಕ್ಕೆ ರಫ್ತಾಗುವ ದನದ ಮಾಂಸದ ಪ್ರಮಾಣ ಎರಡು ಪಟ್ಟಾಯಿತು"

"ಸೋ ಅಂದರೆ ಸಾಕು ಸುಬ್ಬಕ್ಕನ ರಾಗ ಗೊತ್ತಾಗುತ್ತೆ"

- ವೈ.ಎಸ್.ವಿ. ದತ್ತ,
ಜೆಡಿಎಸ್ ವಕ್ತಾರರು

ಸಮಾಜ ಕಂಟಕರಾದ ಆರೆಸ್ಸೆಸ್ ಚೆಡ್ಡಿಗಳಿಗೆ ಪುನರ್‌ವಸತಿ ಕಲ್ಪಿಸಲು ಸಾವಯವ ಕೃಷಿ ಮಿಷನ್ ರೂಪಿಸಲಾಗಿದೆ. ಯಡಿಯೂರಪ್ಪ ಹೋದ ಹೋದ ಕಡೆಗಳಲ್ಲೆಲ್ಲಾ ದೇವಸ್ಥಾನ, ಮಠಗಳಿಗೆ ಬೇರೆ ಬೇರೆ ಯೋಜನೆಗಳಿಗೆ ಹಣ ನೀಡುವುದಾಗಿ ಘೋಷಿಸುತ್ತಿದ್ದಾರೆ. ಜನರಿಗೆ ಬಾರಿ ಬಾರಿ ಭರವಸೆಗಳನ್ನು ನೀಡುತ್ತಿದ್ದಾರೆ.

ಯಡಿಯೂರಪ್ಪ ಅಧಿಕಾರಕ್ಕೆ ಬಂದ ಮೇಲೆ ಈ ರೀತಿ ನೀಡುವುದಾಗಿ ಘೋಷಿಸಿರುವ ಹಣದ ಪ್ರಮಾಣ ಮೊತ್ತ 1ಲಕ್ಷ ಕೋಟಿ ಆಗುತ್ತದೆ. ಆದರೆ ರಾಜ್ಯದ ಬಜೆಟ್ ಕೇವಲ 53 ಸಾವಿರ ಕೋಟಿ. ಈ ಬಗೆಗೆ ಸ್ಪಷ್ಟನೆ ಕೇಳಿ ಯಡಿಯೂರಪ್ಪನವರಿಗೆ ಪತ್ರ ಬರೆದರೆ ಉತ್ತರವೂ ಇಲ್ಲ. ಪತ್ರ ತಲುಪಿಸಿದ್ದಕ್ಕೆ ಒಂದು ಸ್ವೀಕೃತಿ ಪತ್ರವೂ ಇಲ್ಲ.

ವಿವಿಧ ಉದ್ದೇಶ, ಯೋಜನೆಗಳಿಗೆಂದು ಇದುವರೆಗೆ ಸರ್ಕಾರ ಹೊರಡಿಸಿರುವ ಒಂದು ಸಾವಿರ ಪ್ರತಿಗಳು ನನ್ನ ಬಳಿ ಇದೆ. ಯಾವುದರಲ್ಲ ಸರ್ಕಾರ 'ಹೆಡ್ ಆಫ್ ಅಕೌಂಟ್' ಅನ್ನು ಅಂದ ಯಾವ ಲೆಕ್ಕದಲ್ಲಿ ಹಣ ಬಿಡುಗ ಮಾಡಬೇಕೆಂಬುದನ್ನೇ ನಮೂದಿಸಿಲ್ಲ. ಹೀಗಾಗಿದ್ದ ಸರ್ಕಾರದಿಂದ ಹಣವೇ ಬಿಡುಗಡೆಯಾಗುವುದಿಲ್ಲ ಸರ್ಕಾರ ಸಾವಯವ ಕೃಷಿಗೆ 100 ಕೋಟಿ ಬಿಡುಗ ಮಾಡಿದೆಯಾ ಎಂಬುದನ್ನು ಕೂಡ ಸರಿಯಾ ಪರಿಶೀಲಿಸಬೇಕಿದೆ.

10 ಎಚ್.ಪಿ.ಯೊಳಗೆ ಬಳಸುವ ರೈತರಿ ಉಚಿತ ವಿದ್ಯುತ್ ನೀಡುತ್ತೇವೆ ಎನ್ನುವ ಸರ್ಕಾ ಮೀಟರ್ ಕಡ್ಡಾಯ ಎನ್ನುತ್ತಿದೆ. ಇದಲ್ಲದೆ ರೈತರಿ ಮಾಹಿತಿಯನ್ನೇ ಕೊಡದೆ ಅವರಿಂದ 'ಹಳೆಯ ಬಾಕಿಯನ್ನು ತೀರಿಸುತ್ತೇವೆ' ಮುಚ್ಚಳಿಕೆ ದಾಖಲೆ ಸಹಿ, ಹೆಬ್ಬೆಟ್ಟು ಹಾಕಿಸಿಕೊಳ್ಳಲಾಗುತ್ತಿದೆ. ಇಂತಹ ರೈತ ವಿರೋಧಿ ಸರ್ಕಾರವು ರೈತರ ಸಮಸ್ಯೆಗ ಚರ್ಚಿಸುತ್ತೇನೆ ಎಂದು ಸಭೆ ಕರೆದರೆ ರೈತ ಸಂಘಗಳ ಅದನ್ನು ಬಹಿಷ್ಕರಿಸಬೇಕು. ನಾಗರೀಕ ಅಸಹಕಾ ಚಳುವಳಿ ಆರಂಭಿಸಬೇಕು.

ಮಂಗಳೂರು, ಉಡುಪಿ, ಮುಂತಾದ ಭಾಗಗಳಲ್ಲಿ ಮೊದಲು ಖಾಸಗಿಯಾಗಿದ್ದ ಧರ್ಮ ಪೂಜೆ, ಪುನಸ್ಕಾರ ಇತ್ಯಾದಿ ಆಚರಣೆಗಳನ್ನು ಸಾರ್ವತ್ರಿಕಗೊಳಿಸಲಾಗಿದೆ. ಸಾರ್ವಜನಿಕ ಸತ್ಯನಾರಾಯಣ ಪೂಜೆ ನಡೆಸಲಾಗುತ್ತಿದೆ. ಇದು ಆರೆಸ್ಸೆಸ್ ಸಂಘಟಿಸುತ್ತಿರುವ ಕೇಸರಿ ಬಾವುಟದ ಓಂ ಗುರುತಿನ ಆಚರಣೆಯಾಗಿದೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ.

○ ಆರ್.ಕೆ.

...ಸಂಘ ಪರಿವಾರದ 'ದ್ವಿಮುಖ ನೀತಿ'

ಪುಟ 6 ರಿಂದ

ವಿಮಾನೌಕರರೂ ವ್ಯಾಪಕ ಆಂದೋಲನವನ್ನು ಹಮ್ಮಿಕೊಳ್ಳಬೇಕೆಂದು ಹೇಳಿದರು.

ಭಾರತ ದೇಶದ ವೈವಿಧ್ಯಮಯ ಸಾಂಸ್ಕೃತಿಕ, ಸಾಮಾಜಿಕ ಬದುಕಿನ ಸನ್ನಿವೇಶಗಳನ್ನು ಮಾತ್ರವಲ್ಲದೆ ಅವುಗಳ ಮಧ್ಯೆ ಇರುವ ವೈರುಧ್ಯಗಳಿದ್ದರೂ ಏಕತೆಯಿಂದಿರುವ ಸನ್ನಿವೇಶವನ್ನು ಕೇರಳ ತಮಿಳುನಾಡು, ಉತ್ತರ ಭಾರತದ ಹಬ್ಬ ಆಚರಣೆ ನಂಬಿಕೆಗಳ ಉದಾಹರಣೆಯೊಂದಿಗೆ ವಿಶ್ಲೇಷಿಸುವ ಸೀತಾರಾಂ ಯೆಚೂರಿಯುವರು ಅಂತಹ ಸೌಹಾರ್ದತೆಗೆ ಸಂಘ ಪರಿವಾರ ಗಂಭೀರ ಕೊಡಲಿಯೇಟು ನೀಡಿರುವುದನ್ನು ಪ್ರಸ್ತಾಪಿಸಿದರು. ಒರಿಸ್ಸಾದಲ್ಲಿ ಕ್ರೈಸ್ತರ ಮೇಲೆ ನಡೆಯುತ್ತಿರುವ ಮತಾಂತರದ ಬಗ್ಗೆ ಪ್ರಸ್ತಾಪಿಸಿದ ಯೆಚೂರಿಯವರು ಈತನಕ ಮಾಧ್ಯಮಗಳು ವಿಶ್ಲೇಷಿಸದ ಮಹತ್ವಪೂರ್ಣ ಅಂಶದ ಬಗ್ಗೆ ಬೆಳಕು ಚೆಲ್ಲಿದರು. ಒರಿಸ್ಸಾದಲ್ಲಿ ಮತ್ತು ದೇಶದ ಉದ್ದಗಲಕ್ಕೂ ಬುಡಕಟ್ಟು ಆದಿವಾಸಿ ಜನಾಂಗಕ್ಕೆ ಅವರದ್ದೇ ಆದ ಧರ್ಮವಿದೆ. ಆಚಾರ ವಿಚಾರಗಳಿವೆ. ಇವರುಗಳು ತಮ್ಮ ಧರ್ಮದಿಂದ ಪ್ರತ್ಯೇಕಗೊಂಡು ಹಿಂದೂ ಧರ್ಮವನ್ನು ಸ್ವೀಕರಿಸಿದರೆ ಅದು ಸಂಘ ಪರಿವಾರಕ್ಕೆ ಮತಾಂತರವಾಗುವುದಿಲ್ಲ, ಆದರೆ ಕ್ರೈಸ್ತ ಮತ್ತು ಇತರ ಧರ್ಮಗಳಿಗೆ ಪರಿವರ್ತನೆಗೊಂಡರೆ ಮತಾಂತರವಾಗುತ್ತದೆ ಎಂದು ಹೇಳಲಾಗುತ್ತಿದೆ. ಆದೇ ಸಂಘ ಪರಿವಾರ ಮುಖಂಡರು ಮತ್ತು ಬಾಳಠಾಕ್ರೆಯಂತಹ ವ್ಯಕ್ತಿಗಳು ಭಯೋತ್ಪಾದನೆಯಲ್ಲಿ ತೊಡಗಿರುವ ಮುಸ್ಲಿಂ ಮೂಲಭೂತವಾಗಿ ಜನರಿಗೆ ಯಾವುದೇ ಕಾನೂನು ನೆರವು ನೀಡಲು ವಕೀಲರು ಮುಂದೆ ಬರಬಾರದೆಂದು ತಾಕೀತು ಮಾಡುತ್ತಾರೆ. ಆದರೆ ಮಾಲೆಗಾಂವ್ ಕಾನ್‌ಪುರ ಮೊದಲಾದೆಡೆಯಲ್ಲಿ ಬಾಂಬ್ ಸಿಡಿಸಿ ಹಲವಾರು ಜನರ ಸಾವಿಗೆ ಕಾರಣವಾಗಿರುವ ಹಿಂದೂ ಉಗ್ರಗಾಮಿ ಸಂಘಟನೆಯ ವ್ಯಕ್ತಿಗಳಿಗೆ ಎಲ್ಲಾ ರೀತಿಯ ಕಾನೂನು ನೆರವು ನೀಡಲು ಮುಂದೆ ಬರುತ್ತಿರುವ ಸಂಘ ಪರಿವಾರ ಇಬ್ಬಗೆಯ ನೀತಿ ಅನುಸರಿಸುತ್ತಿದೆ ಎಂದು ಖಂಡಿಸಿದರು.

ಮಾಲೆಗಾಂವ್ ಪ್ರಕರಣದಲ್ಲಿ ಸೇನಾ ಶಾಲೆಯನ್ನು ಹಾಗೂ ಶಸ್ತ್ರಾಸ್ತ್ರಗಳನ್ನು ಬಳಸುವ ಮೂಲಕ ಭೀಕರವಾದ ಹುನ್ನಾರವನ್ನು ಸಂಘಪರಿವಾರ ಹಮ್ಮಿಕೊಂಡಿದೆ ಎಂದು ಹೇಳಿದರು. ಚಾರಿತ್ರಿಕವಾಗಿ ಸಂಘ ಪರಿವಾರ ನಡೆಸಿದ ವಿಧ್ವಂಸಕಾರಿ ಕೃತ್ಯಗಳ ಬಗ್ಗೆ ವಿಶ್ಲೇಷಿಸಿದರು. ಭಯೋತ್ಪಾದನೆಯ ಕೃತ್ಯಗಳನ್ನು ಧಾರ್ಮಿಕ ಸಮುದಾಯದ ಸ್ವರೂಪದಿಂದ ಆಳೆಯುವುದನ್ನು ಟೀಕಿಸಿದ ಯೆಚೂರಿಯವರು ಹಿಂದೂ ಮೂಲಭೂತವಾದ ಮುಸ್ಲಿಂ ಮೂಲಭೂತವಾದಕ್ಕೆ ಪ್ರೋತ್ಸಾಹಿಸಿ ಬೆಳೆಸುತ್ತದೆ. ಅದೇ ರೀತಿ ಅದಕ್ಕೆ ವಿರುದ್ಧವಾಗಿ ಮುಸ್ಲಿಂ ಮೂಲಭೂತವಾದ ಹಿಂದೂ ಮೂಲಭೂತವಾದ ಬೆಳೆಯುವುದನ್ನು ಅಪೇಕ್ಷಿಸುತ್ತದೆ ಎಂಬುದನ್ನು ಪಾಕಿಸ್ತಾನದ ಮೂಲಭೂತವಾದಿ ಸಂಘಟನೆಯ ನಾಯಕರ ಪತ್ರಿಕಾ ಹೇಳಿಕೆಯೊಂದಿಗೆ ವಿವರಿಸಿದರು.

ಶೇರು ಮಾರುಕಟ್ಟೆಗೆ ಹಣ ಹಾಕಿ - ಬಿಕ್ಕಟ್ಟು ಬಗೆಹರಿಸಲಾಗದು

ಕಾಂಗ್ರೆಸ್ಸು ನೇತೃತ್ವದ ಯುಪಿಎ ಸರಕಾರ ತಪ್ಪು ದಾರಿಯಲ್ಲಿ ನಡೆಯುತ್ತಿದೆ. ಇಂದು ಜಾಗತಿಕ ಬಿಕ್ಕಟ್ಟಿನಿಂದ ಭಾರತ ಸ್ವಲ್ಪಮಟ್ಟಿಗೆ ಪಾರಾಗಲು ಯುಪಿಎ ಸರಕಾರದ ಧೋರಣೆ ಕಾರಣವಲ್ಲ, ಬದಲಾಗಿ ಅದರ ಸಾಮ್ರಾಜ್ಯಶಾಹಿ ಪ್ರೇರಿತ ಧೋರಣೆ ವಿರೋಧಿಸಿ ಸತತವಾಗಿ ಹೋರಾಡಿದ ಎಡಪಕ್ಷಗಳೇ ಕಾರಣ. ಈಗಲೂ ಭಾರತದ ಆರ್ಥಿಕ ಬಿಕ್ಕಟ್ಟಿನ ಲಕ್ಷಣಗಳು ಕಂಡುಬರುತ್ತಿದ್ದು ಕಳೆದ ಆದಿತ್ಯವಾರ ಮುಂಬಯಿಯಲ್ಲಿ 4 ಪ್ರಮುಖ ಬಿಲ್ಡರ್‌ಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೈಗಾರಿಕಾರಂಗ, ಕೃಷಿರಂಗ ಸ್ಥಗಿತತೆ ಅನುಭವಿಸಿದೆ. ಇಂತಹ ಸಂದರ್ಭದಲ್ಲಿ ಆರ್ಥಿಕತೆಯ ಚೇತನಕ್ಕೆ ಕೋಟ್ಯಾಂತರ ರೂಪಾಯಿಯನ್ನು ಶೇರು ಮಾರುಕಟ್ಟೆಗೆ ಬಿಡುಗಡೆಗೊಳಿಸುವುದರಿಂದ ಪಾರಾಗಲು ಸಾಧ್ಯವೇ ಇಲ್ಲ. ಬದಲಾಗಿ ಸಾರ್ವಜನಿಕ ರಂಗದಲ್ಲಿ ಹಾಗೂ ಮೂಲಭೂತ ಸೌಕರ್ಯ ಮತ್ತು ಅತ್ಯಾವಶ್ಯಕ ರಂಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣಕಾಸು ಹೂಡಿಕೆಯ ಮೂಲಕ ಜನರ ಕೊಳ್ಳುವ ತಾಕತ್ತನ್ನು ಜಾಸ್ತಿ ಮಾಡಬೇಕೆಂದು ಹೇಳಿದರು. ಉದ್ಯೋಗಾವಕಾಶವನ್ನು ಹೆಚ್ಚಿಸುವ ಮೂಲಕ ಸಾರ್ವಜನಿಕ ರಂಗವನ್ನು ಬಲಪಡಿಸಬೇಕು. ನಿರುದ್ಯೋಗ ಜಾಸ್ತಿಯಾಗುವ ಅಪಾಯವಿದೆ ಎಂದು ಹೇಳಿದ ಅವರು "ಬಂಡವಾಳಶಾಹಿ ನಿರುದ್ಯೋಗವನ್ನು ಸೃಷ್ಟಿಸುತ್ತದೆ. ಆದರೆ ತಾನು ಮಾತ್ರ ನಿರುದ್ಯೋಗಿಯಾಗಿರುವುದಿಲ್ಲ" ಎಂದು ತಾರ್ಕಿಕವಾಗಿ ಹೇಳುತ್ತಾ ಪ್ರಸ್ತುತ ಬಂಡವಾಳಶಾಹಿ ಬಿಕ್ಕಟ್ಟಿನಿಂದ ಜನರ ಶೋಷಣೆ ಮತ್ತಷ್ಟು ಹೆಚ್ಚುತ್ತದೆ ಎಂದು ಹೇಳಿದರು.

ಮಂಗಳೂರು ಕ್ರೈಸ್ತ ವಿದ್ಯಾಪೀಠದ ಫಾರಕ್‌ಜಾನ್ ಫರ್ನಾಂಡಿಸ್‌ರವರು ಸಭೆಯಲ್ಲಿ ಭಾಷಣ ಮಾಡಿದರು. ಕಾಸರಕೋಡು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಅಹಮ್ಮದ್ ಕುಜ್ಞಿ ಯವರು ವೇದಿಕೆಯಲ್ಲಿದ್ದರು. ಪ್ರಾರಂಭದಲ್ಲಿ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ರಾಜ್ಯಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ವಹಿಸಿದ್ದು ಕೊನೆಯಲ್ಲಿ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಯಾದವಶೆಟ್ಟಿ ವಂದಿಸಿದರು.

ಸೀತಾರಾಂ ಯೆಚೂರಿಯವರು ಮಂಗಳೂರಿನಲ್ಲಿ ಕಿಕ್ಕಿರಿದ ಪತ್ರಿಕಾಗೋಷ್ಠಿಯಲ್ಲಿ ಸಂಘ ಪರಿವಾರ ಇತ್ತೀಚಿಗೆ ಮಂಗಳೂರಿನಲ್ಲಿ ಕ್ರೈಸ್ತ ಪ್ರಾರ್ಥನಾಲಯಗಳ ಮೇಲೆ ಧಾಳಿ ನಡೆಸಿದ ಹಿನ್ನೆಲೆಯಲ್ಲಿ ಮಂಗಳೂರಿನ ಬಿಷಪ್ ಫಾಸ್ಲ್ ಡಿ'ಸೋಜಾರವರನ್ನು ಯೆಚೂರಿಯವರು ಭೇಟಿ ಮಾಡಿ ಚರ್ಚೆ ನಡೆಸಿದರು.

ವರದಿ : **ಕೃಷ್ಣಪ್ಪ ಕೊಂಚಾಡಿ**

ಆಹಾರದ ಹಕ್ಕಿನ ಮೇಲೆ ದಾಳಿ ಖಂಡಿಸಿ ಸಮಾವೇಶ

ರಾಜ್ಯದಲ್ಲಿ ಕೋಮುವಾದಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದ ದಿವಸದಿಂದ ರಾಜ್ಯದಲ್ಲಿ ಹಲವಾರು ಕಡೆಗೆ ಕೋಮುಭಾವನೆ ಕೆರಳಿಸುವ ನಿಟ್ಟಿನಲ್ಲಿ ಗಲಭೆಗಳು ನಡೆಯುತ್ತಿರುವಂತೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿ ಸಂಘ ಪರಿವಾರವು ತನ್ನ ಬಚ್ಚಿಟ್ಟ ಅಜೆಂಡಾಗಳನ್ನು ಜಾರಿಗೊಳಿಸಲು ಪ್ರಯತ್ನ ನಡೆಸಿವೆ.

ಮತಾಂತರದ ಹೆಸರಿನಲ್ಲಿ ಕ್ರಿಶ್ಚಿಯನ್ ಜನಾಂಗದ ಮೇಲೆ ದಾಳಿ ನಡೆಸಿದೆ. ಅದೇ ರೀತಿ ಅಲ್ಪಸಂಖ್ಯಾತರ ಮೇಲೆ ದನದ ಮಾಂಸದ ಹೆಸರಿನಲ್ಲಿ ಪರೋಕ್ಷ ದಾಳಿ ನಡೆಸುತ್ತಲಿದೆ. ತಾಲ್ಲೂಕಿನ ಪ್ರಗತಿನಗರ, ಹನವಾಳ, ಸಿದ್ದಾಪೂರ ಕಡೆಗಳಲ್ಲಿ ಹಸುಗಳನ್ನು ಕಸಾಯಿಖಾನೆಗೆ ಮಾರಾಟ ಮಾಡುತ್ತಿದ್ದಾರೆಂದು ಹಸುಗಳನ್ನು ಖರೀದಿ ಮಾಡುತ್ತಿದ್ದವರ ಮೇಲೆ ಹಲ್ಲೆ ನಡೆಸಿದ್ದಾರೆ. ಅದೇ ರೀತಿ ಹನವಾಳದಲ್ಲಿ ಜನತೆ ತಿರುಗಿಬಿದ್ದು ಸಂಘ ಪರಿವಾರದವರನ್ನು ಹೊಡೆದು ಓಡಿಸಿದ್ದಾರೆ. ಸಂಘ ಪರಿವಾರವು ಈಗ ತನ್ನ ಆಡಳಿತದ ಅಧಿಕಾರದ ದುರುಪಯೋಗ ಪಡಿಸಿಕೊಂಡು ಶಾಸಕರು ಸ್ವತಃ ಮುಂದೆ ನಿಂತು ಮಾಂಸದ ಅಂಗಡಿಗಳನ್ನು ಮುಚ್ಚಿಸಿದ್ದಾರೆ. ಕಸಾಯಿಖಾನೆಗಳನ್ನು ಧ್ವಂಸಗೊಳಿಸಿ ಮಾಂಸ ಮಾರಾಟ ಮಾಡುವವರ ಮೇಲೆ ಹಲ್ಲೆ ಮಾಡಿ ಅವರ ಮೇಲೆಯೇ ದೂರು ದಾಖಲಿಸಿ ಜೈಲಿಗೆ ಕಳಿಸಿದ್ದಾರೆ. ಹೀಗೆ ಪೊಲೀಸರನ್ನು ತಮ್ಮ ಕೆಲಸಕ್ಕೆ ಬಳಸಿಕೊಳ್ಳುತ್ತಾರೆ.

ಹೀಗೆ ನಗರದಲ್ಲಿ ದನದ ಮಾಂಸ ಮಾರಾಟ ಮಾಡುವುದನ್ನು ನಿಲ್ಲಿಸಲಾಗಿದೆ. ಈ ಮಾಂಸವನ್ನು ಹೆಚ್ಚು ಜನರು ಆಹಾರ ಪದ್ಧತಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಈಗ ಅವರಿಗೆ ಕಡಿಮೆ ದರದಲ್ಲಿ ಮಾಂಸ ದೊರೆಯುವುದು ನಿಂತುಹೋಗಿದೆ. ಇಲ್ಲಿಯ ಎಪಿಎಂಸಿ ಮಾರುಕಟ್ಟೆ ಸದಸ್ಯರಾದ ಅಮರೇಶಪ್ಪ ಗೋನಾಳ ಎನ್ನುವವರು ಗೋನಾಳ ಗ್ರಾಮದಲ್ಲಿ ದಲಿತರು, ಕೂಲಿಕಾರರು ಸಾಗುವಳಿ ಮಾಡುತ್ತಿದ್ದ ಸ.ನಂ. 19 ನ್ನು ದೌರ್ಜನ್ಯದಿಂದ ಬಿಡಿಸಿ ಕೂಲಿಕಾರರನ್ನು ಭೂಮಿಯಿಂದ ಹೊರಗೆ ಹಾಕಿದ್ದಾರೆ. ಭೂಮಾಲಿಕರಿಗೆ ಬಿಜೆಪಿ ಸರ್ಕಾರದಲ್ಲಿ ಸಕ್ಕರೆ ಸಚಿವರಾದ ಶಿವರಾಜ ತಂಗಡಗಿ ಇವರಿಗೆ ಬೆಂಬಲ

ದಲಿತರನ್ನು ಭೂಮಿಯಿಂದ ಹೊರಹಾಕಲಾಗಿದೆ. ಬಿಜೆಪಿ ಮಂತ್ರಿಯದೇ ಇದಕ್ಕೆ ಬೆಂಬಲ. ಇಂಥವರೆಲ್ಲಾ ಸೇರಿ ದಲಿತರು, ಅಲ್ಪಸಂಖ್ಯಾತರು ಇತರರ ಆಹಾರ ಹಕ್ಕಿನ ಮೇಲೆ ಚಿಡ್ಡಿ ಪಡೆ ದಾಳಿ ಮಾಡಿದ್ದಾರೆ. ಈ ನೀತಿಗೆದುರಾಗಿ ಬೃಹತ್ ಪ್ರತಿಭಟನೆಯೂ ಬೆಳೆದುಬಂದಿದೆ.

ನೀಡಿದ್ದಾರೆ. ಭೂಮಿ ಬಡವರಿಗೆ ದೊರಕಿಸಿ ಕೊಡಬೇಕೆಂದು ಗಂಗಾವತಿ ತಹಶೀಲು ಕಾರ್ಯಾಲಯದ ಮುಂದೆ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ನಡೆಸಲಾಗುತ್ತಿದೆ. ಈಗ 105 ದಿನದಲ್ಲಿ ಮುಂದುವರಿದಿದೆ. ಸಂಬಂಧಿಸಿದ ತಹಶೀಲ್ದಾರರು ಮತ್ತು ಶಾಸಕರು, ಸಚಿವರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಎಲ್ಲ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲು ಮತ್ತು ಜನತೆಗೆ ಈ ಸರ್ಕಾರದ ಭ್ರಷ್ಟಾಚಾರ, ಅವ್ಯವಹಾರವನ್ನು ತಿಳಿಸಲು ಗಂಗಾವತಿಯ ಸಿಪಿಐ(ಎಂ) ಪಕ್ಷದ ತಾಲ್ಲೂಕು ಸಮಿತಿ ವತಿಯಿಂದ ಜೀಪ್ ಜಾಥಾ ನಡೆಸಿ ತಾಲ್ಲೂಕಿನಲ್ಲಿ ಪ್ರಚಾರ ನಡೆಸಿದೆ. ನವೆಂಬರ್ 10 ರಂದು ಸಿಪಿಐ(ಎಂ) ಸಂಸತ್ ಸದಸ್ಯರಾದ, ಸಂಸದೀಯ ಮುಖಂಡರಾದ ಕಾಂ. ಬಸುದೇವ ಆಚಾರ್ಯರು ಬಹಿರಂಗ ಸಭೆಯಲ್ಲಿಈ ರಾಜ್ಯ ಸರ್ಕಾರದ ದಲಿತ, ಜನವಿರೋಧಿಯನ್ನು ಖಂಡಿಸಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು ಮಾತನಾಡುತ್ತಾ "ಈ ಬಿಜೆಪಿ ಪಕ್ಷದವರಿಗೆ ನರಮೇಧ ನಡೆಸಿ ಜನರನ್ನು ಕೊಲೆ ಮಾಡುವುದು, ಹಲ್ಲೆ ನಡೆಸುವುದು ಒಂದು ಕಾರ್ಯಕ್ರಮವಾಗಿದೆ. ಈ ಹಿಂದೆ ಗುಜರಾತ್, ಒರಿಸ್ಸಾದಲ್ಲಿ ಗಲಭೆ ಸೃಷ್ಟಿಸಿ ಜನರನ್ನು ಜೀವಂತ ಸುಟ್ಟ ಸಂದರ್ಭದಲ್ಲಿ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದು ಎಲ್.ಕೆ. ಅಡ್ವಾಣಿಯವರು ಗೃಹ ಮಂತ್ರಿಯಾಗಿದ್ದರೂ ಸಹಿತ ಯಾವುದೇ ಕ್ರಮ ಜರುಗಿಸಲಿಲ್ಲ. ಹೀಗಾಗಿ ಪರೋಕ್ಷವಾಗಿ ಅಂತಹ ಘಟನೆಗಳಿಗೆ ಬೆಂಬಲ ನೀಡುತ್ತಿರುವುದು ಬಹಿರಂಗವಾಗಿದೆ.

ಅದೇರೀತಿ ಆಹಾರದ ಹಕ್ಕಿನ ಮೇಲೆ ದಾಳಿ ನಡೆಸಿ ಈ ಸಂಘ ಪರಿವಾರದವರು ಅಟ್ಟಹಾಸದಿಂದ ಮೆರೆಯುತ್ತಿದ್ದಾರೆ. ಇವರ ಈ ಜನವಿರೋಧಿ ನೀತಿಯನ್ನು ಜನತೆ 2004 ರ ಮಹಾಚುನಾವಣೆಯಲ್ಲಿ ತಿರಸ್ಕರಿಸಿದೆ. ಇವರು ಈಗ ಪುನಃ ಜನರ ಮುಂದೆ ಮತ ಕೇಳಲಿಕ್ಕೆ ಈ ತರಹದ ಗಲಭೆಗಳನ್ನು ಹುಟ್ಟಿಸಿ ಸಮಾಜದಲ್ಲಿ ಶಾಂತಿ - ಭಂಗವನ್ನು ಮಾಡಿ ಭ್ರಷ್ಟಾಚಾರದ ಮೂಲಕ ಅಧಿಕಾರ ಹಿಡಿಯುವ ಹುನ್ನಾರ ನಡೆಸಿದ್ದಾರೆ. ಇವರ ಅಧಿಕಾರಾವಧಿಯಲ್ಲಿ ಜಾರಿಗೊಳಿಸಿದ ಆರ್ಥಿಕ ನೀತಿಯಿಂದ ಕಾರ್ಖಾನೆಗಳು ಮುಚ್ಚಿ ಹೋಗಿ ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿ ಪಾಲಾಗಿದ್ದಾರೆ. ರೈತರು ಕೃಷಿ ಬಿಕ್ಕಟ್ಟಿನಿಂದ ಸಾಲಬಾಧೆ ಗೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಹೀಗೆ ದೇಶವನ್ನು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿಸಿದ ಪರಿಣಾಮದಿಂದ ದಿನನಿತ್ಯದ ಬಳಕೆಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಹೀಗೆ ದೇಶವನ್ನು ವಿನಾಶದ ಅಂಚಿಗೆ ತಳ್ಳುತ್ತಿರುವ ಬಿಜೆಪಿಗೆ ಮುಂದಿನ ದಿನದಲ್ಲಿ ತಕ್ಕ ಪಾಠ ಕಲಿಸಬೇಕು. ಅದಕ್ಕಾಗಿ ಜನರನ್ನು ಸಂಘಟಿಸಬೇಕೆಂದು ತಿಳಿಸಿದರು. ರಾಜ್ಯದ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ.ನಾಯರ್ ಮಾತನಾಡುತ್ತಾ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಜನತೆಗೆ 2 ರೂ.ಗೆ ಅಕ್ಕಿ ಕೊಡುತ್ತೇನೆಂದು, ಉಚಿತ ವಿದ್ಯುತ್ ಕೊಡುತ್ತೇನೆಂದು ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದಿದೆ. ಮೊದಲು ಅದನ್ನು ಈಡೇರಿಸಲಿ. ಅದನ್ನು ಬಿಟ್ಟು ಜನರನ್ನು ದಾರಿ ತಪ್ಪಿಸಲು ಈ ರೀತಿ ದನದ ಮಾಂಸ ಸೇವಿಸುವವರ ಮೇಲೆ ದಾಳಿ ನಡೆಸಿ ಜನರಿಗೆ ವಂಚನೆ ಮಾಡುತ್ತಿದ್ದಾರೆ. ತನಗೆ ಬೇಕಾದ ಧರ್ಮದಲ್ಲಿರುವ ತನಗೆ ಇಷ್ಟವಾದ ಆಹಾರ ಸೇವಿಸುವ ಹಕ್ಕು ಸಂವಿಧಾನದಲ್ಲಿದೆ. ಈ ಸಂಘ ಪರಿವಾರ ಈ ಸಂವಿಧಾನ ವಿರೋಧಿಯಾಗಿದೆ ಎಂದು ತಿಳಿಸಿದರು. ಇನ್ನೋರ್ವ ಮುಖಂಡರು, ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾಂ.ಮಾರುತಿ ಮಾನ್ಪಡೆಯವರು ಮಾತನಾಡುತ್ತಾ ಈ ಸಂಘ ಪರಿವಾರದವರು ಪೊಲೀಸರನ್ನು ಉಪಯೋಗಿಸಿಕೊಂಡು ಪೊಲೀಸ್ ಠಾಣೆಗಳನ್ನು ತಮ್ಮ ಸಂಘ ಪರಿವಾರದ ಕಾರ್ಯಾಲಯಗಳನ್ನಾಗಿ ಮಾಡಿಕೊಂಡು ಜನತೆಯಲ್ಲಿ ಕೆಲವ ಭ್ರಷ್ಟ ಪೊಲೀಸ್ ಅಧಿಕಾರಿಗಳು ಸಂಘ ಪರಿವಾರದವರ ಬೆಂಬಲಕ್ಕೆ ನಿಂತಿದ್ದಾರೆ. ಇಂತಹ ಅವ್ಯವಹಾರವನ್ನು ಹಿಮ್ಮೆಟ್ಟಿಸಲು ಬಲಿಷ್ಟವಾದ ಹೋರಾಟ ರೂಪಿಸಲಾಗುತ್ತದೆಂದು ತಿಳಿಸಿದರು. ಅದೇ ರೀತಿ ಗೋನಾಳದಲ್ಲಿ ಸರ್ಕಾರಿ ಭೂಮಿ ಒತ್ತುವರಿ ಮಾಡಿದ್ದನ್ನು ಬಿಡಿಸಿಕೊಳ್ಳಲು ಇದೇ ತಿಂಗಳಿನಲ್ಲಿ ಬತ್ತವನ್ನು ಕಟಾವು ಮಾಡಲು ಭೂಮಿಯಲ್ಲಿ ಪ್ರವೇಶಿಸುತ್ತೇವೆ. ಅಮರೇಶಪ್ಪನಿಗೆ ತಕ್ಕಪಾಠವನ್ನು ಕಲಿಸುತ್ತೇವೆ. ಮತ್ತು ಇವರಿಗೆ ಬೆಂಬಲವಾಗಿ ನಿಂತಿರುವ ಶಿವರಾಜ ತಂಗಡಗಿಯವರ ವಿರುದ್ಧ ರಾಜ್ಯಾದ್ಯಂತ ಹೋರಾಟ ರೂಪಿಸುತ್ತೇವೆಂದು ತಿಳಿಸುತ್ತ ಗೋನಾಳ ಸ.ನಂ. 19 ರಲ್ಲಿ ಬೆಳೆ ಕಟಾವು ಮಾಡುತ್ತೇವೆ. ಮುಂದೆ ಅಡ್ಡಿ ಆತಂಕಗಳು ಬಂದರೆ ಮತ್ತು ಏನಾದರೂ ಅಹಿತಕರ ಘಟನೆ ನಡೆದರೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆಂದು ತಿಳಿಸಿದರು. ಅದರಂತೆ ದನದ ಮಾಂಸ ಸೇವಿಸುವ ಜನಸಮುದಾಯ ಮತ್ತು ಜಾನುವಾರು ಪೋಷಕರು, ಮಾರಾಟಗಾರರು, ಕೂಲಿಕಾರರು, ಕಾರ್ಮಿಕರು, ವಿಶೇಷವಾಗಿ ಮಹಿಳೆಯರು ಸುಮಾರು 4000 ಜನರು ಈ ಬಹಿರಂಗ ಸಭೆಯಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿ, ಯುವಜನರು ಉತ್ಸಾಹದಿಂದ ನಗರದಲ್ಲಿ ಪ್ರಚಾರ ನಡೆಸಿ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ಈ ಹೋರಾಟ, ಬಹಿರಂಗ ಸಭೆಯಲ್ಲಿ ಕಾಂ. ಯು.ಬಸವರಾಜ, ಕಾಂ. ಆರ್.ಕೆ.ದೇಸಾಯಿ, ಕಾರ್ಮಿಕ ಮುಖಂಡ ಎ.ಹುಲಗಪ್ಪ, ಜಿ.ನಾಗರಾಜ, ನಿರುಪಾದಿ ಮತ್ತು ಮಹಿಳಾ ಮುಖಂಡರಾದ ಸ್ವರ್ಣಲತಾ, ಭಾರತಿ ಹೀಗೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪುನಃ ದನದ ಮಾಂಸವನ್ನು ಮಾರಾಟ ಮಾಡುವುದನ್ನು ಆರಂಭಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸುವ ನಿರ್ಣಯ ಮತ್ತು ಗೋನಾಳ ಭೂಮಿಯಲ್ಲಿ (ಸರ್ಕಾರಿ) ಭತ್ತ ಕಟಾವು ಮಾಡಲಿಕ್ಕೆ ಹೋಗಬೇಕೆಂಬ ನಿರ್ಣಯವನ್ನು ಅಂಗೀಕರಿಸಲಾಯಿತು. ಮತ್ತು ಉದ್ಯೋಗ ಖಾತ್ರಿ ಯೋಜನೆಯನ್ನು ತಾಲ್ಲೂಕಿನಲ್ಲಿ ಸಮರ್ಪಕ ಜಾರಿಗೆಗೊಳಿಸಲು, ದಲಿತರಿಗೆ ಸೂಕ್ತ ರಕ್ಷಣೆ ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಲಾಯಿತು.

- ಜಿ.ನಾಗರಾಜ್, ಹೆಚ್.ಗಂಗಾಧರ್

...ಆರ್ಥಿಕ ಬಿಕ್ಕಟ್ಟಿನಿಂದ ರಕ್ಷಿಸುವುದು ಹೇಗೆ?

ಪುಟ 11 ರಿಂದ

ಹಣಕಾಸು ವಲಯದಲ್ಲಿ ನಿಯಂತ್ರಣವನ್ನು ಬಲಗೊಳಿಸಬೇಕು. ಹಣಕಾಸು ವ್ಯವಹಾರಗಳ ಮೇಲೆ ಸರಕಾರದ ಹತೋಟಿಯನ್ನು ಮತ್ತೆ ಸ್ಥಾಪಿಸಿ ಅಭಿವೃದ್ಧಿಗೆ ಮತ್ತೆ ಹೆಚ್ಚು ಹಣಕಾಸು ಸಿಗುವಂತೆ ಮಾಡಬೇಕು. ಸಾಲಗಳು ಶ್ರೀಮಂತ ವಿಭಾಗಗಳ ಬಳಕೆ ಮತ್ತು ಆಸ್ತಿಗಳ ಬೆಲೆಗುಳ್ಳೆಗಳನ್ನು ಸೃಷ್ಟಿಸುವತ್ತ ಹರಿಯದೆ ಕೃಷಿ ಮತ್ತು ಸಣ್ಣ ಪ್ರಮಾಣದ ಉದ್ದಿಮೆಗಳಂತಹ ಉದ್ಯೋಗ ಸೃಷ್ಟಿಸುವ ವಲಯಗಳಿಗೆ ಹರಿದು ಬರುವಂತೆ ಮಾಡಬೇಕು.

ಬಂಡವಾಳ ಖಾತೆ ಪರಿವರ್ತನೀಯತೆ: ತಾರಪೋರ್ ಸಮಿತಿಯ ಶಿಫಾರಸುಗಳ ಪ್ರಕಾರ ಈ ವಿಷಯದಲ್ಲಿ ತರುತ್ತಿರುವ ಉದಾರೀಕರಣ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ಬಂಡವಾಳ ಒಳಗೆ ಬರುವ ಮತ್ತು ಹೊರಗೆ ಹೋಗುವ ವಿಧಾನಗಳ ಮೇಲೆ ಕಟ್ಟುನಿಟ್ಟಾದ ಹತೋಟಿಗಳನ್ನು ಮತ್ತೆ ಹಾಕಬೇಕು.

ಜೂಜುಕೋರತನವನ್ನು ತಡೆಯಬೇಕು: ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಭಾರತದ ಹಣಕಾಸು ಮಾರುಕಟ್ಟೆಯಲ್ಲಿ ಹೆಸರು ತಿಳಿಸದ ವ್ಯಕ್ತಿಗಳು, ಸಂಸ್ಥೆಗಳ ಹಣವನ್ನು ತೊಡಗಿಸಲು ಪಾರ್ಟಿಸಿಪೇಟರಿ ನೋಟ್ ಎಂಬ ಸಾಧನವನ್ನು ಬಳಸುತ್ತವೆ. ಇವು ಅಪಾರದರ್ಶಕವಾಗಿದ್ದು ಇವನ್ನು ನಿಷೇಧಿಸಬೇಕು. ಯಾರ ಹಣವೆಂದು ತಿಳಿಸದೆ ಅವನ್ನು ಜೂಜುಕೋರ ಹೆಡ್ಜ್ ಫಂಡ್‌ಗಳು ಮುಂತಾದ ವಂಚಕ ವಿಧಾನಗಳಲ್ಲಿ ಬಳಸುವುದಕ್ಕೆ ಅವಕಾಶ ನೀಡಬಾರದು. ಏಕೆಂದರೆ ಇದು ವಿವೇಕಯುತ ನಿಯಂತ್ರಣಕ್ಕೆ ವ್ಯತಿರಿಕ್ತವಾದದ್ದು.

ಬ್ಯಾಂಕಿಂಗ್ ಮತ್ತು ವಿಮಾ ವಲಯ ಅನಿಯಂತ್ರಣ: ಸರಕಾರ ಬ್ಯಾಂಕಿಂಗ್ ನಿಯಂತ್ರಣ(ತಿದ್ದುಪಡಿ) ಮಸೂದೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(ತಿದ್ದುಪಡಿ) ಮಸೂದೆ, ವಿಮಾವಲಯದಲ್ಲಿ ವಿದೇಶಿ ನೇರ ಹೂಡಿಕೆಯನ್ನು 26ಶೇ.ದಿಂದ 49ಶೇ.ಕ್ಕೆ ಏರಿಸಲು ತರಬೇಕೆಂದಿರುವ ಮಸೂದೆ ಮುಂತಾದವುಗಳ ಮೂಲಕ ಬ್ಯಾಂಕಿಂಗ್ ಮತ್ತು ವಿಮಾ ವಲಯಗಳನ್ನು ಇನ್ನಷ್ಟು ಅನಿಯಂತ್ರಿತಗೊಳಿಸುವ ಪ್ರಯತ್ನಗಳನ್ನು ಕೈಬಿಡಬೇಕು.

ಪೆನ್ಶನ್ ಸುಧಾರಣೆ: ಯುಪಿಎ ಸರಕಾರ ಯೋಜಿಸಿರುವ ಪೆನ್ಶನ್ ಸುಧಾರಣೆಯನ್ನು ಕೈಬಿಡಬೇಕು, ಪೆನ್ಶನ್ ಫಂಡ್ ನಿಯಂತ್ರಣ ಮತ್ತು ಅಭಿವೃದ್ಧಿ ಶಾಸನ(ಪಿಎಫ್‌ಆರ್‌ಡಿಎ)ದ ಮಸೂದೆಯನ್ನು ರದ್ದು ಮಾಡಬೇಕು. ಸರಕಾರಿ ನೌಕರರ ಪೆನ್ಶನ್ ಯೋಜನೆಯನ್ನು ಕನಿಷ್ಟ ಮೊತ್ತದ ಖಾತರಿಯಿರುವಂತೆ ಪುನರ್ರೂಪಿಸಬೇಕು.

ನಿಜ, ಇವೆಲ್ಲಾ ನಮ್ಮ ಆಳುವ ಮಂದಿಗಳ ನವ-ಉದಾರೀಕರಣದ ನಂಬಿಕೆಗಳಿಗೆ ಸಂಪೂರ್ಣ ವ್ಯತಿರಿಕ್ತವಾದ ಕ್ರಮಗಳು. ಆದರೆ ನವ-ಉದಾರೀಕರಣದ ನೀತಿಗಳು ಜಗತ್ತಿನಲ್ಲೆಲ್ಲಾ ವಿಫಲಗೊಂಡಿರುವುದನ್ನು ಅದರ ಪ್ರತಿಪಾದಕರೇ ಒಪ್ಪಿಕೊಂಡು "ಬಂಡವಾಳಶಾಹಿಯನ್ನು ಬಂಡವಾಳಗಾರರಿಂದ ಉಳಿಸಬೇಕು" ಎನ್ನುತ್ತಿರುವಾಗ ಅವು ನಮ್ಮ ಜನಸಾಮಾನ್ಯರ ಬದುಕನ್ನು ಇನ್ನಷ್ಟು ಹಿಂಡಿ-ಹಿಪ್ಪೆ ಮಾಡಲು ಬಿಡಬೇಕೇ? ಅಥವ ಅದನ್ನು ತಡೆಯುವ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಬೇಕೇ ಎಂಬುದು ದೇಶದ ಪ್ರಗತಿಶೀಲ ಪ್ರಜಾಪ್ರಭುತ್ವವಾದಿಗಳ ಮುಂದಿರುವ ಪ್ರಶ್ನೆ.

ಯಶಸ್ವಿಗೊಂಡ ಕೃಷಿಕೂಲಿಕಾರರ ಸಮ್ಮೇಳನ
ಸಂಘಟನೆ ಮತ್ತು ಚಳುವಳಿಯ ವಿಸ್ತರಣೆಗೆ ನಿರ್ಧಾರ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 4ನೇ ರಾಜ್ಯ ಸಮ್ಮೇಳನವು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ಇದೇ ನವೆಂಬರ್ 2 ರಿಂದ 4 ರವರೆಗೆ ಯಶಸ್ವಿಯಾಗಿ ಜರುಗಿತು.

ಸಮ್ಮೇಳನವು ಕೃಷಿಕೂಲಿಕಾರರ ಬೃಹತ್ ರ್‍ಯಾಲಿ ಹಾಗೂ ಬಹಿರಂಗ ಸಭೆಯೊಂದಿಗೆ ನವೆಂಬರ್ 2 ರಂದು ಆರಂಭವಾಯಿತು. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿಗಳೂ, ಲೋಕಸಭಾ ಸದಸ್ಯರೂಆಗಿರುವ ಸಂಗಾತಿ ಎ.ವಿಜಯರಾಘವನ್ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಬಾಗೇಪಲ್ಲಿಯ ಮಾಜಿ ಸಿಪಿಐ(ಎಂ) ಶಾಸಕರೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಥಮ ಪ್ರಧಾನ ಕಾರ್ಯದರ್ಶಿಗಳೂ ಆಗಿದ್ದ ಸಂಗಾತಿ ಜಿ.ವಿ.ಶ್ರೀರಾಮರೆಡ್ಡಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಮತ್ತು ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಸಂಗಾತಿ ಚಂದ್ರಪ್ಪ ಹೊಸ್ಕೇರಾ ಅವರು ಭಾಗವಹಿಸಿ ಮಾತನಾಡಿದರು. ಸಂಗಾತಿ ನಿತ್ಯಾನಂದ ಸ್ವಾಮಿ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಂಜೆ 4 ಗಂಟೆಗೆ ಧ್ವಜಾರೋಹಣದೊಂದಿಗೆ ಸಮ್ಮೇಳನದ ಕಲಾಪಗಳು ಆರಂಭಗೊಂಡವು. ಸಂಘದ ಅಧ್ಯಕ್ಷರಾದ ಸಂಗಾತಿ ನಿತ್ಯಾನಂದಸ್ವಾಮಿ. ಧ್ವಜಾರೋಹಣ ಮಾಡಿದರು, ಹುತಾತ್ಮರ ಸ್ತಂಭಕ್ಕೆ ಗೌರವ ಸಲ್ಲಿಸಲಾಯಿತು.

ಸಂಜೆ 5 ಗಂಟೆಗೆ ಆರಂಭವಾದ ಪ್ರತಿನಿಧಿಗಳ ಅಧಿವೇಶನವನ್ನು ಸಂಗಾತಿ ಎ.ವಿಜಯರಾಘವನ್ ಅವರು ಉದ್ಘಾಟಿಸಿ ಮಾತನಾಡಿದರು. ದೇಶದ ಪ್ರಸಕ್ತ ರಾಜಕೀಯ ಬೆಳವಣಿಗೆಗಳನ್ನು ವಿಶ್ಲೇಷಿಸಿದ ಅವರು ದೇಶದ ಕೃಷಿ ಕೂಲಿಕಾರರ ಬದುಕಿನ ಬವಣೆಗಳನ್ನು ವಿವರಿಸಿದರು. ಸಮಸ್ಯೆಗಳನ್ನು ಎದುರಿಸಿ ಇತ್ಯರ್ಥಪಡಿಸಲು ಬಲವಾದ ಸಂಘಟನೆಯ ಅವಶ್ಯಕತೆ ಇದೆ ಎಂದು ಮನವರಿಕೆ ಮಾಡಿದರು. ಆರಂಭದಲ್ಲಿ ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಮ್ಮೇಳನದ ಪ್ರತಿನಿಧಿಗಳ ಚರ್ಚೆಗಾಗಿ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಅವರು ಕರಡು ವರದಿಯನ್ನು ಮಂಡಿಸಿದರು.

ಇದಕ್ಕೂ ಮೊದಲು ಸಂಗಾತಿ ಪುಟ್ಟಮಾದು ಸಂಚಾಲಕತ್ವದಲ್ಲಿ ನಿರ್ಣಯಗಳ ಸಮಿತಿಯನ್ನು ಸಂಗಾತಿ ಕರಿಯಪ್ಪ ಅಚ್ಚೊಳ್ಳಿ ಸಂಚಾಲಕತ್ವದ ಪರಿಚಯ ಪತ್ರ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯು ಸಮ್ಮೇಳನದ ಕಲಾಪಗಳನ್ನು ನಡೆಸಿತು. ಸಂಗಾತಿಗಳಾದ ಕೆ.ಸಿ.ಬೋರೇಗೌಡ ಮತ್ತು ಕೆ.ಬಸವರಾಜ ಅವರು ಸಮ್ಮೇಳನದ ಕಲಾಪಗಳನ್ನು ದಾಖಲೆ ಮಾಡಿದರು.

ಮರುದಿನ (ನವೆಂಬರ್ 3) ಕರಡು ವರದಿಯ ಮೇಲೆ ನಡೆದ ಚರ್ಚೆಯಲ್ಲಿ 47 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಚರ್ಚೆಯನ್ನು ಆಲಿಸಿದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸಂಗಾತಿ ವಿಜಯ ರಾಘವನ್ ಅವರು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾ ಕರ್ನಾಟಕದಲ್ಲಿ ನಮ್ಮ ಸಂಘಟನೆ ಬೆಳೆಯುತ್ತಿದೆ. ಆದರೆ ಬೆಳೆಯಲು ಇರುವ ಅವಕಾಶಗಳನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಲಾಗಿಲ್ಲ. ಸಂಘಟನೆಯ ಬೆಳವಣಿಗೆ, ಸದಸ್ಯತ್ವದ ನೊಂದಾವಣಿ ವಿಷಯದಲ್ಲಿ ನಿರಂತರತೆಯ ಕೊರತೆ ಇದೆ. ಸಂಘಟನೆಯನ್ನು ವಿಸ್ತರಿಸಿ ಬಲಪಡಿಸಲು ನೀಡಲಾದ ಗಮನ, ಗಂಭೀರತೆ ಸಾಲದು ಎಂದು ಹೇಳಿದರು. ಆಯ್ಕೆಯಾಗುವ ಹೊಸ ರಾಜ್ಯ ಸಮಿತಿ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಕಿವಿಮಾತು ಹೇಳಿದರು.

ಮೂರನೇ ದಿನ ಕರಡು ವರದಿಯ ಮೇಲಿನ ಚರ್ಚೆಗೆ ರಾಜ್ಯ ಸಮಿತಿಯ ಪರವಾಗಿ ಸಂಗಾತಿ ಚಂದ್ರಪ್ಪ ಹೊಸ್ಕೇರಾ ಉತ್ತರ ನೀಡಿದರು. ಸಮ್ಮೇಳನವು ಪ್ರಮುಖ ನಿರ್ಣಯಗಳನ್ನು ಅಂಗೀರಿಸಿತು.

ನೂತನ ಪದಾಧಿಕಾರಿಗಳು ಮತ್ತು ರಾಜ್ಯ ಸಮಿತಿ ಆಯ್ಕೆ

4ನೇ ರಾಜ್ಯ ಸಮ್ಮೇಳನವು ಈ ಕೆಳಗಿನಂತೆ 12 ಜನ ಪದಾಧಿಕಾರಿಗಳನ್ನು ಮತ್ತು 24 ಜನ ರಾಜ್ಯ ಸಮಿತಿ ಸದಸ್ಯರನ್ನು ಆಯ್ಕೆ ಮಾಡಿತು.

ಅಧ್ಯಕ್ಷರು : ನಿತ್ಯಾನಂದಸ್ವಾಮಿ

ಪ್ರಧಾನ ಕಾರ್ಯದರ್ಶಿ:ಚಂದ್ರಪ್ಪ ಹೊಸ್ಕೇರಾ

ಉಪಾಧ್ಯಕ್ಷರು: ಜಿ.ಎನ್.ನಾಗರಾಜ್, ಪುಟ್ಟಮಾದು (ಮಂಡ್ಯ), ಭೀಮಶೆಟ್ಟಿ ಯಂಪಳ್ಳಿ (ಗುಲ್ಬರ್ಗಾ), ಕರಿಯಪ್ಪ ಅಚ್ಚೊಳ್ಳಿ (ರಾಯಚೂರು) ಗಂಗಾಧರಸ್ವಾಮಿ (ಕೊಪ್ಪಳ)

ಸಹ ಕಾರ್ಯದರ್ಶಿಗಳು: ಕೆ.ನಾಗರಾಜ (ಬಾಗೇಪಲ್ಲಿ), ದೌವಲ್ ಸಾಬ್ ನಧಾಫ್ (ಶಹಾಪುರ), ತಿಪ್ಪಯ್ಯ ನಾಯಕ್ (ದೇವದುರ್ಗ), ಮಲ್ಲಮ್ಮ(ಚಿಂಚೊಳ್ಳಿ), ಪುಟ್ಟಮಾದೇಗೌಡ (ಮಳವಳ್ಳಿ)

ರಾಮಾಜೋಯಿಸರ ಗೋಲ್ವಾಲ್ಕರ್ ಪ್ರವಚನ

ಪುಟ 3 ರಿಂದ

ವರ್ತಿಸುವ ಹಾಗೆಯೇ ವರ್ತಿಸಬೇಕು. ಇದಕ್ಕೆ 'ಜರ್ಮನಿಯ ಹಿಟ್ಲರ್‌ನ ಮಾದರಿಯೇ ಅನುಕರಣೀಯ, ಆದರ್ಶ ಎನ್ನುತ್ತಾರೆ ಗುರು ಗೋಲ್ವಾಲ್ಕರ್. ಇಂತಹ ಅನಾಗರೀಕ ಚಿಂತನೆ, ಫ್ಯಾಸಿಸ್ಟ್ ವಾದಗಳಿಂದ ರಾಮಾ ಜೋಯಿಸರ ಚಿಂತನೆಗಳು ಹೇಗೆ ಭಿನ್ನ, ಭಿನ್ನತೆಯ ಬದಲು ಅವುಗಳ ಪ್ರತಿಪಾದನೆಯೇ ಆಗಿದೆ.

ಪರಿವಾರದ ಪ್ರಯತ್ನಗಳು

ಭಾರತದ ಸಂವಿಧಾನಕ್ಕೆ, ಜಾತ್ಯಾತೀತತೆ, ಪ್ರಜಾಪ್ರಭುತ್ವಕ್ಕೆ ಮಾರಕವಾದ, ಸಮಾನತೆಯ ಕಡು ದ್ವೇಷಿಯಾಗಿರುವಂತಹವೂ, ಬರ್ಬರ. ಆದ್ದರಿಂದಲೇ ಜನಾಂಗದ್ವೇಷದ 'ಹಿಂದೂ ರಾಷ್ಟ್ರ'ದ ಕಲ್ಪನೆಗೆ ವಿರುದ್ಧವಾಗಿರುವ, ಎಲ್ಲಾ ಜನಾಂಗಗಳು, ಭಾಷಿಕರನ್ನು ಸಮಾನವಾಗಿ ಕಾಣಬೇಕೆಂಬ ಸೆಕ್ಯುಲರಿಸಂ, ಪ್ರಜಾಪ್ರಭುತ್ವ - ಇದನ್ನು ಪ್ರತಿಪಾದಿಸಿದ ಭಾರತದ ಸಂವಿಧಾನವನ್ನು ಕಂಡರೆ ಕೆಂಡಮಂಡಲವಾಗುತ್ತದೆ ಈ ಪರಿವಾರ. ಸಂವಿಧಾನದ ಸ್ಥಾನದಲ್ಲಿ 'ಮನುಸ್ಮೃತಿ'ಯಂತಹ ಅನಾಗರೀಕ ಸಂಹಿತೆಯನ್ನೇ ಸಂವಿಧಾನವನ್ನಾಗಿಸ ಬೇಕೆಂಬುದು ಇದೇ ಪರಿವಾರದ ಪ್ರಯತ್ನಗಳು.

ಆಯಕಟ್ಟಿನ ಜಾಗದಲ್ಲಿ

ಹಾಗಾದರೆ ಇಂತಹ ಪ್ರಜಾಪ್ರಭುತ್ವ ದ್ವೇಷಿ ವಾದಗಳನ್ನು ಒಡಲಲ್ಲಿ ಇಟ್ಟುಕೊಂಡು ಹಲವಾರು ದಶಕಗಳ ಕಾಲ ನ್ಯಾಯವಾದಿಯಾಗಿ, ನ್ಯಾಯಮೂರ್ತಿಯಾಗಿ, ಮುಖ್ಯ ನ್ಯಾಯಮೂರ್ತಿಯೂ, ಸಂವಿಧಾನ ರಕ್ಷಣೆಯ ಹೊಣೆ ಇದ್ದ ರಾಜ್ಯಪಾಲರೂ ಆಗಿ ರಾಮಜೋಯಿಸರು ಕೆಲಸ ಮಾಡಿದ್ದಾದರೂ ಹೇಗೆ? ಮಾಡಿದ್ದು ಏನು? ಅತ್ಯಂತ ಸಂವಿಧಾನಾತ್ಮಕ ಹೊಣೆ ನಿಭಾಯಿಸಿದ ಜೋಯಿಸರ ಪಾತ್ರ ಎಂತಹದಿದ್ದೀತು? ಇದು ಒಬ್ಬರ ಕಥೆಯಲ್ಲ, ಇಂತಹ ಹಲವರು ಇಂದು ಆಯಕಟ್ಟಿನ ಜಾಗಗಳಲ್ಲಿ ಕುಳಿತು, ತಮ್ಮ ಹುಕುಂ ಚಲಾಯಿಸುತ್ತಿದ್ದಾರೆ. ಅಂದರೆ ದೇಶದ ಭವಿಷ್ಯವೇನು?

ಭಾರತ ದೇಶದ ಹಾಲಿ ಸಂವಿಧಾನವನ್ನು, ಕೊಡಮಾಡಿರುವ ಪ್ರಜಾಪ್ರಭುತ್ವದ ಹಕ್ಕುಗಳು, ಅವಕಾಶಗಳನ್ನು ಬಳಸಿ ಬೆಳೆಯುವುದೇ ಹಿಂದುತ್ವದ ಫ್ಯಾಸಿಸ್ಟ್ ನ ತಂತ್ರ, ಅವರು ಬಲಗೊಂಡ ಬಳಿಕ ಬೇರೆಯಾರಿಗೂ ಇವು ಸಿಗದಂತೆ ನಾಶಗೊಳಿಸುವುದೇ ಅದರ ಅಜೆಂಡಾ.

ಜೋಯಿಸರು ಸಂಘ ಪರಿವಾರದ ವಾದಗಳನ್ನೇ ಅಂತಿಮ ಸತ್ಯ ಎಂದು ಹೇಳುವ ಮೊದಲು ಭಾರತದ ಸಂವಿಧಾನವನ್ನು ಮತ್ತೆ ಓದಲಿ, ಮತಧರ್ಮ ಎಂಬುದು ವೈಯಕ್ತಿಕ, ಅದು ಸಾರ್ವಜನಿಕ ಅಲ್ಲ. ಮತದರ್ಮಕ್ಕೂ ಪ್ರಭುತ್ವಕ್ಕೂ (ಸರ್ಕಾರ) ಯಾವುದೇ ಸಂಬಂಧ, ಗುರುತಿಸಿಕೊಳ್ಳುವಿಕೆ ಇರಬಾರದು. ಧರ್ಮವನ್ನು ರಾಜಕೀಯದಿಂದ ದೂರವೇ ಇಡಬೇಕು, ಬೆರೆಸಬಾರದು ಎಂದು, ಸೆಕ್ಯುಲರಿಸಂ ಎಂದರೇನು ಎಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪನ್ನು ನ್ಯಾಯಮೂರ್ತಿ ಎಂದು ಕರೆದುಕೊಳ್ಳುವ ಅವರು ಯಾಕೆ ತಿರಸ್ಕರಿಸುತ್ತಾರೆ ರಾಮಾಜೋಯಿಸರಂತಹ ಪೆಕ್ಯುಲರ್ (ವಿಚಿತ್ರ) ಸೂಡೋ ಸೆಕ್ಯುಲರಿಸ್ಟ್ (ಖೋಟಾ ಜಾತ್ಯಾತೀತರು) ಸಂತತಿ ತಮ್ಮ ಕಬಂಧ ಬಾಹುಗಳನ್ನು ವಿಸ್ತರಿಸುತ್ತಿರುವುದನ್ನು ಇಲ್ಲಿ ಎಚ್ಚರದಿಂದ ಗಮನಿಸಬೇಕು. ಸಂಘ ಪರಿವಾರವು ಸರ್ಕಾರದ ಅಧಿಕಾರವನ್ನು ಹೇಗೆಲ್ಲಾ ಬಳಸುತ್ತಿದೆ ಎಂಬುದರ ಬಗ್ಗೆ ಎಚ್ಚರ ಅಗತ್ಯ.

ಇವರು ಮಾಡಿದ್ದೇ ಕಾನೂನು!

ಮುಖ್ಯಮಂತ್ರಿಯಾಗಿ ಆರು ತಿಂಗಳು ಕಳೆದರೂ ಇನ್ನೂ ಯಡಿಯೂರಪ್ಪನವರು ಗುಡಿ-ಗುಂಡಾರ,ಮಠ, ಮಾನ್ಯ ಸುತ್ತುವುದನ್ನು ಬಿಟ್ಟಿಲ್ಲ. ಹೀಗಾಗಿ ಪಕ್ಕದ ಮಾಗಡಿಯಲ್ಲಿ ದಲಿತ ಮಹಿಳೆ ಬಲಿಯಾಗಿದ್ದರೂ ಭೇಟಿಗೆ ಸಮಯವಿಲ್ಲ. ಮುಖ್ಯಮಂತ್ರಿಯಾಗುವಲ್ಲಿ ಶಾಸಕರ ಬೆಂಬಲವಿದೆ ಎಂಬುದಕ್ಕಿಂತ ದೈವದ ಬಲವಿದೆ ಎಂದು ತೋರಿಸಿಕೊಂಡರೆ ತಮ್ಮ ಹೊಣೆಗೇಡಿತನಕ್ಕೆ ಊರುಗೋಲು ಸಿಕ್ಕಂತೆ ಎಂದು ಅವರು ಭಾವಿಸಿರಬಹುದು. ಈ ಮೂಲಕ ಮುಖ್ಯಮಂತ್ರಿಯಾದಿಯಾಗಿ ಬಿಜೆಪಿ ಸಂಪುಟ - ಶಾಸಕರು ವಾಸ್ತು, ಯಜ್ಞಗಳಂತಹ ಅಂಧಶ್ರದ್ಧೆಯನ್ನು ವಿಧಾನಸೌಧದಿಂದಲೇ ಪ್ರಸಾರಿಸತೊಡಗಿದ್ದಾರೆ. ಇಂತಹ ಮುಖ್ಯಮಂತ್ರಿಗಳು ತಾವು ಕೋರಿದ್ದ ಹರಕೆ ತೀರಿಸಲು ಕೇರಳದ ದೇವಾಲಯವೊಂದಕ್ಕೆ ಆನೆಯೊಂದನ್ನು ಉಡುಗೊರೆ ನೀಡಿ ಹರಕೆ ತೀರಿಸಿಕೊಂಡಿದ್ದಾರೆ. ಆದರೆ ಇದು ಕಾನೂನುಬಾಹಿರ. ಇಂತಹ ಆನೆ ಕೊಡುವುದನ್ನು ಅರಣ್ಯ ಕಾಯ್ದೆ ನಿರ್ಬಂಧಿಸಿದೆ. ಕೊಡಬೇಕಾದರೂ ಆನೆಯ ಮಾಲಿಕ ಅದನ್ನು ಸಾಕಲು ಅಸಮರ್ಥನಾಗಿ ಅದನ್ನು ದಾನ ಅಥವಾ ಸಾಕಲು ಕೊಡಬಹುದು. ಅಂತಹ ಯಾವ ಸಕಾರಣಗಳು ಇಲ್ಲಿ ಇಲ್ಲ. ಹಿಂದೆ ಜಯಲಲಿತ ಹೀಗೆ ದೇವಸ್ಥಾನಕ್ಕೆ ಆನೆ ನೀಡಿದಾಗ ಇದಕ್ಕೆ ವಿರೋಧ ವ್ಯಕ್ತವಾಗಿತ್ತು. ಈ ವಿಷಯ ಮುಖ್ಯಮಂತ್ರಿಗಳಿಗೆ ತಿಳಿದಿರಲ್ಲಿವೇ? ತಿಳಿದಿದ್ದರೂ ಅದನ್ನು ಕೇರ್ ಮಾಡುವ ಜಾಯಮಾನ ತಮ್ಮದಲ್ಲ ಎಂದು ಅವರೂ ಭಾವಿಸಿದಂತಿದೆ.

ರಾಜ್ಯದಲ್ಲಿ ಅವರು ಯಾವ ಕಾನೂನು ಪಾಲಿಸಬೇಕಿಲ್ಲ. ಕಾನೂನು ಇರುವುದು ವಿರೋಧಿಗಳ ಮೇಲೆ ಪ್ರಯೋಗಿಸಲಿಕ್ಕೆ, ಕೋಮು ಧಾಳಿ ನಡೆದರೂ, ಶಾಸಕನೊಬ್ಬ ಪತ್ನಿಯ ಸಾವಿನಲ್ಲಿ (ಕೊಲೆಯಲ್ಲಿ) ಪ್ರಧಾನ ಪಾತ್ರ ವಹಿಸಿದರೂ, ಪೊಲೀಸರು ಕ್ರಮವಹಿಸದೇ ಬೆಂಬಲಿಸುವುದೇ ಕಾನೂನು ಪಾಲನೆ ಎಂದು ಮುಖ್ಯಮಂತ್ರಿ ಭಾವಿಸಿದ್ದಾರೆ. ಚರ್ಚ್‌ಗಳ ಮೇಲಿನ ಧಾಳಿಗೆ, ಆಡಳಿತ ಯಂತ್ರವನ್ನು ಮನಸಾರೆ ಬಳಸಿದ್ದಾರೆ. ಹೀಗೆ ತಾವು ಇರುವುದೇ ಕಾನೂನು ದುರ್ಬಳಕೆ ಮಾಡಲು, ಮಾಡಿದ್ದೇ ಕಾನೂನು ಎಂಬ ಧಾರ್ಷ್ಟ್ಯತನಕ್ಕೆ ಆನೆ ಕೇಸ್ ಒಂದಿಷ್ಟು ಬ್ರೇಕ್ ಹಾಕಬಹುದೇ? ಇಂತಹ ಕಾನೂನುಬಾಹಿರ ಕೃತ್ಯ ಎಸಗುವುದರ ಮೂಲಕ ಮುಖ್ಯಮಂತ್ರಿ ಕಾನೂನು ಪಾಲಿಸದೇ ರಾಜ್ಯಕ್ಕೆ ಕುಖ್ಯಾತಿ ತಂದಿದ್ದಾರೆ.

.....ಐಕ್ಯ ಚಳುವಳಿಯೇ ಉತ್ತರ

ಟಿ 5 ರಿಂದ

ಮಾಣದಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರ ಡಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ ಸ್ತವ ಸಂಗತಿ ಬೇರೆಯೇ ಆಗಿವೆ. 1971 ರಿಂದ 001 ರ ಅವಧಿಯಲ್ಲಿ ಜರುಗಿಸಲಾದ ನಗಣತಿಯ ಅಂಕಿ ಸಂಖ್ಯೆಗಳ ಪ್ರಕಾರ ಕ್ರೈಸ್ತ ರ್ಮಿಯರ ಸಂಖ್ಯೆಯಲ್ಲಿ ಶೇ.0.2 ಇಳಿಕೆ ಕಂಡು ಂದಿದೆ. ಹಾಗಾದರೆ ಮತಾಂತರ ಗುತ್ತಿರುವುದೆಲ್ಲಿ? ಎನ್ನುವ ಪ್ರಶ್ನೆಯನ್ನು ಕಾಂ: ರಟ್ ಒಡ್ಡಿದರು. ಒಂದು ಚಿಕ್ಕ ಅಸಹಾಯಕರ ಲ್ಪಸಂಖ್ಯಾತ ಸಮುದಾಯವನ್ನು ದ್ವೇಷ ಪೂರ್ಣ ಚಾರದ ಗುರಿಯಾಗಿಸುವ ಮೂಲಕ ಕೋಮು ವೀಕರಣಗೊಳಿಸಲಾಗುತ್ತಿದೆ. ಆರೆಸ್ಸೆಸ್ ಹಾಗೂ ದರ ಪರಿವಾರಗಳು ಮತ ಬ್ಯಾಂಕ್ ಸೃಷ್ಟಿಸಲು ಲ್ಪಸಂಖ್ಯಾತರ ತುಷ್ಟಿಕರಣ ಮಾಡಲಾಗುತ್ತಿದೆ ಂದು ಪ್ರಚಾರ ಮಾಡುತ್ತಿವೆ. ಆದರೆ ಸಾಚಾರ್ ಮಿತಿಯ ವರದಿಯು ಸಾಮಾಜಿಕ-ಆರ್ಥಿಕ ಸೂಚ್ಯಾಂಕದಲ್ಲಿ ಅಲ್ಪಸಂಖ್ಯಾತರು ತೀರ ಕೆಳಗಿರುವ ವಾಸ್ತವವನ್ನು ದೃಷ್ಟಾಂತಗೊಳಿಸುತ್ತಿದೆ. ಜಾತ್ಯಾತೀತ ಭಾರತವನ್ನು ಅಸ್ಥಿರಗೊಳಿಸಿ 'ಹಿಂದೂ ರಾಷ್ಟ್ರ' ಕಟ್ಟುವ ರೆಸ್ಸೆಸ್ ಹುನ್ನಾರವನ್ನು ವಿರೋಧಿಸುವುದು ಇಂದಿನ ಅವಶ್ಯಕತೆಯಾಗಿದೆ.


'ಪೂರ್ವಾಪರ ವಿಚಾರಿಸದೆ ಜೈಲಿಗೆ'

'ಭಯೋತ್ಪಾದನೆಯ ಭೀಕರತೆ'

ಇನ್ನೊಂದು ಹೊಸ ಸಮಸ್ಯೆ ಮುರಾಗಿರುವುದು ಭಯೋತ್ಪಾದನೆಯದು. ಯಾವ ನಗರ, ಯಾವ ಪ್ರದೇಶದಲ್ಲಿ ಭಯೋತ್ಪಾದಕರ ದಾಳಿಯಿಂದ ಮುಕ್ತವಾಗಿಲ್ಲ. ಕೋಮುವಾದ ಹಾಗೂ ಭಯೋತ್ಪಾದನೆ ವಡೂ ಅಂತರ್ ಸಂಬಂಧವನ್ನು ಹೊಂದಿವೆ ನ್ನುವುದನ್ನು ಮರೆಯಬಾರದು ಎಂದು ಕಾಂ:ಕಾರಟ್ ಹೇಳಿದರು. ಭಯೋತ್ಪಾದನೆ ನ್ನುವುದು ಮುಗ್ಧ ಜನರ ಮಾರಣಹೋಮ. ಇದು ಮ್ಮ ದೇಶಕ್ಕೆ ತೀವ್ರ ಅಪಾಯವನ್ನು ತಂದೊಡ್ಡಿದೆ. ತ್ತೀಚಿನ ದಿನಗಳಲ್ಲಿ ನೂರಾರು ಜನ ಯೋತ್ಪಾದಕ ದಾಳಿಗಳಲ್ಲಿ ಹತರಾಗಿದ್ದಾರೆ. ಯಾವ ಕ್ಷಕ್ಕೂ ಸೇರದ, ಸಿದ್ಧಾಂತಕ್ಕೆ ಒಳಪಡದ ತೀರ ಮಾನ್ಯ ಜನ ಭಯೋತ್ಪಾದಕ ದಾಳಿಯ ರಿಯಾಗುತ್ತಿದ್ದಾರೆ. ಹಿಂದುತ್ವವನ್ನು ಪ್ರತಿಪಾದಿಸುವ ಗಳು ಭಯೋತ್ಪಾದನೆಯನ್ನು ವ್ಯಾಖ್ಯಾನಿಸುವುದೇ ಸ್ಲಾಂ ಭಯೋತ್ಪಾದನೆ' ಎಂದು. ಅವರು ಇಡೀ ಸ್ಲಾಂ ಸಮುದಾಯವನ್ನೇ ಗುರಿ ಮಾಡುತ್ತಾರೆ. ರ್ಕಾರಗಳು ಕೂಡ ಯಾವುದೇ ಪೂರ್ವಾಪರ ಚಾರಿಸದೆ ನೂರಾರು ಜನ ಮುಸ್ಲಿಂರನ್ನು ಜೈಲಿಗೆ ಡುತ್ತಾರೆ. ಈ ಸಮುದಾಯದ ಕೆಲ ಯುವಕರು ಯಾವುದೇ ನ್ಯಾಯ ಸಿಗುತ್ತದೆ ಎನ್ನುವ ನಂಬಿಕೆಯನ್ನು ದುಕೊಳ್ಳುತ್ತಿದ್ದಾರೆ. 1993 ರಲ್ಲಿ ಮುಂಬೈ ಹಾನಗರದಲ್ಲಿ ಕೋಮು ಗಲಭೆಗಳಲ್ಲಿ ಗಿಯಾದವರನ್ನು ಇಂದಿಗೂ ಬಂಧಿಸಿಲ್ಲ, ಶ್ರೀ ಕೃಷ್ಣ ಆಯೋಗ ಹೆಸರಿಸಿದ ಯಾವ ಅಪರಾಧಿಯನ್ನು ಬಂಧಿಸಿಲ್ಲ, ಗುಜರಾತ್ ಗಲಭೆಗಳಲ್ಲಿ ನೊಂದ ವರಿಗೆ ನ್ಯಾಯ ಸಿಕ್ಕಿಲ್ಲ. ಇವೆಲ್ಲವೂ ಭಯೋತ್ಪಾದನೆಯ ಬೆಳವಣಿಗೆಗೆ ಕಾರಣಗಳೆಂದು ಗುರುತಿಸಬಹುದು. ಯಾವುದೇ ಭಯೋತ್ಪಾದನೆಯನ್ನು ಸಮರ್ಥಿಸುವುದು ಸಾಧ್ಯವಿಲ್ಲ. ಆದರೆ ಸಮಸ್ಯೆ ಇಲ್ಲಿಗೆ ಪರಿಹಾರವಾಗುವುದೂ ಇಲ್ಲ. ಅಲ್ಪಸಂಖ್ಯಾತ ಕೋಮುವಾದಕ್ಕೆ ಬಹುಸಂಖ್ಯಾತ ಕೋಮುವಾದವೇ ಪ್ರತಿಕ್ರಿಯೆ ಎನ್ನುವುದನ್ನು ಒಪ್ಪಲು ಸಾಧ್ಯವಿಲ್ಲ. ಕೋಮುವಾದ ಹಾಗೂ ಭಯೋತ್ಪಾದನೆಯನ್ನು ಎದುರಿಸುವ ಅವಶ್ಯಕತೆ ಇಂದು ನಮ್ಮ ಮುಂದಿದೆ ಎಂದು ಕಾಂ:ಕಾರಟ್ ಜ್ಞಾಪಿಸಿದರು.

'ಬಹುಸಂಖ್ಯಾತರ ಬಗೆಗೆ ಭಯ'

ಅಲ್ಪಸಂಖ್ಯಾತರನ್ನು ಹತ್ಯೆಗೈಯುವ, ಮಹಿಳೆಯರ ಮಾನಭಂಗ ಮಾಡಲು ಹೇಸದ ಭಜರಂಗದಳದ ಕ್ರಿಯೆಯೂ ಸಾಮೂಹಿಕ ಭಯೋತ್ಪಾದನೆ ಎಂದು ಕಾಂ:ಕಾರಟ್ ಹೇಳಿದರು. ಕೇಂದ್ರದಲ್ಲಿ ಒಂದು ಜಾತ್ಯಾತೀತ ಸರ್ಕಾರವಿದೆ. ಆದರೆ ಇಂತಹ ಸಂಘಟನೆಗಳನ್ನು ನಿರ್ಬಂಧಿಸುವ, ಕಾನೂನು ಬಾಹಿರ ಎಂದು ಘೋಷಿಸುವ ತೀರ್ಮಾನವನ್ನು ಕೈಗೊಳ್ಳುವಲ್ಲಿ ಅದು ವಿಫಲವಾಗಿದೆ ಎಂಬುದು ದುರದೃಷ್ಟಕರ. 'ಸಿಮಿ'ಯನ್ನು ಈಗಾಗಲೇ ಕಾನೂನುಬಾಹಿರ ಸಂಘಟನೆ ಎಂದು ಘೋಷಿಸಲಾಗಿದೆ. ಕಂದಮಾಲ್ ಘಟನೆಗಳ ನಂತರ



ಹಲವು ರಂಗಗಳ ಗಣ್ಯರು ಇಲ್ಲಿ

ನಮ್ಮ ಪಕ್ಷವು ಭಜರಂಗದಳವನ್ನು ನಿಷೇಧಿಸುವಂತೆ ಒತ್ತಾಯಿಸಿತು. ಯುಪಿಎ ಒಕ್ಕೂಟದ ಇನ್ನಿತರ ಪಕ್ಷಗಳೂ ಇದನ್ನೆಲ್ಲಾ ಆಗ್ರಹಿಸಿದವು. ಆದರೆ ಸರ್ಕಾರವು ಬಹುಸಂಖ್ಯಾತರಿಗೆ ಅಪ್ರಿಯವಾಗಬಹುದೆಂದು ಹೆದರಿ ತಮ್ಮ ಸಂಕುಚಿತ ಲಾಭಕ್ಕಾಗಿ ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ. ಗಲಭೆಕೋರ ಶಕ್ತಿಗಳನ್ನು ಹತ್ತಿಕ್ಕುವಲ್ಲಿ ಸರ್ಕಾರವು ಹಿಂಜರಿಯಬಾರದು.

ಅಲ್ಲಿ ಗಲಭೆಗಳಿಲ್ಲ

ಕಳೆದ ಮೂರು ದಶಕಗಳಿಂದಲೂ ಪಶ್ಚಿಮ ಬಂಗಾಲದಲ್ಲಿ ಅಧಿಕಾರದಲ್ಲಿರುವ ಎಡರಂಗ ಸರ್ಕಾರದ ಅವಧಿಯಲ್ಲಿ ಒಂದು ದೊಡ್ಡ ಮಟ್ಟದ ಕೋಮುಗಲಭೆಗಳಾದ ಸಂದರ್ಭಗಳಿಲ್ಲ ಎಂದು ಕಾ: ಕಾರಟ್ ಹೆಮ್ಮೆಯಿಂದ ಹೇಳಿದರು. ಪಶ್ಚಿಮಬಂಗಾಲದ ಒಟ್ಟು ಜನಸಂಖ್ಯೆಯಲ್ಲಿ ಶೇ.26 ರಷ್ಟು ಮುಸ್ಲಿಮರಿದ್ದಾರೆ. ದೇಶ ವಿಭಜನೆಯ ಕರಾಳ ಘಟನೆಗಳನ್ನು ಬಂಗಾಳ ದಾಖಲಿಸಿದೆ. ಆ ಸಂದರ್ಭದಲ್ಲಾದ ಕೋಮುಗಲಭೆಗಳಲ್ಲಿ ಸಾವಿರಾರು ಜನ ಪ್ರಾಣ ಕಳೆದುಕೊಂಡರು. ಹಿಂದೂ ಮಹಾಸಭಾ ಪಶ್ಚಿಮಬಂಗಾಳದಲ್ಲಿ ತೀವ್ರವಾಗಿ ಕ್ರಿಯಾಶೀಲವಾಗಿತ್ತು. ಮುಸ್ಲಿಂ ಸಂಘಟನೆಗಳು ಇದ್ದವು. ಆದರೆ ಇಂದು ಪಶ್ಚಿಮಬಂಗಳ ವಿಧಾನಸಭೆಯಲ್ಲಿ ಕೋಮುವಾದಿ ಶಕ್ತಿಗಳಿಗೆ ಸ್ಥಾನ ಸಂಪಾದಿಸಲು ಸಾಧ್ಯವಾಗಿಲ್ಲ. ಯಾವುದೇ ರೀತಿಯ ಕೋಮು ಹಿಂಸೆಯನ್ನು ಎಡರಂಗದ ಸರ್ಕಾರ ಸಹಿಸುವುದಿಲ್ಲ. 1984ರಲ್ಲಿ ಇಂದಿರಾಗಾಂಧಿಯವರ ಹತ್ಯೆಯಾದ ನಂತರ ಸಿಖ್‌ರ ಮೇಲಾದ ದಾಳಿಗಳನ್ನು ತಡೆಯಲು ಅಂದಿನ ಮುಖ್ಯಮಂತ್ರಿ ಕಾಂ: ಜ್ಯೋತಿಬಸು ಪೋಲೀಸರಿಗೆ ಸ್ಪಷ್ಟ ನಿರ್ದೇಶನವನ್ನು ನೀಡಿದ್ದರು. ಗಲಭೆಕೋರರು ರಸ್ತೆಗಳಲ್ಲಿ ಕಂಡರೆ ಗುಂಡು ಹಾರಿಸಿ ಎಂದು ಹೇಳಿದ್ದರು.

ಇವರು ಯಾರು?

ಭಯೋತ್ಪಾದನೆಯನ್ನು ಮುಸ್ಲಿಂ ಸಮುದಾಯದ ಜೊತೆ ಸಮೀಕರಿಸುತ್ತಿದ್ದಾಗ ಯಾವುದೇ ಹಿಂದೂ ಭಯೋತ್ಪಾದಕನಾಗಲು ಸಾಧ್ಯವಿಲ್ಲ ಎಂದು ಹೇಳಲಾಗುತ್ತಿತ್ತು. ಆದರೆ ಇವತ್ತು ಮಾಲೇಗಾಂವ್ ಬಾಂಬ್ ಸ್ಫೋಟದಲ್ಲಿ ಆರು ಜನ ಹತ್ಯೆಗೀಡಾದ ನಂತರ ಹಿಂದೂ ಭಯೋತ್ಪಾದನೆಯ ಚರ್ಚೆಯಾಗುತ್ತಿದೆ. ಎರಡು ವರ್ಷಗಳ ಹಿಂದೆಯೂ ಬಾಂಬ್ ಸ್ಫೋಟವಾಗಿತ್ತು. ಆಯ್ದ ಮುಸ್ಲಿಂ ವಸತಿ ಪ್ರದೇಶಗಳನ್ನು ಗುರಿ ಮಾಡಲಾಗುತ್ತದೆ. ನಾಂದೇಡ್‌ನಲ್ಲಿ ಬಾಂಬ್ ತಯಾರಿಸುತ್ತಿದ್ದ ಸಂದರ್ಭದಲ್ಲಿ ಇಬ್ಬರು ಆರೆಸ್ಸಸ್ ಕಾರ್ಯಕರ್ತರು ಸತ್ತಿದ್ದರು ಎನ್ನುವ ಕುರಿತು ಪೋಲೀಸ್ ದಾಖಲೆಗಳು ಲಭ್ಯವಿದೆ. ಪರಭಾರೆ, ಜಿಲ್ಲಾಗಳಲ್ಲೂ ಇದೇ ರೀತಿ ಘಟನೆಗಳು ನಡೆದ ವರದಿ ಇದೆ. ಪೋಲೀಸರು ಸಕಾಲದಲ್ಲಿ ಮಧ್ಯಪ್ರವೇಶ ಮಾಡದಿರುವ ಬಗ್ಗೆಯೂ ಪ್ರಸ್ತಾಪವಿದೆ. ಮಾಲೆಗಾಂವ್ ಘಟನೆಗೆ ಸಂಬಂಧಿಸಿದಂತೆ ಸೇನೆಯ ಒಬ್ಬ ಲೆಫ್ಟನೆಂಟ್ ಕರ್ನಲ್ ಹಾಗೂ ನಿವೃತ್ತ ಮೇಜರ್‌ನನ್ನು ಬಂಧಿಸಲಾಗಿದೆ. ನಾವು ಹಿಂದೂ, ಮುಸ್ಲಿಂ ಭಯೋತ್ಪಾದನೆಯಲ್ಲಿ ವಿಶ್ವಾಸವಿಡುವುದಿಲ್ಲ. ಅಸ್ಸಾಂನಲ್ಲಿ ಜನಾಂಗೀಯ ವಾದದ ಭಯೋತ್ಪಾದನೆ ಚಟುವಟಿಕೆಗಳು ನಡೆಯುತ್ತವೆ. ದೇಶದ ಐಕ್ಯತೆ ಹಾಗೂ ಸಮಗ್ರತೆಗೆ ಧಕ್ಕೆ ತರುವ ಭಯೋತ್ಪಾದನೆಯ ಹಲವಾರು ಪ್ರಕಾರಗಳು ಇಂದು ವಿಜೃಂಭಿಸುತ್ತವೆ. ನಾವು ಕೋಮುವಾದ ಬೇಡ ಎನ್ನುವಾಗಲೇ ಭಯೋತ್ಪಾದನೆಯೂ ಬೇಡ ಎಂದು ಹೇಳುತ್ತೇವೆ. ಸಮಾಜದಲ್ಲಿ ವಿಧಿವಿಧಾನಗಳಲ್ಲಿ ಕೋಮುವಾದದ ವಿರುದ್ಧ ಸಂಘರ್ಷ ಒಳಗೊಳ್ಳಬೇಕು. ಆರೆಸ್ಸೆಸ್ ಧಾರ್ಮಿಕ ಸಂಸ್ಥೆಗಳನ್ನು ವಶಪಡಿಸಿಕೊಳ್ಳುತ್ತಿದೆ. ಕ್ಯಾಥೋಲಿಕ್ ಚರ್ಚ್ ಕೂಡ ಆರೆಸ್ಸೆಸ್, ಇನ್ನಿತರ ಹಿಂದೂ ನಾಯಕರ ಜೊತೆ ಮಾತನಾಡಲು ತವಕಿಸುತ್ತಿದೆ. ಈ ಸಂಘಟನೆಗಳು, ವ್ಯಕ್ತಿಗಳು ಹಿಂದೂ ಧರ್ಮವನ್ನು ಪ್ರತಿನಿಧಿಸುವುದಿಲ್ಲ ಎನ್ನುವುದನ್ನು ಕ್ಯಾಥೋಲಿಕ್ ಚರ್ಚ್ ತಿಳಿದುಕೊಳ್ಳಬೇಕೆಂದು ಕಾಂ:ಕಾರಟ್ ಹೇಳಿದರು. **ಹಿಂದುತ್ವ ಕೋಮು ಪ್ರಕ್ಷೋಭೆಯ ವಿರುದ್ಧ ಹಿಂದೂಗಳು ಸೆಟೆದು ನಿಲ್ಲಬೇಕು. ಮುಸ್ಲಿಮರು ಜೆಹಾದ್ ಕರೆಯ ವಿರುದ್ಧ ಪ್ರತಿಭಟಿಸಬೇಕು. ಕ್ರೈಸ್ತರು ತೀವ್ರಗಾಮಿ ಸಿದ್ಧಾಂತದ ವಿರುದ್ಧ ಧ್ವನಿ ಎತ್ತಬೇಕು. ಇಂದು ಜನತೆ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಕಾರ್ಷಿಕ ಬಿಕ್ಕಟ್ಟಿನಿಂದಾಗಿ ರೈತಾಪಿ ಸಮುದಾಯ ಸಮಸ್ಯೆಯ ಸುಳಿಯಲ್ಲಿ ಸಿಲುಕಿದೆ. ಜಾಗತಿಕ ಬಿಕ್ಕಟ್ಟಿನಿಂದಾಗಿ ಉದ್ಯೋಗಗಳು ಕಳೆದುಹೋಗುತ್ತಿವೆ. ಇಂತಹ ಸಂದರ್ಭವನ್ನು ಎದುರಿಸಲು ಜಾತಿ, ಧರ್ಮಗಳನ್ನು ಮೀರಿದ ಐಕ್ಯತೆ ವರ್ತಮಾನದ ಅವಶ್ಯಕತೆಯಾಗಿದೆ** ಎಂದು ಕಾಂ:ಕಾರತ್ ಹೇಳಿದರು. ಸಾಮಾಜಿಕ-ಆರ್ಥಿಕ ಬದಲಾವಣೆಗೆ ಇದು ಆಗಲೇ ಬೇಕು ಎಂಬುದು ಕಾಂ: ಕಾರಟ್‌ರ ಸ್ಪಷ್ಟ ನುಡಿ. ಕೋಮುವಾದ ಐಕ್ಯತೆಗೆ ಭಂಗ ತರುತ್ತದೆ. ಪ್ರತಿಗಾಮಿ ಶಕ್ತಿಗಳು ಸೌಹಾರ್ದತೆಯ ಸ್ವಾಸ್ಥ್ಯವನ್ನು ಕೆಡಿಸುತ್ತವೆ. ದುಡಿಯುವ ವರ್ಗದ ಪರವಾಗಿ ಮುಂದಡಿ ಇಡುವ ಕಾರ್ಮಿಕ, ರೈತ ಹಾಗೂ ಇನ್ನಿತರ ಸಾಮೂಹಿಕ ಸಂಘಟನೆಗಳು ಕೋಮುವಾದದ ಅಪಾಯವನ್ನು ನಿರ್ಲಕ್ಷಿಸುತ್ತಿವೆ. ಎಲ್ಲೆಲ್ಲಿ ಬಿಜೆಪಿಯು ಅಧಿಕಾರಕ್ಕೆ ಬಂದಿದೆಯೋ ಅಲ್ಲಿ ಪ್ರತಿಗಾಮಿ ನೀತಿಗಳನ್ನು ಅನುಸರಿಸುತ್ತಿದೆ. ಐಕ್ಯತೆಬೇಕು. ಆದರೆ ಅದನ್ನು ಕಟ್ಟುವುದು ಹೇಗೆ ಎನ್ನುವ ಪ್ರಶ್ನೆಗೆ ಕಾಂ:ಕಾರಟ್ ಉತ್ತರಿಸಿದರು. ಜಾತ್ಯಾತೀತತೆಗೆ ಬದ್ಧವಾದ ರಾಜಕೀಯ ಪಕ್ಷಗಳು, ನಾಗರೀಕ ಸಮಾಜದ ಸಂಘಟನೆಗಳು, ಬುದ್ಧಿಜೀವಿಗಳು ಒಂದಾಗಿ ಸಂಯುಕ್ತ ಚಳುವಳಿಯನ್ನು ಕಟ್ಟಬೇಕು. ಇನ್ನಿತರ ಈ ಚಳುವಳಿಯ ಭಾಗವಾಗಬೇಕು. ರಾಷ್ಟ್ರ ಮಟ್ಟದಲ್ಲಿ ಈ ರೀತಿಯ ಪ್ರಯತ್ನಗಳನ್ನು ನಮ್ಮ ಪಕ್ಷ ಪ್ರಾರಂಭಿಸಿದೆ. ದೆಹಲಿಯಲ್ಲಿ ನಡೆದ ಸಮಾವೇಶದಲ್ಲಿ ಭಾಗ ವಹಿಸಿದ್ದೆ. ಈಗ ರಾಷ್ಟ್ರ ರಾಜಧಾನಿಯಲ್ಲಿ ಕೋಮುವಾದ, ಭಯೋತ್ಪಾದನೆ ವಿರೋಧಿಸಿ ಒಂದು ಬೃಹತ್ ನಡೆಯನ್ನು ಸಂಘಟಿಸಲಾಗುತ್ತಿದೆ ಎಂದು ಕಾಂ.ಕಾರಟ್ ನುಡಿದು ಪಕ್ಷದ ರಾಜ್ಯಸಮಿತಿಯನ್ನು ಈ ಸಂದರ್ಭದಲ್ಲಿ ಅಭಿನಂದಿಸಿದರು.

ಜಾಥಾ ಯೋಜನೆ

ನಂತರ ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ.ವಿ.ಜಿ.ಕೆ. ನಾಯರ್ ಕೋಮುವಾದವನ್ನು ವಿರೋಧಿಸುವಲ್ಲಿ ಪಕ್ಷದ ರಾಜ್ಯಸಮಿತಿಯು ಸ್ಪಷ್ಟ ನಿಲುವನ್ನು ಹಾಗೂ ಕೋಮುವಾದ ವಿರೋಧ ಪ್ರಚಾರದ ಮುಂದುವರಿಕೆಯಾಗಿ ಹಮ್ಮಿಕೊಳ್ಳಲಾಗುತ್ತಿರುವ ಜಾತಾಗಳ ಬಗ್ಗೆ ವಿವರ ನೀಡಿದರು.

ಅನಾಗರೀಕ ಸರ್ಕಾರ

ರಾಜ್ಯದ ಬಿಜೆಪಿ ಸರ್ಕಾರವನ್ನು ಅನಾಗರಿಕ ಸರ್ಕಾರ ಎಂದು ಜರಿದ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಮಾಜಿ ಶಾಸಕರೂ ಆದ ಕಾಂ.ಜಿ.ವಿ.ಶ್ರೀರಾಮರೆಡ್ಡಿಯವರು ಪಕ್ಷದ ಕಾರ್ಯಕ್ರಮಗಳಲ್ಲಿ ಜನರ ಹೆಚ್ಚಿನ ಸಹಭಾಗಿತ್ವವನ್ನು ಕೋರಿದರು.

ನಗರದ ಅಲ್ಪಸಂಖ್ಯಾತ ಸಮುದಾಯದ ಮುಖಂಡರೂ ಮೈಸೂರಿನ ಕ್ರೈಸ್ತ ಧರ್ಮಾಧಿಕಾರಿಗಳಾದ ಬಿಶಪ್ ವಾಳಪಿಳ್ಳೆ, ಬುದ್ಧಿಜೀವಿಗಳು, ಚಿಂತಕರು, ಲೇಖಕರು, ರೈತ ಮುಖಂಡರು, ಮಧ್ಯಮ ವರ್ಗದ ನೌಕರರು, ಕಾರ್ಖಾನೆಗಳ ಕಾರ್ಮಿಕರು, ಪತ್ರಿಕಾ ಸಂಪಾದಕರು ಭಾಗವಹಿಸಿದ್ದ ಈ ಯಶಸ್ವೀ ಸಭೆಯ ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರಾದ ಕಾಂ.ಕೆ.ಬಸವರಾಜ ವಹಿಸಿದ್ದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ.ಎ.ಜಗನ್ನಾಥ್ ಸ್ವಾಗತ ಕೋರಿ ಇನ್ನೋರ್ವ ಜಿಲ್ಲಾ ಸಂಘಟನಾ ಸಮಿತಿ ಸದಸ್ಯ ಕಾಂ.ವಿ.ಬಸವರಾಜು ವಂದನಾರ್ಪಣೆ ಮಾಡಿದರು.

ವರದಿ : ಎನ್.ವಿಜಯಕುಮಾರ್

JANASHAKTHI KANNADA VARA PATRIKE NOVEMBER 23, 2008 Price : Rs. 5/-No. KARKAN /2006/17926 Postal Reg. No. RNP/KA/BGS/2078/2007-09



ಸ್ಲಂ ಬಾಲ : ವಸ್ತುನಿಷ್ಟತೆಯತ್ತ ತುಡಿತ - ಚಿಕಿತ್ಸಕ ದೃಷ್ಟಿಯ ಕೊರತೆ

ದೃಶ್ಯಾವಳಿ ಒಂದು : ಒಂದಷ್ಟು ರೌಡಿಗಳನ್ನು ಹಿಡಿದುಕೊಂಡು ಬೆಂಗಳೂರಿನ ಹೊರ ವಲಯಕ್ಕೆ ಕರೆ ತಂದುಬಿಡುವ ಪೊಲೀಸರು ಒಂದು ವರ್ಷ ಮತ್ತೆ ಬೆಂಗಳೂರಿನ ಕಡೆ ತಲೆ ಹಾಕಬಾರದೆಂದು ಗಡಿಪಾರು ಮಾಡಿ ಅಟ್ಟುತ್ತಾರೆ. ಹೀಗೆ ಗಡಿಪಾರಾಗುವ ಪುಡಿ ರೌಡಿಗಳ ಪೈಕಿ ಒಬ್ಬ ಸ್ಲಂಬಾಲ. ಬೆಂಗಳೂರಿಗೆ ಬೆನ್ನು ತಿರುಗಿಸಿ ಒಡುವ ಇತರ ರೌಡಿಗಳಿಗೆಲ್ಲಾ ಹಿಂದೆ ಪೊಲೀಸ್ ಲಾಠಿಯ ಲಾತ ಬಿದ್ದರೆ, ಬಾಲನಿಗೆ ಮಾತ್ರ ಈ ಹೊಡೆತ ತಪ್ಪುತ್ತದೆ. ಪೊಲೀಸ್ ಅಧಿಕಾರಿ ಶಾಂತಾರಾಮ್ ಸಾಹೇಬರಿಗೆ ಅವನನ್ನು ಕಂಡರೆ ಏನೋ ಒಂಥರಾ ಪ್ರೀತಿ. 'ಎಲ್ಲಿಗೆ ಹೋಗ್ತಿಯಾ. ಎಲ್ಲಿ ಉಳ್ಕೋತೀಯ' ಅಂತ ಎಲ್ಲಾ ವಿಚಾರಿಸಿಕೊಳ್ಳುತ್ತಾರೆ.

ದೃಶ್ಯಾವಳಿ ಎರಡು : ಬಾಂಬೆಗೆ ಹೋದ ಬಾಲ ಉಳಿಯುವುದು ಬಾಲ್ಯ ಸ್ನೇಹಿತ ರಜ್ಜು ಜೊತೆಯಲ್ಲಿ. ಗಡಿಪಾರು ಆದೇಶ ಜಾರಿಯಲ್ಲಿರುವಾಗಲೇ ಬಾಲನನ್ನು ಗುಟ್ಟಾಗಿ ಕರೆಸುವುದು ಇದೇ ಪೊಲೀಸ್ ಅಧಿಕಾರಿ ಶಾಂತಾರಾಮ್, ಅದು ಒಂದು 'ಮುಖ್ಯವಾದ' ಕೆಲಸಕ್ಕಾಗಿ. ಈಗ ಬಾಲನ ಜೊತೆ ಗೆಳೆಯ ರಜ್ಜು ಕೂಡ ಬೆಂಗಳೂರಿಗೆ ಬಂದಿದ್ದಾನೆ. ಬಾಂಬೇ ಡಿಸ್ಕೋ ಥೆಕ್‌ನಲ್ಲಿ ಹಾಡುಗಾರ್ತಿ, ನೃತ್ಯಗಾರ್ತಿಯಾಗಿದ್ದು, ಅಲ್ಲಿನ ಯಾತನೆಗಳಿಂದ ರೋಸಿರುವ ಚಿಕ್ಕಮಗಳೂರಿನ ಮಲ್ಲಿಗೆ ಕೂಡ ಬಾಲನ ಹಿಂದೆ ಬೆಂಗಳೂರಿಗೆ ಬಂದಿದ್ದಾಳೆ. ಬಾಲನೊಂದಿಗೆ ಹೊಸ ಬದುಕು ಕಟ್ಟಿಕೊಳ್ಳುವ ಕನಸು ಅವಳದು. ಬಾಲ ಈಗ ಬೆಂಗಳೂರಲ್ಲಿ ಕದ್ದು ಮುಚ್ಚಿ ಓಡಾಡುತ್ತಿದ್ದಾನೆ. ಅವ್ವ ಪಾರ್ವತವ್ವನನ್ನು ನೋಡಲು ಆಗಾಗ ತನ್ನ ಸ್ಲಂಗೂ ಒಂದು ಹೋಗುತ್ತಾನೆ.

ದೃಶ್ಯಾವಳಿ ಮೂರು: ಕ್ಷೇತ್ರದ ಎಂ.ಎಲ್.ಎ.ಗೆ ಪ್ರತಿಸ್ಪರ್ಧಿಯೊಬ್ಬನನ್ನು ಹುಟ್ಟು ಹಾಕಲು ಯತ್ನಿಸಿದ್ದ ಕೇಬಲ್ ಮಂಜ ಹೆಣವಾದ. ಬಾಲ ಬೆಂಗಳೂರಿಗೆ ಬಂದ ಮುಖ್ಯವಾದ ಕೆಲಸ ಮುಗಿಯಿತು. ದೊಡ್ಡವರು ಅವನನ್ನು ಈಗ ಎದೆಯಲ್ಲಿ ಇಟ್ಟುಕೊಂಡಿದ್ದಾರೆ. ಬಾಲ ಈಗ ಸ್ಲಂ ಬಾಲನಲ್ಲ. ಬೆಂಗಳೂರು ಬಾಲ. ಅವನೀಗ 'ಬೆಳೆಯುತ್ತಿರುವ ಹುಡುಗ'. ಅವನು ದೊಡ್ಡವರ ಜೊತೆಗಾರ. ಬಾಲನ ಕೈ ಕುತ್ತಿಗೆ ತುಂಬಾ ಚಿನ್ನದ ಚೈನುಗಳು ಓಟಾಡಕ್ಕೆ ದೊಡ್ಡ ದೊಡ್ಡ ವಾಹನ. ಕೈ ತುಂಬಾ ದುಡ್ಡು.

ದೃಶ್ಯಾವಳಿ ನಾಲ್ಕು: ದೊಡ್ಡವರು ಚುನಾವಣೆಯಲ್ಲಿ ಮತ್ತೆ ಗೆದ್ದರು. ಬಾಲ ಅವರ ಗೆಲುವಿನಲ್ಲಿ ಒಬ್ಬ ಪ್ರಮುಖ ಪಾತ್ರಧಾರಿ. ಗಡಿಪಾರು ಶಿಕ್ಷೆ ತೆಗೆಸುವ ಕಡೆಗೆ, ತನ್ನ ಮದುವೆ ಕಡೆಗೆ ಈಗ ಬಾಲನ ಗಮನ. ದೊಡ್ಡವರಿಗೆ ಬಾಲನ ಸ್ಲಂ ಮೇಲೆ ಕಣ್ಣು.



ಚುನಾವಣೆ ಮುಂಚೆಯೇ ಸ್ಲಂ ಜಾಗದ ಬಗ್ಗೆ ಅವರು 'ಡೀಲ್' ಮಾಡಿಬಿಟ್ಟಿದ್ದಾರೆ.

ಬಾಲನಿಗೆ ಸಿಟ್ಟು, ದೊಡ್ಡವರನ್ನು "ತುಕ್ಕು ಹಿಡಿದ ಮಚ್ಚಲ್ಲಿ ಕಚ ಕಚ..." ಇಂತಹ ಅವನ ಸಿಟ್ಟಿನ ಮಾತು ದೊಡ್ಡವರಿಗೆ ಕಿವಿಗೆ ಬೀಳುತ್ತದೆ.

ಆ ರಾತ್ರಿ, ಶಾಂತಾರಾಮ್ ಸಾಹೇಬರು ಯಾವಾಗಲೂ ಸಿಗುವ ಸ್ಮಶಾನದ ಬಳಿ ಬಾಲ, ರಜಾಕ್ ಇಬ್ಬರು ಹೆಣವಾಗಿ ಬೀಳುತ್ತಾರೆ. ಮರುದಿನ ಟಿ.ವಿ.ಯಲ್ಲಿ ಸುದ್ದಿ. ಗಡಿಪಾರು ಉಲ್ಲಂಘಿಸಿ ಬೆಂಗಳೂರಿಗೆ ಬಂದಿದ್ದ ಹಾಗೂ ಮಾರಕಾಸ್ತ್ರಗಳನ್ನು ಹೊಂದಿದ್ದ ರೌಡಿಗಳಿಬ್ಬರು ಪೊಲೀಸರ ಎನ್‌ಕೌಂಟರ್‌ನಲ್ಲಿ ಸತ್ತಿದ್ದಾರೆ.

ಇದಿಷ್ಟು ಸ್ಲಂಬಾಲನ ಸ್ಥೂಲ ಕತೆ. ನಡು ನಡುವೆ ಪಾರ್ವತಮ್ಮನ ಬೈಯ್ಗಳ, ಪ್ರೀತಿ... ಬಾಲ-ಮಲ್ಲಿಗೆಯರ ಎರಡು ಹಾಡು, ಪ್ರೀತಿ... ಹೀಗೆ.

ಚಿತ್ರದ ಕತೆ, ನಿರೂಪಣೆ, ನೇರವಾಗಿದೆ. ಸರಳವಾಗಿದೆ. ರಾಜಕಾರಣಿಗಳು, ಪಟ್ಟಭದ್ರ ಹಿತಾಸಕ್ತಿಗಳು, ಭ್ರಷ್ಟ ಪೊಲೀಸ್ ವ್ಯವಸ್ಥೆಗಳ ಶಾಮೀಲುತನ, ಸ್ಲಂ ಅನ್ನು, ಸ್ಲಂ ಜನರನ್ನು ಬಳಸಿ ಕೊಳ್ಳುವ ಪರಿ ಇಷ್ಟನ್ನು ಚಿತ್ರ ಪರಿಣಾಮಕಾರಿಯಾಗಿ ಪ್ರೇಕ್ಷಕರ ಮುಂದಿಟ್ಟಿರುವುದು ಈ ಚಲನಚಿತ್ರ ಯಶಸ್ಸು.

ಅಗ್ನಿ ಶ್ರೀಧರ್‌ರವರ 'ದಾದಾಗಿರಿಯ ದಿನಗಳು' ಆಧರಿಸಿದ, ಅವರೇ ಚಿತ್ರಕತೆ, ಸಂಭಾಷಣೆ ಬರೆದ ಈ ಸಿನಿಮಾಗೆ ನಿರ್ದೇಶಕಿ ಸುಮನಾ ಕಿತ್ತೂರು. ಅಭಿನಯ, ಛಾಯಾಗ್ರಹಣ, ಸಂಗೀತ ಮುಂತಾದ ವಿಷಯದಲ್ಲಿ ಚಿತ್ರತಂಡದ ಪರಿಶ್ರಮ ಎದ್ದು ಕಾಣುತ್ತದೆ.

ಕೊರತೆ ಏನು : ಸ್ಲಂ ಹುಡುಗರು ದುಷ್ಟ ರಾಜಕಾರಣಿ, ಪೊಲೀಸರ ಜಾಲದಲ್ಲಿ ಸಿಲುಕಿ ಬಲಿಪಶುಗಳಾಗುವುದನ್ನು ಚಿತ್ರ ಇಲ್ಲಿ ನಿರೂಪಿಸಿದೆ. ಆದರೆ ಒಬ್ಬ ರಾಜಕಾರಣಿ, ಒಬ್ಬ ಪೊಲೀಸ್ ಅಧಿಕಾರಿ, ಭ್ರಷ್ಟನಾಗುವಂತೆ ಕ್ರಿಮಿನಲ್ ಆಗುವಂತೆ ಮಾಡುವ ವ್ಯವಸ್ಥೆಯ ಕುರಿತ ಒಳನೋಟವನ್ನು ಮತ್ತು ನಿಜವಾದ ಜನಪರ ಕಾರ್ಯಕ್ರಮವಿಲ್ಲದೇ, ನಿಜವಾದ ಜನಬೆಂಬಲವಿಲ್ಲದೆ ಅಧಿಕಾರವನ್ನು ಗಳಿಸುವ ಮತ್ತು ಅದನ್ನು ನಿಭಾಯಿಸುವ ಬಂಡವಾಳಶಾಹಿ ರಾಜಕಾರಣ ಮತ್ತು ರಾಜಕೀಯ ವ್ಯವಸ್ಥೆಯ ಕುರಿತು ಸೂಚ್ಯವಾಗಿಯಾದರೂ, ಸೂಕ್ಷ್ಮವಾಗಿಯಾದರೂ ಸಿನಿಮಾದಲ್ಲಿ ನಿರೂಪಿಸುವುದು ಸಾಧ್ಯವಿರಲಿಲ್ಲವೇ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ? ಈ ಜವಾಬ್ದಾರಿಯನ್ನು ಚಿತ್ರತಂಡ ಪ್ರೇಕ್ಷಕರಿಗೆ ಬಿಟ್ಟಿದೆ.

ಇದೆಂಥಾ ವಿಮರ್ಶೆ !!

ಸ್ಲಂಬಾಲ ಕುರಿತು ಹಲವು ವಿಮರ್ಶೆಗಳು ಬಂದಿವೆ. ಅವುಗಳಲ್ಲಿ 'ಗೌರಿ ಲಂಕೇಶ್' ಪತ್ರಿಕೆಯಲ್ಲಿ, 'ಸ್ಲಂಬಾಲ' ಕುರಿತು ಬರೆದಿರುವು ದನ್ನು ಸ್ವಲ್ಪ ವಿಶೇಷವಾಗಿ ಗಮನಿಸಬೇಕಿದೆ. ಸಿನಿಮಾವನ್ನು ಒಂದು ಡಾಕ್ಯುಮೆಂಟರಿ ಎಂದು ಬರೆದಿರುವ ಪತ್ರಿಕೆ, 'ಕೊಲೆ ಮಾಡಿಯೂ ಕಾನೂನಿಗೆ ಮಂಕು ಬೂದಿ ಎರಚುವ ಬಗ್ಗೆ, ಹಡಬೆ ಹಣ ಸಂಪದಿಸುವ ದಾರಿಯ ಬಗ್ಗೆಯೂ (ಸಿನಿಮಾದಿಂದ) ಟ್ರೈನಿಂಗ್ ಪಡೆಯ ಬಹುದಾಗಿದೆ. ಸಮಾಜವಿರೋಧಿ ಚಟುವಟಿಕೆ ನಡೆಸುವ ಕ್ರಿಮಿಯೊಬ್ಬ ಹೀರೋನಂತೆ ಬಿಂಬಿಸಲ್ಪಡುತ್ತಾನೆ.. ಅಂತೆಲ್ಲಾ ವಿಮರ್ಶೆ ಸಾಗಿದೆ.

ಈ ರೀತಿಯ ವಿಮರ್ಶೆ ಓದಿದಾಗ ತತ್‌ಕ್ಷಣ ನೆನಪಾಗುವುದು. ಮೊನ್ನೆ ಮೊನ್ನೆ 'ಜೋಗಿ' ಸಿನಿಮಾ ಬಂದಾಗ ಆ ಬಗ್ಗೆ ಇದೇ ಪತ್ರಿಕೆ ಬರೆದ ವಿಮರ್ಶೆ.

ಜೋಗಿ ಒಂದು ಪಕ್ಕಾ ವ್ಯಾಪಾರಿ ಚಿತ್ರ. ಅಸಂಭವನೀಯಗಳ ಕಂತೆ ಎನಿಸಿದಂಥಾ ಒಂದು ಕತೆ, ಅತಿರೇಕ ಎನಿಸುವ 'ಅಮ್ಮ' ಸೆಂಟಿಮೆಂಟ್, ಐಟಂ ಸಾಂಗ್ ಮಸಾಲೆ, ಸಿನಿಮೀಯ ಪ್ರೀತಿ ಬಡಿದಾಟ, ರಕ್ತಪಾತ ಕೊಲೆಗಳ ಸಾಲು ಸಾಲು, ರೌಡಿಲೋಕದ ವೈಭವೀಕರಣ ಎಲ್ಲಾ ಇದ್ದ ಜೋಗಿ ಸಿನಿಮಾ ಬಗ್ಗೆ ಇಂಥಾ ವಿಮರ್ಶೆ ಅನ್ನುವುದೇ ಗೌರಿ ಲಂಕೇಶನಲ್ಲಿ ಕಾಣಲಿಲ್ಲ, 'ಎಲ್ಲೋ ಜೋಗಪ್ಪ' ಹಾಡಲ್ಲಿ ಬರುವ ಯಾವುದೋ ಪೌರಾಣಿಕ ಪಾತ್ರದ ವೇಷದ ಬಗ್ಗೆ ಒಂದು ಹಗುರ ಟೀಕೆ. ಹಾಗೆ ಹೀಗೆ ಮಾಡಿ ಸಾಕಷ್ಟು ಹೊಗಳಿ ಪತ್ರಿಕೆ ಅಂದು 'ವಿಮರ್ಶೆ' ಮಾಡಿ ಕೈ ತೊಳೆದುಕೊಂಡಿತ್ತು.

ಸಮಾಜ ಕಂಟಕ ರೌಡಿಯೊಬ್ಬನನ್ನು ಹೀರೋನಂತೆ ಬಿಂಬಿಸಬಾರದು ಎಂಬುದು ಪತ್ರಿಕೆಯ ಪ್ರಾಮಾಣಿಕವಾದ ಕಾಳಜಿಯಾದರೆ ಆ ಮಾತನ್ನು ಒಪ್ಪಬಹುದು.

ಆದರೆ ಪತ್ರಿಕೆಯ ವಿಮರ್ಶೆಯಲ್ಲೇ ದ್ವಂದ್ವ ಇದೆ. ಇದೊಂದು 'ರೌಡಿ ಡ್ಯಾಕುಮೆಂಟರಿ' ಎನ್ನುತ್ತದೆ ವಿಮರ್ಶೆ. ಅಂದರೆ ಕತೆಯನ್ನು ಸಿನೀಮಯಗೊಳಿಸಲಿಲ್ಲ. ಅತಿರಂಜಿತ, ಉತ್ಪ್ರೇಕ್ಷಿತ ಮಾದರಿಗೆ ಸಿನಿಮಾವನ್ನು ಎಳೆದಾಡಿಲ್ಲ. ಅಂತಲ್ಲವೇ ಅದರ ಅರ್ಥ. ವಾಸ್ತವತೆಯಿಂದ ದೂರ ಸರಿಯಬಾರದೆನ್ನುವ ಪ್ರಯತ್ನವಂತೂ ಚಿತ್ರತಂಡಕ್ಕೆ ಇದ್ದಂತೆ ಕಾಣುತ್ತದೆ.

ಯಾವುದೇ ಪೂರ್ವಾಗ್ರಹಪೀಡಿತರಾಗದೇ ಸಿನಿಮಾ ನೋಡಿದವರಿಗೆ ನಮ್ಮ ಸ್ಲಂಗಳನ್ನು ಆವರಿಸಿರುವ ಸಾಮಾಜಿಕ ಪರಿಸ್ಥಿತಿಗಳಲ್ಲಿ ಸಿಲುಕಿ ಅಪರಾಧಿಗಳಾಗುವ ಹುಡುಗರ ಬಗೆಗೆ, ರಾಜಕೀಯ ಪಟ್ಟಭದ್ರರ ಪಿತೂರಿಗೆ ಬಲಿಪಶುಗಳಾಗುವ ಹುಡುಗರ ಬಗೆಗೆ ಮರುಕ ಹುಟ್ಟುವುದು ಬಿಟ್ಟರೆ ರೌಡಿಸಂ ಅನ್ನು ವೈಭವೀಕರಿಸುವುದು ಚಿತ್ರದ ಉದ್ದೇಶವಾದಂತೆ ಕಾಣುವುದಿಲ್ಲ.

ಹೀರೋಯಿಸಂ ಇಲ್ಲ

ಒಮ್ಮೆ ಕುಡಿದು ಹೆಚ್ಚಾದ ಬಾಲ ತಾನಿರುವ ಹಾಸ್ಟೆಲ್ ಕಟ್ಟಡದಿಂದ ಮೆಟ್ಟಿಲುಗಳ ಮೂಲಕ ಕೆಳಗಿಳಿಯುವುದು ಬಿಟ್ಟು ಮಂಗನಂತೆ ಇಲ್ಲದ ದಾರಿಯಲ್ಲದ ಗೋಡೆಯ ಮೇಲಿಂದ ಇಳಿಯ ಹೊರಟಾಗ ಅವನ ಸಂಗಡಿಗರು ಅವನನ್ನು ಸುರಕ್ಷಿತವಾಗಿ ಕರೆದೊಯ್ಯುತ್ತಾರೆ.

ಕೇಬಲ್ ಮಂಜನನ್ನು ಕೊಂದ ಬಾಲ 'ದೊಡ್ಡವರು' ಕೊಟ್ಟ ದುಡ್ಡಿನ ಕಂತೆಗಳಿರುವ ಬ್ಯಾಗನ್ನು ನಿರ್ಲಜ್ಜನಾಗಿ ಒಯ್ಯುತ್ತಾನೆ. ಅದರಲ್ಲಿ ಪೋಲೀಸ್ ಅಧಿಕಾರಿಗೊಂದು ಪಾಲು ಕೊಡಲೂ ಒಪ್ಪುತ್ತಾನೆ.

ರೌಡಿಸಂ ವೈಭವೀಕರಣ ಸಿನಿಮಾದ ಉದ್ದೇಶವಾದರೆ ಇನ್ನಷ್ಟು ರಕ್ತಪಾತ, ಕೊಲೆಗಳನ್ನು ತೆರೆಯ ಮೇಲೆ ತರಲು ಕತೆಯಲ್ಲೇ ದೊಡ್ಡ ಅವಕಾಶ ಇತ್ತು. ಚಿತ್ರಕ್ಕೆ ಬರೀ ವ್ಯಾಪಾರಿ ಉದ್ದೇಶ ಇದ್ದಿದ್ದರೆ ಬಾಂಬೆಯ ಡಿಸ್ಕೋಥೆಕ್‌ನಲ್ಲಿ ಮಲ್ಲಿಗೆ ಮತ್ತು ಜೊತೆಗಾರ್ತಿಯರ ಕುಣಿತ ಅನ್ನುವುದ ಈ ಚಿತ್ರದಲ್ಲಿರುವಂತೆ ಖಂಡಿತ ಇರುತ್ತಿರಲಿಲ್ಲ. ಚಿತ್ರದಲ್ಲಿ ಎರಡು ಹಾಡುಗಳಿದ್ದರೂ ಒಂದು ಸಣ್ಣ ಹೊಡೆದಾಟ ' ಒಂದು ಕೊಲೆಯ ದೃಶ್ಯವಿದ್ದರೂ ಬಹುತೇಕ ಯಾವುವೂ ವ್ಯಾಪಾರಿ ಸೂತ್ರಗಳ ಲೆಕ್ಕದಲ್ಲಿಲ್ಲ.

ಚಿತ್ರ ತಂಡವು ಚಿತ್ರಕತೆ ವಾಸ್ತವ ಘಟನೆಯಾದರಿಸಿದ್ದು, ಅಂತ ಘೋಷಿಸಿದೆ. ಅಲ್ಲದೆ ಎನ್‌ಕೌಂಟರ್ ನಡೆಸಿದ ಪೋಲೀಸ್ ಅಧಿಕಾರಿ 2005 ರಲ್ಲಿ ಸಿಸಿಬಿಯಲ್ಲಿ ಎಸಿಪಿಯಾಗಿದ್ದ, ಬಿ.ಕೆ.ಶಿವರಾಂ ಅಂತಲೂ, ರಾಜಕಾರಣಿ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್‌ಅಂತಲೂ ಹೇಳಿದೆ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF
INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at
BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH